Common administrative head for Medical and Public Health Departments.

Q.—49. Sri S. KARIAPPA (Virupakshipur).—

Will the Government be pleased to state :—

whether they are contemplating to have a common administrative head for Medical Department and Public Health Department ?

A.—Sri K. K. HEGDE (Minister for Health).—

No.

Minister's Statement.

†ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ (ಗ್ರಾಮ ಕೈಗಾರಿಕೆಗಳ ಶಾಖೆಯ ಉಪಮಂತ್ರಿಗಳು).—ಮೊನ್ನೆಯದಿವಸ ಕೇಳಿದ ಒಂದು ಪ್ರಶ್ನೆಗೆ. ರಾಜ್ಯದ ಖಾದಿ ಬೋರ್ಡಿನ ಚೇರ್‌ಮನ್ ಅವರು ಎಷ್ಟೆಷ್ಟು ಅಲೊಯನ್ಸ್ ಡ್ರಾ ಮಾಡಿದ್ದಾರೆ ಎಂಬ ಇನ್ಫರ್ ಮೇಷನ್ ಈ ಸಭೆಯ ಮುಂದೆ ಇಡಲಾಗುವದೆಂದು ಹೇಳಲಾಗಿತ್ತು. ಅದು ಈ ರೀತಿ ಇದೆ: ಮಾರ್ಚ್ 1958 ರಿಂದ ಫೆಬ್ರವರಿ 1960ರವರೆಗೆ 11,263 ರೂಪಾಯಿ 12 ನಯೆ ಪೈಸೆ ಅಡ್ವಾನ್ಸ್ ಡ್ರಾ ಮಾಡಿದ್ದಾರೆ. ಸಿಟಿಂಗ್ ಫೀಜು 1,608 ರೂಪಾಯಿ ಮತ್ತು ಟಿ. ಎ. 11,570 ರೂಪಾಯಿ 2 ನಯೆ ಪೈಸೆ ಇರುತ್ತದೆ.

Member's Representation.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಸ್ವಾಮಿ, ನಾನು ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ನಾವೆಲ್ಲರೂ ಮನೆಮಠ ಮಕ್ಕಳು ಮರಿ ಬಿಟ್ಟು ಇಲ್ಲಿಗೆ ಬಂದು ಬಹಳ ದಿವಸವಾಯಿತು. ಈ ತಿಂಗಳಿನಲ್ಲಿ 27, 28, 29ನೆಯ ತಾರೀಖಿಗೆ ರಜಾ ಇದೆ. ಪ್ರತಿ ವರ್ಷ ಬರತಕ್ಕ ಯುಗಾದಿ ದೊಡ್ಡ ಹಬ್ಬವಾಗಿದೆ. ಆದುದರಿಂದ ನಾವು ಹೆಚ್ಚು ದಿವಸ ಊರುಗಳಲ್ಲಿ ಇರುವುದಕ್ಕೆ ಅನುಕೂಲ ಮಾಡಿಕೊಡಲು, 26ನೆಯ ತಾರೀಖು ಮತ್ತು 30, 31ನೆಯ ತಾರೀಖಿನ ದಿವಸಗಳಲ್ಲಿ ಸಹ ಈ ಸಭೆಗೆ ರಜಾ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆಂದು ಅರಿಕೆ ಮಾಡಿಕೊಳ್ಳುತ್ತೇನೆ.

Sri B. D. JATTI.—For the convenience of the members coming from North Karnatak and other areas, it appears that the sessions should be held in the morning on Friday, the 25th and we will again meet on 1st of next month.

BUDGET ESTIMATES FOR 1960-61.

(General Discussion)

(Debate continued.)

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಕಳೆದ ಎರಡು-ಮೂರು ದಿವಸಗಳಿಂದ ಚರ್ಚಿಸಲ್ಪಡುತ್ತಿರುವ ಆಯವ್ಯಯ ಅಂದಾಜನ್ನು ಅವಲೋಕಿಸಿದಾಗ ನನಗೆ ಮೊದನೆಯದಾಗಿ ಎರಡು ಅಂಶಗಳು ಕಂಡುಬಂದುವು. ಅವು ಯಾವುವೆಂದರೆ, ಈ ಆಯವ್ಯಯ ಪಟ್ಟಿಯಲ್ಲಿ ಹೊಸದಾಗಿ ತೆರಿಗೆಯನ್ನು ವಿಧಿಸುವುದಕ್ಕೆ ಪ್ರಯತ್ನ ಮಾಡದಿರುವುದು ; ಎರಡನೆಯದಾಗಿ 300 ರೂಪಾಯಿಗಳಿಗಿಂತ ಕಡಮೆ ಸಂಬಳ ಸಿಕ್ಕುವ ನೌಕರರಿಗೆ ತಿಂಗಳಿಗೆ ಐದು ರೂಪಾಯಿಗಳಂತೆ ತಾತ್ಕಾಲಿಕ ಪರಿಹಾರವನ್ನು ಕೊಡುವುದಕ್ಕೆ ಉದ್ದೇಶಪಟ್ಟಿರುವುದು ಇದು ಸ್ವಾಗತಾರ್ಹ.

ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶ್ರೀನಿವಾಸಶೆಟ್ಟರು ಇದು ಜಿಪುಣರ ಆಯವ್ಯಯ ಪಟ್ಟಿಯೆಂದು ಹೇಳಿದರು. ನಾನು ಹೇಳುವುದಾದರೂ ಇಷ್ಟು: ಈ ಆಯವ್ಯಯಪಟ್ಟಿ ನಿಜವಾಗಿಯೂ ಆಶಾವಾದಿಗಿರತಕ್ಕ ನೈಜ ಚಿತ್ರವನ್ನು ತೋರಿಸುತ್ತದೆ. ಅದಕ್ಕೆ ಕಾರಣ ಇಷ್ಟೆ: ನಮ್ಮ ಆಸೆಆಕಾಂಕ್ಷೆಗಳು ಬೇಕಾದಷ್ಟಿದ್ದರೂ ಕೂಡ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಕೂಡ ಗಮನದಲ್ಲಿಟ್ಟು ನಮ್ಮ ಕೆಳ ದರ್ಜೆ ನೌಕರರಿಗೆ ಸೌಕರ್ಯಗಳನ್ನು ಕಲ್ಪಿಸುವುದು ನಮ್ಮ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ. ಹಾಗಿರುವಾಗ ಇರುವ ಹಣಕಾಸಿನ ಪರಿಸ್ಥಿತಿಯನ್ನು ಗಮನಿಸಿ ಐದು ರೂಪಾಯಿಗಳ ತಾತ್ಕಾಲಿಕ ಪರಿಹಾರವನ್ನು ಕೊಟ್ಟಿದ್ದಾರೆ. ಅಂದಮಾತ್ರಕ್ಕೆ ಅಷ್ಟರಲ್ಲೇ ನಿಲ್ಲುತ್ತದೆಯೆಂದು ನಾನಂತೂ ಭಾವಿಸುವುದಿಲ್ಲ. ಆದರೆ ಅದನ್ನು ಜನವರಿ ಒಂದರಿಂದ ಕೊಡಬೇಕು. ಕೊಡುವಾಗ ಬಾಂಡು ಅಥವಾ ಸರ್ಟಿಫಿಕೇಟ್ ರೂಪದಲ್ಲಿ ಮೂರು ತಿಂಗಳ ಹಣವನ್ನು ಕೊಡಬೇಕೆಂದು ಉದ್ದೇಶಪಟ್ಟಿದೆ. ಸಾಧ್ಯವಾದಷ್ಟು ಎಲ್ಲವನ್ನೂ ಹಣದ ರೂಪದಲ್ಲೇ ಕೊಡಲು ಪ್ರಯತ್ನಮಾಡಿದ್ದರೆ ಚೆನ್ನಾಗಿತ್ತು, ಸ್ವಲ್ಪವಾಗಿ ಕಂಡರೂ ತಮಗೆ ಅದೇ ದೊಡ್ಡದು, ಸಾಧ್ಯವಾದಷ್ಟು ಕೊಟ್ಟಿದ್ದಾರೆ ಎಂದು ಕೆಲವರು ಹೇಳಿದ್ದಾರೆ. ಹಾಗೆ ಮಾಡಬೇಕೆಂದು ಸೂಚನೆ ಮಾಡುತ್ತಿದ್ದೇನೆ.

ಈ ಆಯವ್ಯಯ ಪಟ್ಟಿ ಜಿಪುಣರು ತಯಾರುಮಾಡಿರುವುದಲ್ಲ. ಇದು ನಿಜವಾಗಿಯೂ ಕೂಡ ಆಶಾವಾದಿಯ ನೈಜವಾದ ಚಿತ್ರವನ್ನು ಪ್ರತಿಬಿಂಬಿಸುವುದು. ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ಐದು ಭಾಗಗಳಿಂದ ಬಂದ ಪ್ರದೇಶಗಳಲ್ಲಿ ಅನೇಕ ವಿಧವಾದ ಕಾನೂನುಗಳಿದ್ದವು. ಬೇರೆಬೇರೆರೀತಿಯಲ್ಲಿ ತೆರಿಗೆಗಳುಕೂಡ ಇದ್ದುವು. ಈ ಐದನೆಯ ಆಯವ್ಯಯ ಅಂದಾಜನ್ನು ಮಂಡಿಸುವಾಗ ಕಳೆದ ಎರಡು ವರ್ಷಗಳ ಲೆಕ್ಕದ ಆಧಾರದ ಮೇಲೆ ಪರಿಶೀಲಿಸಿದರೆ ಮಾತ್ರ ನಮ್ಮ ಹಣಕಾಸಿನ ಪರಿಸ್ಥಿತಿ ಸುಭದ್ರವಾಗಿದೆಯೇ ಇಲ್ಲವೇ ಎಂಬುದನ್ನು ತಿಳಿಸುವುದಕ್ಕೆ ಅವಕಾಶವಾಗುತ್ತದೆ ಎಂದು ತಾವು ಸೂಚಿಸಿದ್ದುದಾಗಿ ಹಣಕಾಸಿನ ಸಚಿವರು ಹೇಳಿದರು. ಈಗ ಕಳೆದ ಎರಡು ವರ್ಷಗಳ ಲೆಕ್ಕಗಳನ್ನು ನೋಡಿ ಈ ವರ್ಷ ನಮ್ಮ ಆದಾಯವನ್ನು ನೋಡಿದರೆ ಎಷ್ಟು ಉತ್ಪತ್ತಿ ಬರಬಹುದೆಂಬ ನೈಜವಾದ ಚಿತ್ರವು ಗೊತ್ತಾಗುತ್ತದೆ; ಉತ್ಪ್ರೇಕ್ಷಿತವಾದ ಅಂಕಿ ಅಂಶಗಳೇನೂ ಕಾಣುತ್ತಿಲ್ಲ. ಉಳಿತಾಯದ ಬಡ್ಜೆಟ್ ಅದರೂ

(ಶ್ರೀ ಬಿ. ರಾಚಯ್ಯ)

ಕೂಡ ಸಮಾಜಕ್ಕೆ ದೇಶದ ಸಾಧಾರಣ ಜನರಿಗೆ ಸಂಬಂಧಪಟ್ಟ ಇಲಾಖೆಗಳಿಗೆ ಸಾಕಾದಷ್ಟು ಹಣ ಒದಗಿಸಿದ್ದಾರೆ ಎಂದು ಹೇಳಬಹುದು. ಹೋದವರ್ಷ ಕೆಲವು ಇಲಾಖೆಗಳಲ್ಲಿ ಉಳಿತಾಯವಾಗಿದೆಯೆಂದು ಶ್ರೀ ವೈಕುಂಠ ಬಾಳಿಗರವರು ಮತ್ತು ಶ್ರೀ ಮಲ್ಲಾರಾಧ್ಯರವರು ಹೇಳಿದ್ದಾರೆ. ಅದಕ್ಕೆ ಕಾರಣ ಇಲಾಖೆಗಳಲ್ಲಿ ಅನೇಕ ವಿಧವಾದ ಅಡ್ಡಿಆತಂಕಗಳಿರುವುದು ಆದರೂ ವಿದ್ಯಾಭ್ಯಾಸ, ಆರೋಗ್ಯ,ಸಮಾಜಸುಧಾರಣೆ ಇಂಥ ಬಾಬುಗಳಿಗೆ ಒದಗಿಸಿರುವ ಹಣ ಸಕಾಲದಲ್ಲಿ ಸದ್ವಿನಿಯೋಗವಾಗಿ ದೇಶದ ಜನತೆಯ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಪ್ರಯತ್ನಮಾಡುತ್ತಾರೆಂದು ನಂಬಿದ್ದೇನೆ. ಅಡ್ಮಿನಿಸ್ಟ್ರೇಟಿವ್ ಸೈಡ್‌ನಲ್ಲಿ ಉಳಿತಾಯ ಮಾಡಲು ಪ್ರಯತ್ನಮಾಡಿಲ್ಲವೆಂದು ಕೆಲವರು ಟೀಕೆಮಾಡಿದರು. ಈಗ ಇಲಾಖೆಗಳಲ್ಲಿ ಸಿಬ್ಬಂದಿ ಹೆಚ್ಚಾಗಿದೆ, ಕಡಮೆ ಮಾಡುವುದಕ್ಕಾಗಲಿ, ಹೊಸದಾಗಿ ನೇಮಕ ಮಾಡುವುದಕ್ಕಾಗಲಿ ಸಾಧ್ಯವಾಗಿಲ್ಲ. ಅಭಿವೃದ್ಧಿ ಕಾರ್ಯಗಳಿಗಾಗಿ ಯೋಜನೆ ಕೈಕೊಂಡಾಗ ಸಿಬ್ಬಂದಿ ಹೆಚ್ಚು ಬೇಕಾಗುತ್ತದೆ. ದುಂದುವೆಚ್ಚವೆಲ್ಲಿದೆ ಅಲ್ಲಿ ಕಡಮೆ ಮಾಡಬೇಕೆಂಬುದನ್ನು ನಾನು ಒಪ್ಪುತ್ತೇನೆ, ಅದರಲ್ಲೂ ಮುಖ್ಯವಾಗಿ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಸಾಮಾನ್ಯವಾಗಿ ಲೀಕೇಜ್ ಇದೆ.

ಬಸ್ಸುಗಳಲ್ಲಿ ಓಡಾಡುವವರಿಗೆ ಅದು ಗೊತ್ತಾಗುತ್ತದೆ. ಬಸ್ಸುಗಳದರಗಳ ವಿಚಾರದಲ್ಲಿ ಸ್ಟೇಜ್ ಎಂದು ಮಾಡಿದ್ದಾರೆ. ಟಿಕೆಟ್ ಕೊಡುವಾಗ ಎಲ್ಲಿ ಯಾವ ಸ್ಟೇಜ್‌ನಲ್ಲಿ ಕೊಡಬೇಕೋ ಅಲ್ಲಿ ಕೊಡದೆ ಮುಂದಿನ ಸ್ಟೇಜ್‌ನಲ್ಲಿ ಕೊಡುತ್ತಿದ್ದಾರೆ. ಸೂಪರ್‌ವೈಜಿಂಗ್ ಸಿಬ್ಬಂದಿ, ಕಂಡಕ್ಟರುಗಳು ಮತ್ತು ಇಲಾಖೆಯಲ್ಲಿ ಕೆಲಸ ಮಾಡುವವರು ಎಲ್ಲಾ ಸೇರಿಕೊಂಡು ಈ ರೀತಿ ಮಾಡುತ್ತಿರುವಂತೆ ಜನರಿಗೆ ಭಾಸವಾಗುತ್ತಿದೆ. ಜೊತೆಗೆ ಕೊಂಡುಕೊಳ್ಳುವ ಛಾಸಿಸ್, ಸಲಕರಣೆಗಳು ಮುಂತಾದುವನ್ನು ಸರಿಯಾದ ರೀತಿಯಲ್ಲಿಟ್ಟುಕೊಳ್ಳದೆ ಬಸ್ಸುಗಳು ಹಾಳಾಗುತ್ತಿವೆ. ಹೀಗಿರುವಾಗ ಅನ್ಯಾಯವಾಗಿ ಈ ರೀತಿ ಸರ್ಕಾರದ ಹಣ ವ್ಯಯವಾಗುವುದಕ್ಕೆ ಅವಕಾಶ ಕೊಡುವುದಾದರೆ ಹೊಸದಾಗಿ ಬಸ್‌ಪ್ರಯಾಣಿಕರ ಛಾರ್ಜನ್ನು ಹೆಚ್ಚಿಸಲು ಪ್ರಯತ್ನ ಮಾಡುವುದರಲ್ಲಿ ಯಾವ ನ್ಯಾಯವಿದೆ ಅನ್ನಿಸುತ್ತದೆ. ದೇಶದಲ್ಲಿನ ಉತ್ಪತ್ತಿ ಹೆಚ್ಚಬೇಕೆಂದು ಹೇಳುವುದನ್ನು ಒಪ್ಪುತ್ತೇನೆ. ಆದರೆ ತೆರಿಗೆಯನ್ನು ಕೊಡಲು ಯಾರಿಗೆ ಸಾಧ್ಯವಿದೆಯೋ ಅಂಥವರ ಮೇಲೆ ತೆರಿಗೆ ಹಾಕುವುದನ್ನು ನಾನು ಒಪ್ಪುತ್ತೇನೆ. ತೆರಿಗೆ ಹಾಕುವಾಗ ಸಾರ್ವಜನಿಕರ ಸೌಕರ್ಯ ನೋಡದೆ ವಿಲೀನೀಕರಣವಾದ ಪ್ರದೇಶದಲ್ಲಿ ಹೆಚ್ಚುದರವಿದೆ ಎಂದು ಏಕರೂಪಕ್ಕೆ ತರುವ ದೃಷ್ಟಿಯಿಂದ ದರವನ್ನು ಏರಿಸುವುದು ಸರಿಯೆ? ಸಂಬಳ ಸಾರಿಗೆ ಹೆಚ್ಚಾಗಿದೆ, ಇನ್ನೂ ಹೆಚ್ಚುಮಾಡುತ್ತಿದ್ದೇವೆ, ಸಾರ್ವಜನಿಕ ಕೆಲಸಕಾರ್ಯವಾಗಬೇಕು ಎಂದು ವಾದ ಮಾಡಬಹುದು. ಆದರೆ ನೀವು ಹೆಚ್ಚಿನ ದರ ಮಾಡಿ ಒಂದು ಮೈಲಿಗೆ ಒಂದೂಕ್ಕಾಲು ರೂಪಾಯಿನಂತೆ ಉತ್ಪತ್ತಿಯಾಗುತ್ತಿದ್ದುದು ಈಗ 12 ಆಣೆ ಅಥವಾ 13 ಆಣೆ ಕೂಡ ಮೈಲಿಗೆ ಉತ್ಪತ್ತಿಯಾಗುತ್ತಿಲ್ಲ. ಈಗ ಬಸ್ಸುಗಳು ಖಾಲಿ ಹೋಗುವ ಪರಿಸ್ಥಿತಿ ಇದೆ. ಸರಕಾರಿ ಬಸ್ಸಿಗೆ ಹಿಂದೆ ಮುಂದೆ ಓಡಾಡುವ ಪ್ರೈವೇಟ್ ಬಸ್ಸುಗಳಲ್ಲಿ ಜನ ಓಡ್ಡಾಡುವ ಪರಿಸ್ಥಿತಿ ಇದೆ. ನಾನು ನ್ಯಾಷನಲೈಸೇಷನ್ ಪಾಲಿಸಿಗಳಿಗೆ ವಿರೋಧವಾಗಿಲ್ಲ. ನಿಜವಾಗಿ, ಟ್ರಾನ್ಸ್‌ಪೋರ್ಟು ಕೆಲವು ಬಂಡವಾಳಸ್ಥರ ಕೈಯಲ್ಲಿ ಇದೆ. ಹಿಂದೆ ಅವರ ಕೈಯಲ್ಲಿ ಸೇರುವುದಕ್ಕೆ ಅವಕಾಶವಾಗಿತ್ತು. ಏಕೆಂದರೆ ಅವರ ಕೈಯಲ್ಲಿ ಹಣ ಕೇಂದ್ರೀಕೃತವಾಗಿತ್ತು. ನಮ್ಮ ವ್ಯವಸ್ಥೆಯಲ್ಲಿ ಏನೋ ತೊಡಕಿದೆ. ಅದನ್ನು ಸರಿಪಡಿಸಬೇಕು. ಲೀಕೇಜ್ ಆಗದ ರೀತಿಯಲ್ಲಿ ಜನಸಾಮಾನ್ಯರಿಗೆ ನಮ್ಮ Socialistic Pattern of Society ಉದ್ದೇಶಕ್ಕೆ ಅನುಗುಣವಾಗಿ, ಬಡಜನರ ತಲೆಯ ಮೇಲೆ ನೇರವಾದ ತೆರಿಗೆ ಹಾಕುವುದು ನ್ಯಾಯವಲ್ಲ. ಇದನ್ನು ಪುನರ್ವಿಮರ್ಶೆ ಮಾಡಬೇಕು. ಇಂಟಿಗ್ರೇಷನ್ ಆದಮೇಲೆ ಹಳೆ ಮೈಸೂರನ್ನು ಸೇರಿದ ಇತರ ಭಾಗಗಳ ಜನರು, ಅವರಿಗೆ ಮೈಸೂರಿಗೆ ಬಂದದ್ದರಿಂದ ಅನನುಕೂಲವಾಯಿತು ಎಂದು ಹೇಳಿ ಈ ಅಂಶದಿಂದ ಅವಕಾಶವಾಗುತ್ತದೆ; ಇಂಟಿಗ್ರೇಟ್ ಆದದ್ದಕ್ಕೆ ಅವರಿಗೆ ರಿಲೀಫ್ ಕೊಡಬೇಕು. ಮೋಟಾರು ವಾಹನಗಳ ಪ್ರಯಾಣ ಮಾಡುವ ಪ್ಯಾಸೆಂಜರುಗಳ ಮೇಲೆ, ಸಾಮಾನುಗಳ ಮೇಲೆ ಶೇ॥ 10 ರಂತೆ ತೆರಿಗೆ ವಿಧಿಸಬೇಕೆಂದು ಇದ್ದರೆ, ಅದು ಅಪ್ರತ್ಯಕ್ಷವಾದ ತೆರಿಗೆಯಾದರೂ ಕೂಡ, ಒಂದು ರೀತಿಯಲ್ಲಿ ಈ ತೆರಿಗೆ ಜನಗಳ ಮೇಲೆ ಹೊರಿಸುವ ರೀತಿಯಲ್ಲಿಯೇ ಇದೆ.

2-30 P.M.

ಶ್ರೀ ಟಿ. ಮರಿಯಪ್ಪ.—ಟಿಕೆಟ್ ಫೇರ್ ಒಳಗೆ 10 ಪರ್ಸೆಂಟ್ ತೆರಿಗೆ ಗವರ್ನ್‌ಮೆಂಟಿನವರೂ ಕೊಡಬೇಕು, ಪ್ರೈವೇಟ್ ಆಪರೇಟರ್ಸ್ ಕೊಡಬೇಕು. Therefore maximum will not exceed. ಅದೇ ರೀತಿಯಾಗಿ ಬೊಂಬಾಯಿ, ಮದರಾಸು, ಆಂಧ್ರಪ್ರದೇಶ, ಮಧ್ಯಪ್ರದೇಶ, ಯು. ಪಿ., ಬಿಹಾರ್ ಎಲ್ಲಾ ಕಡೆಯೂ ಇದೆ. It will be within the maximum limit. It will not add to the fare.

ಶ್ರೀ ಬಿ. ರಾಚಯ್ಯ.—ಆ ರೀತಿ ಮಾಡಿ ಕೆಲವು ವ್ಯಕ್ತಿಗಳ ಕೈಗೆ ಕೈಗಾರಿಕೆ ಹೋಗದಿದ್ದರೆ ಆಯಿತು. ಸರ್ಕಾರಕ್ಕೆ ಬರುವ ಪಕ್ಷಕ್ಕೆ ಅದಕ್ಕೆ ನಾನು ಅನುಮೋದನೆ ಕೊಡುತ್ತೇನೆ. ಆದರೆ ಅದು ಸರಕಾರಕ್ಕೆ ಬರುತ್ತಿಲ್ಲ

Dr. A. R. KARISIDDAPPA (Arsikere).—I would like to know the opinion of the Hon'ble Member about the increase in the bus fare.

ಶ್ರೀ ಬಿ. ರಾಚಯ್ಯ.—ಹೆಚ್ಚಿಸಕೂಡದು. ಅದು ಹಳೆಯ ಮೈಸೂರಿನಲ್ಲಿರುವ ರೀತಿಯಲ್ಲಿರಬೇಕು. ಆ ರೀತಿ ಆದಾಯ ಹೆಚ್ಚಿಸಬೇಕೆಂದು ಇದ್ದರೆ, ಒಂದೆರಡು ಮಾರ್ಗಗಳನ್ನು ತಿಳಿಸುತ್ತೇನೆ. ನಮ್ಮ ರಾಜ್ಯದಲ್ಲಿ ಭೂಕಂದಾಯ, ಹೊರಗಡೆ ಪ್ರಾಂತ್ಯಗಳಿಗಿಂತ ಕಡಮೆ ಇದೆ. ಸರ್ವೆ ಸೆಟಲ್‌ಮೆಂಟ್ ಮಾಡಬೇಕಾದರೆ ಇನ್ನೂ ಹೆಚ್ಚು ಕಾಲ ಹಿಡಿಯುತ್ತದೆ. ಅದೂ ಅಲ್ಲದೆ, ಬಹಳ ದುಡ್ಡೂ, ಸಿಬ್ಬಂದಿ ಬೇಕಾಗುತ್ತದೆ. ಅದು ಒಪ್ಪತಕ್ಕ ಮಾತು. ಜಮೀನಿನ ಮೇಲೆ ಸರ್‌ಚಾರ್ಜ್ ಟ್ಯಾಕ್ಸ್ ಹಾಕಬೇಕೆಂದು ಶ್ರೀ ಮಲ್ಲಾರಾಧ್ಯರು ಸಲಹೆಮಾಡಿದರು. ಎಲ್ಲಿಯವರೆಗೆ ನೀವು ಹಾಕುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಪಾಲಿಸಿ Socialistic Pattern of Societyಗೆ ಅನುಗುಣವಾಗಿರುವುದಿಲ್ಲವೆಂದು ಹೇಳಿದರು. ಏಕೆ ಅದನ್ನು ಯೋಚನೆ ಮಾಡುತ್ತಾ ಇಲ್ಲ?

ಆ ರೀತಿ ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬೇಕು ; ಅದು ರೈತರಿಂದ ಬರುತ್ತದೆ. ದೇಶದಲ್ಲಿ ಸುಮಾರು ಒಂದನೆಯ-ಮೂರು ಭಾಗದಷ್ಟು ಹಣವನ್ನು ದೇಶದಲ್ಲಿರುವ ನೀರಾವರಿ ಯೋಜನೆಗಳ ಮೇಲೆ ಖರ್ಚು ಮಾಡುತ್ತೇವೆ. ಅದರಿಂದ ಜಮೀನಿನ ಬೆಲೆ ಹೆಚ್ಚಾಗುತ್ತಾ ಇರುವಾಗ ಆಹಾರ ಉತ್ಪನ್ನ ಮಾಡುವುದಕ್ಕೆ ಅವಕಾಶವಿರತಕ್ಕಂಥ ಸಂದರ್ಭದಲ್ಲಿ, ನಾವು ನೀರಿನ ಕಂದಾಯವನ್ನು (ಬೆಟರ್‌ಮೆಂಟ್ ಟ್ಯಾಕ್ಸ್) ವಸೂಲು ಮಾಡುವುದಕ್ಕೆ ಅಸಮರ್ಥರಾಗಿದ್ದೇವೆ. ಹಾಕಿದರೆ ಏನೋ ಎಂದು ಒಂದು ಶಂಕೆಯಿಂದ ನಡೆಯುತ್ತಾ ಇರುವ ಹಾಗೆ ಕಾಣುತ್ತಿದೆ. Arrears of land, revenue, Sales tax, Betterment tax, Excise—ಇವುಗಳೆಲ್ಲವನ್ನೂ ನಿಷ್ಪಕ್ಷಪಾತವಾಗಿ, ನಿರ್ಭೀತಿಯಿಂದ ಸರ್ಕಾರ ವಸೂಲು ಮಾಡಿದ ಪಕ್ಷದಲ್ಲಿ ಸರ್ಕಾರದ ಬೊಕ್ಕಸಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಹಣ ಬರುತ್ತದೆಂದು ನನ್ನ ಅಭಿಪ್ರಾಯ. ಅದೂ ಅಲ್ಲದೆ ಹಾಲಿ ನಮ್ಮಲ್ಲಿರತಕ್ಕಂಥ ಕೈಗಾರಿಕೆಗಳನ್ನು ತೆಗೆದುಕೊಳ್ಳೋಣ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಸೂಚನೆ ಕೊಟ್ಟರು. ಮೈಸೂರಿನಲ್ಲಿರತಕ್ಕ Sandal Oil Factory, Porcelain Factory, Soap Factory, Implements Factory, Bhadravati Iron Works—ಇವುಗಳನ್ನು ತೆಗೆದುಕೊಂಡ ಪಕ್ಷದಲ್ಲಿ, Sandal Oil Factory ಯಲ್ಲಿ ಮರಗಳನ್ನು ಮಾರಾಟಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಪಾರ್ಸಿಗಳಹಬ್ಬಕ್ಕೆ ಪೂಜೆಗೋಸ್ಕರ ಸ್ವಲ್ಪ ಬೇರೆ ಮಾರಾಟ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆ ರೀತಿ ಕೊಟ್ಟಿರುವುದರಿಂದ ಸ್ಯಾಂಡಲ್ ವುಡ್ಡನ್ನು ಕಳ್ಳತನದಲ್ಲಿ ಸಾಗಾಣಿಕೆ ಮಾಡುವುದಕ್ಕೆ ಅವಕಾಶವಿದೆ. ಜೊತೆಗೆ ಸ್ಯಾಂಡಲ್ ಆಯಿಲ್ ಮಾರಾಟ ಮಾಡುವುದಕ್ಕೆ ಯಾರೋ ಒಬ್ಬ ವ್ಯಕ್ತಿಗೆ ಕೊಟ್ಟು, ಅವರು ತಮ್ಮಲ್ಲಿ ಬೇರೆ ಸಾಮಾನುಗಳನ್ನು ಕೊಂಡುಕೊಂಡರೆ ಕೊಡುತ್ತೇವೆಂದು ಹೇಳುತ್ತಾರೆ. ಹಾಗೆ ಅವರು ಇದರಿಂದ ಉಪಯೋಗ ಪಡೆಯುವುದಕ್ಕೆ ಅವಕಾಶವಾಗಿದೆಯೇ ವಿನಾ ಸರ್ಕಾರಕ್ಕೆ ಹೆಚ್ಚಿನ ರೀತಿಯಲ್ಲಿ ಲಾಭ ಪಡೆಯುವುದಕ್ಕೆ ಅವಕಾಶವಾಗಿಲ್ಲ. ಗಂಧದ ಮರಗಳಿಗೆ ಸ್ಪೈಕ್-ಡಿಸೀಸ್ ಬರುವುದರಿಂದ ದೇಶದಾದ್ಯಂತ ಸಾಕಾದಷ್ಟು ಗಂಧದ ಮರಗಳನ್ನ ಬೆಳೆಸುವುದಕ್ಕೆ ಪ್ರಯತ್ನಮಾಡಿಲ್ಲ. ಹಾಗೆ ಮಾಡಿದ ಪಕ್ಷದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕೈಗಾರಿಕೆಗಳಲ್ಲ ಹೆಚ್ಚಿಗೆ ಉತ್ಪತ್ತಿ ಬರುವುದಕ್ಕೆ ಅವಕಾಶವಿರುತ್ತದೆ.

ಜೊತೆಗೆ ಫಾರೆಸ್ಟ್ ಇಲಾಖೆಯ ವಿಚಾರದಲ್ಲಿ ಮಾನ್ಯ ಮಿತ್ರರುಗಳು ಚೆನ್ನಾಗಿ ತಿಳಿಸಿದರು. ನಾನೂ ಅವರ ಅಭಿಪ್ರಾಯವನ್ನು ಉಲ್ಲೇಖಿಸುತ್ತೇನೆ. ಮೈನರ್ ಪ್ರಾಡ್ಯೂಸುಗಳನ್ನು ಮಾರುತ್ತಿದ್ದಾರೆ. ಆ ಸಮಯದಲ್ಲಿ ದೊಡ್ಡದೊಡ್ಡ ಏರಿಯಗಳನ್ನು ಹರಾಜು ಹಾಕುತ್ತಿದ್ದಾರೆ. ಇದರಿಂದ ಕೆಲವು ದೊಡ್ಡ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸುವುದಕ್ಕೆ ಅವಕಾಶವಿದೆ. ಸಣ್ಣಪುಟ್ಟವರು ಬಿಡ್ ಮಾಡುವುದಕ್ಕೆ ಅವಕಾಶವಿಲ್ಲ. ಏರಿಯ ಸಣ್ಣದು ಮಾಡಿದರೆ, ಮಾನಾಪಲಿ ಬ್ರೇಕ್ ಮಾಡುವುದಕ್ಕೆ ಅವಕಾಶವಾಗುತ್ತದೆ ; ಸಮಾಜವಾದ ಪಕ್ಷಕ್ಕೆ ನಿಮ್ಮ ನೀತಿ ಅನುಗುಣವಾಗುತ್ತದೆ.

ಶ್ರೀ ಟಿ. ಮರಿಯಪ್ಪ.—Smaller areas ಮಾಡಿ ಹರಾಜು ಮಾಡುವುದು ಉತ್ತಮವೆಂದು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಆ ರೀತಿ ಮಾಡುವುದರಿಂದ ನಮಗೆ ಹೆಚ್ಚಿನ ಲಾಭ ಬರುವುದಕ್ಕೆ ಅವಕಾಶವಾಗುತ್ತದೆ. ಜೊತೆಗೆ ಹಿಂದೆ ಶ್ರೀ ಹನುಮಂತಯ್ಯನವರು ಹೇಳುತ್ತಿದ್ದರು : ನಮ್ಮ ದೇಶದಲ್ಲಿ ಕಚ್ಚಾ ಫಿಲ್ಮ್ ಇಂಡಸ್ಟ್ರಿ ಸ್ಥಾಪನೆಮಾಡಬೇಕು ; ಕೃಷ್ಣರಾಜನಗರದ ಹತ್ತಿರ ಮಾಡಿದರೆ ಹೆಚ್ಚಿನ ರೀತಿಯಲ್ಲಿ ನಮಗೆ ಉತ್ಪನ್ನ ಬರುತ್ತದೆ ಎಂದು. ಈಗಾಗಲೇ ಮದ್ರಾಸಿನವರು ನೀಲಗಿರಿಯಲ್ಲಿ ಮಾಡುವುದಕ್ಕೆ ಹೊರಟಿದ್ದಾರೆ. ಆ ರೀತಿ ನಮಗೆ ಸಿಕ್ಕಿರತಕ್ಕಂಥ ಅವಕಾಶವನ್ನು ಅಭಿವೃದ್ಧಿಮಾಡಿಕೊಂಡ ಪಕ್ಷದಲ್ಲಿ ಹೆಚ್ಚಿನ ಲಾಭ ಬರುವುದಕ್ಕೆ ಅವಕಾಶವಾಗುತ್ತದೆ. ನೆರೆಹೊರೆ ಪ್ರಾಂತ್ಯಗಳವರು ಈ ಕೈಗಾರಿಕೆಯನ್ನು ತೆಗೆದುಕೊಂಡು ನಾವು ಹಿಂದೆ ಬೀಳಬೇಕಾದ ಪರಿಸ್ಥಿತಿ ಬಂದಿದೆ. ಅದಕ್ಕೋಸ್ಕರ ಕಚ್ಚಾ ಫಿಲ್ಮ್ ಇಂಡಸ್ಟ್ರಿ ಇಂಡಿಯಾದಲ್ಲಿ ಎಲ್ಲಿಯೂ ಇಲ್ಲ. ಮದ್ರಾಸಿನಲ್ಲಿ ಸ್ಥಾಪನೆ ಮಾಡಿದರೂ ಕೂಡ, ಇಲ್ಲಿಯೂ ಮಾಡಲು ಪ್ರಯತ್ನ ಮಾಡಬೇಕೆಂದು ಸೂಚನೆ ಕೊಡುತ್ತಿದ್ದೇನೆ.

ಇನ್ನು ಹೆಚ್ಚಿಗೆ ಬೀಳತಕ್ಕಂಥ (ಬೆಲೆಗಳ ಏರಿಕೆ) ಪ್ರೈಸ್-ಸ್ಟ್ರಕ್ಚರನ್ನು ತಡೆಗಟ್ಟುವುದಕ್ಕೆ ಏನು ಮಾಡಿದ್ದೀರಿ ಎಂದು ಶ್ರೀ ಮಲ್ಲಾರಾಧ್ಯರು ಕೇಳಿದರು. ಅದಕ್ಕೆ ತಾವು ಬಡ್ಜೆಟ್ ಸ್ಪೀಚಿನಲ್ಲಿ Small Scale Savings Scheme ನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಅದಲ್ಲದೆ, ಹೊರಗಡೆಯಿಂದ ಬರತಕ್ಕ ಆಮದನ್ನು ಸ್ವಲ್ಪ ಮಟ್ಟಿಗೆ ನಾವು ಕಡಮೆ ಮಾಡಿಕೊಳ್ಳುವ ಪಕ್ಷದಲ್ಲಿ ನಮಗೆ ಹಣದ ಉಬ್ಬರ ಕಡಮೆಯಾಗುತ್ತದೆ.

ಇಷ್ಟರ ಮಾತ್ರದಿಂದಲೇ ನಾವು ತೃಪ್ತರಾಗಿ ಕೂರುವ ಪಕ್ಷದಲ್ಲಿ, ಹಣದ ಉಬ್ಬರವನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಬೆಲೆಯನ್ನು ಇಳಿಸಬೇಕೆಂದರೆ ಪ್ರಕೃತ ಯೋಜನೆಗಳಲ್ಲಿ ತಡೆಗಟ್ಟುವುದಕ್ಕಾಗುವುದಿಲ್ಲ. ಸಮತಾವಾದದಲ್ಲಿ ಹೇಳುವುದಾದರೆ ಎಲ್ಲವನ್ನೂ ಕಂಟ್ರೋಲ್ ಮಾಡಿದ ಪಕ್ಷದಲ್ಲಿ ಬೆಲೆಯನ್ನು ಹತೋಟಿಗೆ ತರಬಹುದು. ಕಂಟ್ರೋಲ್ ಬೇಡ ಎಂದು ಹಿಂದಿನ ಅಸೆಂಬ್ಲಿಯಿಂದ ಹೇಳಿಕೊಂಡು ಬಂದಿದ್ದೇವೆ. ಅದರಲ್ಲಿ ಆಗತಕ್ಕಂಥ ಅನನುಕೂಲಗಳನ್ನು ಅನುಭವಿಸುವುದಕ್ಕೆ ಸಿದ್ಧರಾಗಿರಬೇಕೆಂದು ಈ ಸಂದರ್ಭದಲ್ಲಿ ನಿವೇದಿಸಿಕೊಳ್ಳುತ್ತೇನೆ. ಈ ಬೆಲೆಗಳ ಏರಿಕೆಯನ್ನು ಇನ್ನು ಯಾವ ರೀತಿ ಕಡಮೆ ಮಾಡುವುದು ? ಉತ್ಪತ್ತಿಯನ್ನು ಹೆಚ್ಚಿಸುವುದರಿಂದ ಸ್ವಲ್ಪಮಟ್ಟಿಗೆ ಕಡಮೆ ಮಾಡಬಹುದು. ನಮ್ಮ ದೇಶದಲ್ಲಿ ಆಹಾರದ ಕೊರತೆಯ ವಿಷಯವನ್ನು ಯೋಚಿಸುವುದಾದರೆ, ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಾಗಿವೆ, ಆದರೂ ಆಹಾರದ ವಿಷಯದಲ್ಲಿ ನಾವು ಎಲ್ಲಿದ್ದೇವೆಂದು ತಿಳಿಯುವುದು ಅಸಾಧ್ಯವಾಗಿದೆ. ಪ್ರತಿವರ್ಷವೂ ಅಂಕಿ ಅಂಶಗಳ ಸಂಗ್ರಹ ಇಲಾಖೆಯವರು, ಇಷ್ಟು ಎಕರೆ ಭೂಮಿಯನ್ನು ಹೆಚ್ಚು ಸಾಗುವಳಿ ಮಾಡಿದೆ, ಇಷ್ಟು ಎಕರೆ ನೀರಾವರಿಯಾಗಿದೆ, ಎಷ್ಟು ಟನ್ ಬತ್ತ ಹೆಚ್ಚು ಬೆಳೆದಿದೆ, ಎಷ್ಟು ಟನ್ ರಾಗಿ ಬೆಳೆದಿದೆ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಇಷ್ಟಾದರೂ ಬೆಲೆ ಇಳಿಯದೇ ಇರಲು ಕಾರಣವೇನಿರಬಹುದು ? ಹೆಚ್ಚು ಉತ್ಪತ್ತಿಯಾದರೂ ಅದಕ್ಕೆ ತಕ್ಕಂತೆ ಜನಸಂಖ್ಯೆಯೂ ಹೆಚ್ಚಾಗುತ್ತಿದೆ ಎಂದು ಹೇಳಬಹುದು. ಹಿಂದಿಗಿಂತ ಈಗ ಬೆಳೆ ಹೆಚ್ಚಾಗಿದೆಯಾದರೂ ಎಷ್ಟು ಆಗಬಹುದಾಗಿತ್ತೋ ಅಷ್ಟಾಗಿಲ್ಲ. ರೈತರಿಗೆ ಹಣ ಸಹಾಯ ಕೊಡುತ್ತಿದ್ದೇವೆ, ಗೊಬ್ಬರ ಮತ್ತು ಇತರ ಸಲಕರಣೆಗಳನ್ನೊದಗಿಸುತ್ತಿದ್ದೇವೆ ; ಆದರೂ ಅವರು ಹೆಚ್ಚು ಬೆಳೆಯುತ್ತಿಲ್ಲ ಎಂದು ಹೇಳುತ್ತಾರೆ. ಇದರಲ್ಲಿ ಸ್ವಲ್ಪ ಸತ್ಯಾಂಶವಿದೆಯೆಂದು ನನ್ನ ಭಾವನೆ. ಯಾರು

(ಶ್ರೀ ಬಿ. ರಾಚಯ್ಯ)

ಯಾರು ಸಹಕಾರ ಸಂಘಗಳಿಂದ ಗೊಬ್ಬರಕ್ಕಾಗಿ ಎಷ್ಟು ಹಣವನ್ನು ತೆಗೆದುಕೊಂಡಿದ್ದಾರೋ ಅವರು ಆ ಹಣಕ್ಕೆ ಪೂರ್ತಿಯಾಗಿ ಗೊಬ್ಬರವನ್ನು ತೆಗೆದುಕೊಂಡಿಲ್ಲ. ಹೇಗೆಂದರೆ, ರಾಸಾಯನಿಕ ಗೊಬ್ಬರವನ್ನು ಎಷ್ಟು ತೆಗೆದುಕೊಂಡಿದ್ದಾರೆ, ಅದಕ್ಕಾಗಿ ಸಾಲದ ರೂಪದಲ್ಲಿ ಹಣ ಎಷ್ಟು ತೆಗೆದುಕೊಂಡಿದ್ದಾರೆ, ಈ ಎರಡನ್ನೂ ಹೋಲಿಸಿದರೆ, ಗೊಬ್ಬರವನ್ನು ತೆಗೆದುಕೊಂಡಿರುವುದು ಕಡಮೆ ಎಂಬುದು ವ್ಯಕ್ತವಾಗುತ್ತದೆ. ಭೂಮಿಯನ್ನು ಉಳುಮೆ ಮಾಡುವುದರಲ್ಲಿಯೂ ಇದೇ ರೀತಿಯಾಗಿದೆ. ಹೀಗೆ ಯಾವ ಉದ್ದೇಶಕ್ಕಾಗಿ ರೈತರು ಸಾಲವನ್ನು ತೆಗೆದುಕೊಂಡರೋ ಆ ಹಣವನ್ನು ಅದಕ್ಕೆ ವಿನಿಯೋಗಿಸಿಲ್ಲ. ಗೊಬ್ಬರಕೊಳ್ಳುವುದಕ್ಕೆ, ಬೀಜ ಕೊಳ್ಳುವುದಕ್ಕೆ, ಬಾವಿ ತೆಗೆಸುವುದಕ್ಕೆ ಮುಂತಾದ ಕಾರ್ಯಗಳಿಗೆ ತೆಗೆದುಕೊಂಡ ಹಣವನ್ನು ಸರಿಯಾಗಿ ಉಪಯೋಗ ಮಾಡದೇಯಿರುವುದರಿಂದ ಉತ್ಪತ್ತಿ ಕಡಮೆಯಾಗಿದೆ.

ನಮ್ಮ ವ್ಯವಸಾಯ ಇಲಾಖೆಯಲ್ಲಿ ಬತ್ತದ ಸಂಶೋಧನೆ ಮಾಡುತ್ತಿದ್ದಾರೆಯೇ ಹೊರತು ರಾಗಿಯ ಸಂಬಂಧವಾಗಿ ಮಾಡುತ್ತಿಲ್ಲ. ನಮ್ಮ ದೇಶದ ಜನ ರಾಗಿಯನ್ನೇ ಹೆಚ್ಚು ಉಪಯೋಗ ಮಾಡುವುದು. ಈ ಇಲಾಖೆಯವರು ಈ ಬಗ್ಗೆ ಸಂಶೋಧನೆಗೆ ತಾಂತ್ರಿಕ ಪರಿಣತರಿಗೆ ನಮ್ಮ ದೇಶದಲ್ಲಿ ಹೆಚ್ಚಿನ ಅವಕಾಶ ಕೊಟ್ಟಿಲ್ಲ, ಗಮನವನ್ನೂ ಕೊಟ್ಟಿಲ್ಲ, ಶಿಕ್ಷಣ ಕೊಟ್ಟಿಲ್ಲ.........

Sri C. M. ARUMUGHAM.—There is a a Research Station at Mandya.

Sri T. MARIAPPA.—At Chamarajanagar, there is a Research Farm for jola.

Sri B. RACHIAH.—There are research stations; but there are no men who have experience in research.

Sri T. MARIAPPA.—We have got improved varieties of ragi; for example H 22 which is an improved variety of ragi is already popular. We have to popularise it in other areas.

ಶ್ರೀ ಬಿ. ರಾಚಯ್ಯ.—ಮಾನ್ಯ ಸಚಿವರು ತಿಳಿಸಿದ ಹಾಗೆ, ಮಂಡ್ಯದ ಸಂಶೋಧನಾ ಫಾರಮ್ಮಿನಲ್ಲಿ ನೋಡಿದ್ದೇನೆ. ಇಲಾಖೆಯಿಂದ ಹೆಚ್ಚು ಪ್ರೋತ್ಸಾಹವಿಲ್ಲದಿದ್ದರೂ ಕೂಡ ಶ್ರೀಮಾನ್ ಸಿ. ಎಚ್. ಲಕ್ಷ್ಮಣಯ್ಯನವರು, "ಅರುಣ", "ಉದಯ", "ಪೂರ್ಣ" ಎಂಬ ಮೂರು ತರಹ ಕಂಡುಹಿಡಿದಿದ್ದಾರೆ. ಅತಿ ಕಡಮೆ ಕಾಲದಲ್ಲಿ ಬೆಳೆ ಬರುವುದು, ಏಕಕಾಲದಲ್ಲಿ ಬರುವುದು, ನೀರಿನ ಅಭಾವ ಪರಿಸ್ಥಿತಿಯಲ್ಲಿಯೂ ಬೆಳೆ ಬರುವುದನ್ನು ಕಂಡುಹಿಡಿದಿದ್ದಾರೆ. ಇಂಥ ಕೆಲಸದಲ್ಲಿ ಅನುಭವವಿರುವವರನ್ನು "ಕಾರ್ಡಮಮ್ ಎಕ್ಸ್‌ಪರ್ಟ್" ಎಂದು ಹಾಕುತ್ತಾರೆ. ಎಲ್ಲಿ ಯಾವ ಜನರು ಯಾವ ಕೆಲಸದಲ್ಲಿ ಶಿಕ್ಷಣ ಹಾಗೂ ಅನುಭವ ಪಡೆದವರಿದ್ದಾರೋ ಅವರಿಂದ ಆ ಕೆಲಸವನ್ನು ತೆಗೆದುಕೊಳ್ಳುವುದನ್ನು ಬಿಟ್ಟು, ಅವರನ್ನು ಬೇರೆ ಕಡೆ ಕಳುಹಿಸಿ ಅಲ್ಲಿನ ಕೆಲಸಕಾರ್ಯಗಳನ್ನು ನಿಲ್ಲಿಸುವುದಾದರೆ ಇದು ದೇಶಸೇವೆ ಮಾಡಿದ ಹಾಗಾಗುವುದಿಲ್ಲ. ವ್ಯವಸಾಯ ಇಲಾಖೆಯಲ್ಲಿ ಎಷ್ಟೆಷ್ಟು ಸಂಶೋಧನಾ ಕ್ಷೇತ್ರಗಳಿರಬೇಕು, ಅದರಲ್ಲಿ ಏನೇನು ಸಲಕರಣೆಗಳಿರಬೇಕು ಎನ್ನುವುದರ ಬಗ್ಗೆ ತಾಂತ್ರಿಕರನ್ನು ಪ್ರಶ್ನೆಮಾಡಿ, ತಿಳಿದು ಅವುಗಳನ್ನೊದಗಿಸಬೇಕು. ತಾಂತ್ರಿಕ ಶಿಕ್ಷಣ ಪಡೆದು ಬರಲು ಹೊರ ದೇಶಗಳಿಗೆ ಕಳುಹಿಸಿದರೆ, ಅವರು ಬಂದ ಮೇಲೆ ಆ ಇಲಾಖೆಯಲ್ಲೆ ಅವರನ್ನು ಎಷ್ಟುಮಟ್ಟಿಗೆ ಉಪಯೋಗಮಾಡಿಕೊಳ್ಳಬಹುದೆಂಬುದನ್ನು ಯೋಚಿಸಿ ಮಾಡಿಕೊಳ್ಳಬೇಕು. ಹಿಂದೆ Fisheries ನಲ್ಲಿ ಶಿಕ್ಷಣ ಪಡೆದು ಬಂದವರನ್ನು ಕಾಲೇಜಿನಲ್ಲಿ ಲೆಕ್ಚರರ್ ಆಗಿ ನೇಮಕ ಮಾಡಿದ್ದಾರೆ, ಹುಲ್ಲನ್ನು ಹೆಚ್ಚು ಬೆಳೆಯುವ ಬಗ್ಗೆ ಶಿಕ್ಷಣ ಪಡೆದಿರುವವರನ್ನು ಬಾಟನಿ ಪ್ರೊಫೆಸರಾಗಿ ನೇಮಕಮಾಡಿದ್ದಾರೆ. ಹೀಗೆ ತಾಂತ್ರಿಕ ಶಿಕ್ಷಣವನ್ನು ಪಡೆದು ಹೊರದೇಶಗಳಿಂದ ಬಂದರೆ, ದೇಶದಲ್ಲಿ ಹೇಗೆ ಅವರ ಅನುಭವ ಮತ್ತು ಶಿಕ್ಷಣವನ್ನು ಉಪಯೋಗ ಮಾಡಿಕೊಳ್ಳಬೇಕೆಂಬುದು ಗೊತ್ತಿಲ್ಲ. ಇದಕ್ಕೆ ಈ ಮಂತ್ರಿಗಳು ಕಾರಣವೆಂದು ನಾನು ಹೇಳುವುದಿಲ್ಲ. ಹಿಂದೆ ಈ ರೀತಿ ಆಗಿದೆ, ಇನ್ನುಮುಂದೆಯೂ ಹೀಗಾಗಬಾರದೆಂದು ಹೇಳುತ್ತಿದ್ದೇನೆ.

ಇನ್ನು ಬರಿಯ ದವಸಧಾನ್ಯಗಳು ಮಾತ್ರ ಆಹಾರ ಪದಾರ್ಥಗಳೆಂದು ಇವುಗಳನ್ನು ಹೆಚ್ಚು ಬೆಳೆದರೆ ಸಾಕೆಂದು ಹೇಳಿದರೆ ಸಾಲದು. ದೇಶದಲ್ಲಿರುವ ಜನರಲ್ಲಿ ಮೂರರಲ್ಲಿ-ಒಂದು-ಭಾಗ ಸಸ್ಯಾಹಾರಿಗಳಾಗಿದ್ದರೆ ಮೂರರಲ್ಲಿ ಎರಡು ಭಾಗ ಮಾಂಸಾಹಾರಿಗಳಿರಬಹುದು. ಹೀಗಿರುವಾಗ ಮಾಂಸಾಹಾರಿಗಳಿಗೆ ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಮೀನುಗಾರಿಕೆಯಿಂದ ಆಹಾರ ಒದಗುತ್ತದೆ. ಇದಕ್ಕೆ ಹೆಚ್ಚು ಪ್ರೋತ್ಸಾಹಬೇಕು. ಶ್ರೀಮಾನ್ ಬಾಳಿಗಅವರು ಹೇಳಿದಂತೆ, ನಮ್ಮ ರಾಜ್ಯಕ್ಕೆ ಇನ್ನೂರು ಮೈಲಿ ಸಮುದ್ರತೀರ ಬಂದಿದೆ. ಇದರಲ್ಲಿ Fisheries ಅಭಿವೃದ್ಧಿಮಾಡಿದರೆ ಎಷ್ಟೋ ಅನುಕೂಲವಾಗುತ್ತದೆ. ಈ ಮೀನುಗಾರಿಕೆಯ ಕೆಲಸದಲ್ಲಿ ತೊಡಗಿರುವವರಿಗೆ ಹೆಚ್ಚು ಆಳವಾದ ಸಮುದ್ರ ಪ್ರದೇಶಗಳಿಗೆ ಹೋಗಿ ಮೀನು ಹಿಡಿಯಲು ಅನುಕೂಲ ಮಾಡಿದರೆ ನಮ್ಮ ದೇಶದ ಆಹಾರ ಉತ್ಪತ್ತಿ ಹೆಚ್ಚುವುದಲ್ಲದೆ ಹೊರ ದೇಶಗಳಿಂದ ನಾಣ್ಯ ತರುವುದಕ್ಕೆ ಅನುಕೂಲವಾಗಿ ನಮ್ಮ ಆರ್ಥಿಕ ಪರಿಸ್ಥಿತಿ ಎಷ್ಟೋ ಉತ್ತಮವಾಗುತ್ತದೆ. ಬೇರೆ ಪೋರ್ಟ್‌ಗಳಿಗೆ ನಮ್ಮ ಮೀನುಗಾರರು ಹೋಗಿ ಅಲ್ಲ ಅವರಿಗೆ ಹಣ ಕೊಡುವುದನ್ನು ತಪ್ಪಿಸಿ ನಮ್ಮ ರಾಜ್ಯದಲ್ಲೇ ಈ ಕೈಗಾರಿಕೆಯನ್ನು ಅಭಿವೃದ್ಧಿ ಮಾಡಬಹುದು. ಅಂತೂ ಮೀನುಗಾರಿಕೆಯ ಅಭಿವೃದ್ಧಿ, ಪೋರ್ಟ್ ಅಭಿವೃದ್ಧಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಸೂಚನೆ ಮಾಡುತ್ತೇನೆ.

ಸ್ವಾಮಿ, ಶ್ರೀಮಾನ್ ನರಸಿಂಹನ್ ಅವರು "ನಮ್ಮ ದೇಶದಲ್ಲಿ ತೆರಿಗೆಗಳು ಹೆಚ್ಚುತ್ತಿವೆ, ನಾವು ಎಲ್ಲಿ ನಿಲ್ಲುತ್ತೇವೋ ಏನೋ ಗೊತ್ತಿಲ್ಲ" ಎಂದು ಹೇಳಿದರು...

ಶ್ರೀ ಟಿ. ಮರಿಯಪ್ಪ.—ಅಕ್ಕಪಕ್ಕದ ಪ್ರಾಂತಗಳಿಗಿಂತ ನಮ್ಮ per capita income ಹೆಚ್ಚಾಗಿದೆಯೆಂದೂ ಹೇಳಿದ್ದಾರೆ.

ಶ್ರೀ ಬಿ. ರಾಚಯ್ಯ.—ಆಂಧ್ರ, ಬೊಂಬಾಯಿ, ಮದರಾಸು ಇವುಗಳೊಡನೆ ಹೋಲಿಸಿದರೆ ನಮ್ಮ per capita tax ಹೆಚ್ಚಾಗಿಲ್ಲ. ಅಲ್ಲದೆ, ನಾವು ಹೆಚ್ಚುಹೆಚ್ಚು ಸೌಲಭ್ಯಗಳನ್ನು ಕೇಳುವಾಗ ಜವಾಬ್ದಾರಿಯನ್ನೂ ಹೆಚ್ಚು ಹೊತ್ತು ಕೊಳ್ಳುವುದು ನಮ್ಮ ಕರ್ತವ್ಯ. ಹಾಗೆ ಈಗ ನಾವು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗಿದೆ. ಹಾಗಿಲ್ಲದಿದ್ದರೆ ಯಾವ ಹೆಚ್ಚು ಜನೋಪಯುಕ್ತ ಕಾರ್ಯವನ್ನೂ

ಯಾವ ತಾಲ್ಲೂಕಿಗೂ ಮಾಡಲು ಸಾಧ್ಯವಾಗುವುದಿಲ್ಲ. ಪರೋಕ್ಷ ತೆರಿಗೆಗಳು ಹೆಚ್ಚಾಗಿವೆ ಎಂದು ಹೇಳಿದರು ; ಹೋದವರ್ಷಕ್ಕೂ ಈ ವರ್ಷಕ್ಕೂ ಹೋಲಿಸಿ ನೋಡಿದರೆ ಪ್ರತ್ಯಕ್ಷ ತೆರಿಗೆಗಳು ಹೆಚ್ಚಾಗುತ್ತಿವೆ ಮತ್ತು ಪರೋಕ್ಷ ತೆರಿಗೆಗಳು ಕಡಮೆಯಾಗಿವೆ. ಇದು ಸಮಾಜವಾದಕ್ಕೆ ಸಮಂಜಸವಾಗಿದೆ........

ಶ್ರೀ ಟಿ. ಮರಿಯಪ್ಪ.--ಎರಡು ಕೋಟಿ ಜನರು direct tax ಕೊಡುವುದಿಲ್ಲ. ಪ್ಲಾಂಟೇಷನವರು direct tax ಹೆಚ್ಚು ಕೊಡುತ್ತಾರೆ. ಸಮಾಜವಾದ ತತ್ವವನ್ನನುಸರಿಸಿ, ಆರ್ಥಿಕ ಅಂತರವನ್ನು ಕಡಮೆ ಮಾಡಬೇಕೆಂದು ಕಾಫಿ ತೋಟಕ್ಕೆ ಶೇಕಡ 40ರಷ್ಟು ಹಾಕಿದ್ದೇವೆ.

ಶ್ರೀ ಬಿ. ರಾಚಯ್ಯ.—ಹೆಚ್ಚು ತೆರಿಗೆಯ ಭಾರವನ್ನು ಹೊರುವದಕ್ಕೆ ಯಾರಿಗೆ ಸಾಧ್ಯವಿದೆಯೋ ಅಂಥವರ ಮೇಲೆ ಟ್ಯಾಕ್ಸ್ ಹಾಕಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ಸರ್ಕಾರದ ಆದಾಯವನ್ನು ಹೆಚ್ಚಿಸುವುದಕ್ಕೆ ಮತ್ತು ಕೊರತೆಯನ್ನು ಸರಿಪಡಿಸುವುದಕ್ಕೆ ಕೆಲವು ಮಾತುಗಳನ್ನು ಹೇಳಿದ್ದೇನೆ. ಇನ್ನೊಂದು ವಿಷಯ, ಮೂರನೆಯ ಮತ್ತು ನಾಲ್ಕನೆಯ ತರಗತಿಯ ಸರಕಾರಿ ನೌಕರರಿಗೆ ವಸತಿ ಸೌಕರ್ಯಗಳನ್ನು ಒದಗಿಸಲು ತೀರ್ಮಾನ ತೆಗೆದುಕೊಂಡಿರತಕ್ಕದ್ದು ನಿಜವಾಗಿಯೂ ಸ್ವಾಗತಾರ್ಹವಾಗಿದೆ. ಈ ಸೌಕರ್ಯ ಎಲ್ಲರಿಗೂ ದೊರೆಯುವ ಹಾಗೆ ಮಾಡಬೇಕು. ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಕಾನೂನಿದೆ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಇದನ್ನು ಅತಿ ಬೇಗನೆ ನಿವಾರಣೆ ಆಗುವ ಹಾಗೆ ಮಾಡಬೇಕು.

ಇನ್ನು ಎರಡನೆಯದಾಗಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚು ಅಧಿಕಾರ ಕೊಟ್ಟಿರತಕ್ಕಂಥಾದ್ದು ಒಳ್ಳೆಯದು. ಈ ಗ್ರಾಮ ಪಂಚಾಯಿತಿಗಳು ಎಷ್ಟರ ಮಟ್ಟಿಗೆ ತಮ್ಮ ಜವಾಬ್ದಾರಿಯನ್ನು ನ್ಯಾಯವಾಗಿ ನಿಷ್ಪಕ್ಷಪಾತದಿಂದ ನಡೆಸುತ್ತವೆ ಎಂಬುದನ್ನು ನಿರೀಕ್ಷಣೆ ಮಾಡಿದ್ದಾರೆ. ಈ ವಿಷಯದಲ್ಲಿ ಮುಖ್ಯವಾಗಿ ಅಧಿಕಾರ ವಿಕೇಂದ್ರಿಕರಣವಾಗಬೇಕೆಂಬುದೇ ಉದ್ದೇಶವಿದೆ. ಹಣ ವಿನಿಯೋಗ ಮಾಡತಕ್ಕ ವಿಷಯವನ್ನು ಅವುಗಳಿಗೆ ಕೊಟ್ಟಿರುವುದು ಒಳ್ಳೆಯದಾಗಿದೆ. ಆನುವಂಶಿಕವಾಗಿ ನಡೆದುಕೊಂಡು ಬಂದಿರುವ ಅಧಿಕಾರಿಗಳನ್ನು ತೆಗೆದು ಹಾಕುವುದಕ್ಕೆ ಹಣಕಾಸಿನ ಕೊರತೆ ಇದೆ, ಆದುದರಿಂದ ಇದು ನಿಧಾನವಾಗುತ್ತಿದೆ. ಇದು ಎಷ್ಟು ಬೇಗನೆ ಜಾರಿಗೆ ಬರುತ್ತದೆಯೋ ಅಷ್ಟು ಒಳ್ಳೆಯದು, ಅದರಿಂದ ಹಳ್ಳಿಗಳಲ್ಲಿ ಒಂದು ನವ ಚೈತನ್ಯವುಂಟಾಗುತ್ತದೆ. ಈ ಬಗ್ಗೆ ಇದೇ ಅಧಿವೇಶನದಲ್ಲಿ ಒಂದು ಕಾನೂನನ್ನು ಸಭೆಯ ಮುಂದೆ ತಂದು, ಸಭೆಯ ಒಪ್ಪಿಗೆ ಪಡೆದು ಬೇಗನೆ ಕಾನೂನು ಜಾರಿ ಆಗಲಿ ಎಂದು ನಾನು ಹಾರೈಸುತ್ತೇನೆ.

ಇನ್ನು ಭೂಸುಧಾರಣೆಯ ವಿಷಯದಲ್ಲಿ ಇನಾಂ ಜಮೀನುಗಳಿಗೆ ಪರಿಹಾರ ಕೊಟ್ಟಿದ್ದಾರೆ. ಇನ್ನೂ ಕೆಲವು ಇನಾಂ ರದ್ದಿತಿಯಾಗಬೇಕಾಗಿದೆ. ಈ ಭೂಸುಧಾರಣೆಯ ಮಸೂದೆಯು ಈಗ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಪರಿಶೀಲನೆಯಲ್ಲಿದೆ, ಈ ಕಾನೂನು ತಡವಾಗದೆ ಬೇಗನೆ ಜಾರಿಗೆ ಬರಲಿ ಎಂದು ಹೇಳುತ್ತೇನೆ. ಸುಂಟರಗಾಳಿ ಬೀಸಿದ ರೀತಿಯಲ್ಲಿ ಈ ಕಾನೂನಿನ ವಿಷಯವಾಗಿದೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಆ ಸಮಿತಿಯಲ್ಲಿ ಅವರೂ ಒಬ್ಬರು ಸದಸ್ಯರಾಗಿದ್ದಾರೆ. ಆದ್ದರಿಂದ ಈ ಕಾನೂನು ಬರುತ್ತದೆಯೋ ಇಲ್ಲವೋ ಎನ್ನುವುದನ್ನು ಹೇಳಿದರೆ ನಮಗೆ ಸಮಾಧಾನವಾಗುತ್ತದೆ.

ಶ್ರೀ ಬಿ. ರಾಚಯ್ಯ.—ನನ್ನ ಮಟ್ಟಿಗೆ ಹೇಳುವದಾದರೆ, ಏನೇ ಕಷ್ಟ ಅಡ್ಡಿ ಆತಂಕ ಬಂದರೂ ಸಹ ಅದನ್ನು ನಿವಾರಣೆ ಮಾಡಿ, ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಒಂದು ತೀರ್ಮಾನಕ್ಕೆ ನಾವು ಬಂದೇ ಬರುತ್ತೇವೆಂದು ನಾನು ತಿಳಿದುಕೊಂಡಿದ್ದೇನೆ.

ಸ್ವಾಮಿ, ಎಸ್.ಎಸ್.ಎಲ್.ಸಿ.ವರೆಗೆ ಉಚಿತವಾದ ವಿದ್ಯಾಭ್ಯಾಸ ಸೌಕರ್ಯ 1200 ವರಮಾನ ಬರತಕ್ಕವರ ಮಕ್ಕಳಿಗೆಲ್ಲ ಒದಗಿಸಿಕೊಟ್ಟಿರತಕ್ಕದ್ದು ಒಳ್ಳೆಯದಾಗಿದೆ. ಇನ್ನು ಹೆಚ್ಚಿಗೆ ಹಣ ಬೇಕಾದರೆ, ಇನ್ನು ಹೆಚ್ಚಿಗೆ ಹೊಸ ತೆರಿಗೆಗಳನ್ನು ಹಾಕಬೇಕೆಂದು ನನಗೆ ಅನ್ನಿಸುತ್ತದೆ. ಇವೊತ್ತಿನದಷ್ಟೇ ನಾವು ಗಮನದಲ್ಲಿ ಇಟ್ಟುಕೊಳ್ಳದೇ ನಾಳೆಯದನ್ನು ನಾವು ವಿಚಾರಮಾಡಬೇಕು. ಬರಲಿರುವ ಮೂರನೆಯ ಪಂಚವಾರ್ಷಿಕ ಯೋಜನೆಗೆ ಹಣ ಬೇಕಾಗುತ್ತದೆ ಅದರ ಜವಾಬ್ದಾರಿ ನಮ್ಮ ಮೇಲೆ ಇದೆ. ಆದುದರಿಂದ ಹೊಸದಾಗಿ ತೆರಿಗೆ ಹಾಕುವುದಕ್ಕೆ ಹಿಂಜರಿಯಬಾರದು. ದೇಶದಲ್ಲಿ ಅನೇಕ ದೊಡ್ಡದೊಡ್ಡ ಯೋಜನೆಗಳು ಕೆಲಸ ಕಾರ್ಯಗಳು ನಡೆಯಬೇಕಾಗಿವೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಹಣವನ್ನು ಒದಗಿಸಲು ಜವಾಬ್ದಾರೀ ಹೊತ್ತು ಹೊಸ ಹೊಸ ತೆರಿಗೆಗಳನ್ನು ಹಾಕಲೇಬೇಕು, ಯಾರಿಗೆ ಹೆಚ್ಚಿಗೆ ತೆರಿಗೆಯನ್ನು ಕೊಡುವುದಕ್ಕೆ ಸಾಧ್ಯವಿದೆಯೋ ಅವರ ಮೇಲೆ ಹಾಕಬೇಕು. ಎಷ್ಟೋ ಜನರು ಇನ್‌ಕಂಟ್ಯಾಕ್ಸ್ ವರಮಾನ ತೆರಿಗೆ ತಪ್ಪಿಸಿಕೊಳ್ಳುತ್ತಿದ್ದಾರೆ. ವ್ಯಾಪಾರ ಮಾಡುವವರ ಮೇಲೆ ಹೆಚ್ಚಿಗೆ ತೆರಿಗೆ ಹಾಕಬಹುದು ಎಂದು ಹೇಳುತ್ತೇನೆ. ಇಂದು ಈ ಸರಕಾರವಿದೆ, ನಾಳೆಯ ದಿನ ಮತ್ತೊಂದು ಸರಕಾರ ಅಸ್ತಿತ್ವದಲ್ಲಿ ಬರಬಹುದು. ಯಾರೇ ಬಂದರೂ ಹೊಸ ಟ್ಯಾಕ್ಸ್ ಹಾಕಲೇಬೇಕಾಗುತ್ತದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಟ್ಯಾಕ್ಸ್ ಹಾಕುವುದಕ್ಕೆ ಯಾವ ಯಾವ ಐಟಮ್ಸ್ ಎನ್ನುವುದನ್ನು ಹೇಳಿ.

ಶ್ರೀ ಬಿ. ರಾಚಯ್ಯ.—ಲ್ಯಾಂಡ್ ಮೇಲೆ ಸರಚಾರ್ಜ ಹಾಕಿ ಎಂದು ಈ ಮೊದಲೇ ಹೇಳಿದ್ದೇನೆ. ದೇಶದಲ್ಲಿಯ ಯೋಜನೆಗಳಿಗಾಗಿ ಹಣ ಒದಗಿಸಲು ಯಾವುದೇ ಸರಕಾರವಿರಲಿ ಇದನ್ನು ಮಾಡಲೇಬೇಕಾಗುತ್ತದೆ. ಈಗ ಇರತಕ್ಕ ಟ್ಯಾಕ್ಸ್ ಪ್ರಮಾಣ ಯಾವುದೋ ಒಂದು ಹಿಂದಿನ ಕಾಲದಲ್ಲಿ ಗೊತ್ತು ಮಾಡಿದ್ದಾಗಿದೆ ; ಆದರೆ ಇವೊತ್ತಿನ ದಿವಸ ನಾವು ಜವಾಬ್ದಾರಿಯಿಂದ ವರ್ತಿಸಬೇಕಾಗಿದೆ. ತೆರಿಗೆಯಿಂದ ಬರತಕ್ಕ ಹಣವನ್ನು ಸದ್ವಿನಿಯೋಗವಾಗುವ ಹಾಗೆ ಮಾಡಬೇಕಾಗುತ್ತದೆ.

Mr. SPEAKER.—The House will now adjourn and meet after half an hour.

The House adjourned for recess a Three of the Clock and re-assembled at Thirty Minutes past Three of the Clock.

[MR. SPEAKER in the Chair]

ಶ್ರೀ ಬಿ. ರಾಚಯ್ಯ.—ಸ್ವಾಮಿ, ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಯಾವ ರೀತಿ ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಅವಕಾಶವಿದೆ ಎಂಬುದನ್ನು ಈಗಾಗಲೇ ನಾನು ತಿಳಿಸಿದ್ದೇನೆ. ಖಚಿತವಾಗಿ ಯಾವ ತೆರಿಗೆಯನ್ನೂ ಹಾಕುವುದಕ್ಕೆ ಅವಕಾಶವಿಲ್ಲ ಎಂದು ಆಕ್ಷೇಪಣೆ ಮಾಡಿದರು.

ಶ್ರೀ ಜಿ. ವೆಂಕಟೇಗೌಡ.—ಹಾಕಿದ್ದನ್ನೇ ವಸೂಲು ಮಾಡಿಲ್ಲ !

ಶ್ರೀ ಬಿ. ರಾಚಯ್ಯ.—ಈ ವಿಷಯವನ್ನು ನಾನು ಮೊದಲೇ ತಿಳಿಸಿದ್ದೇನೆ. ಲ್ಯಾಂಡ್ ರೆವಿನ್ಯೂ ಬಾಕಿ, ಎಕ್ಸೈಜ್ ಬಾಕಿ, ವರಮಾನದ ತೆರಿಗೆ ಬಾಕಿ, ಹೀಗೆ ಎಷ್ಟೋ ಇದೆ. ಅದು ಸಾಕಾದಷ್ಟು ಪ್ರಮಾಣದಲ್ಲಿ ವಸೂಲಾಗುತ್ತಿಲ್ಲ. ಇನ್ನೂ ತ್ವರಿತವಾಗಿ, ಕಟ್ಟುನಿಟ್ಟಾಗಿ ವಸೂಲು ಮಾಡಬೇಕೆಂದು ತಿಳಿಸಿದ್ದೇನೆ. ಇದರ ಜೊತೆಗೆ ನಮ್ಮ ಸಂಸ್ಥಾನದಲ್ಲಿ ಲ್ಯಾಂಡ್ ರೆವಿನ್ಯೂ ರೀ ಸೆಟ್ಲ್‌ಮೆಂಟ್ ಆಗುವುದಕ್ಕೆ ತಡವಾದದ್ದರಿಂದ, ಈಗ ಸದ್ಯಕ್ಕೆ 50 ಎಕರೆ ಜಮೀನಿಗಿಂತ ಮೇಲ್ಪಟ್ಟು ಜಮೀನಿರತಕ್ಕವರು ಇಷ್ಟು ಕೊಡಬೇಕೆಂದಾಗಲೀ ಅಥವಾ 50 ರೂಪಾಯಿಗಿಂತ ಜಾಸ್ತಿ ಕಂದಾಯ ಕೊಡತಕ್ಕವರು ಹೆಚ್ಚಿನ ರೀತಿಯಲ್ಲಿ ತೆರಿಗೆ ಕೊಡಬೇಕೆನ್ನುವುದಾಗಲಿ, ಅಥವಾ ವ್ಯಾಪಾರಸ್ಥರು ತಮ್ಮ ಲಾಭದ ಮೇಲೆ ಇಷ್ಟು ಪರ್ಸೆಂಟ್ ತೆರಿಗೆ ಕೊಡಬೇಕೆಂದಾಗಲೀ ಈ ರೀತಿ ತೆರಿಗೆ ಹಾಕುವುದಕ್ಕೆ ಅವಕಾಶವಿದೆ. ಮತ್ತು ಈಗಾಗಲೇ ಸೂಚಿಸಿರುವಂತೆ ಪ್ರಯಾಣಮಾಡತಕ್ಕ ವಾಹನಗಳ ಮೇಲೆ ಮತ್ತು ಸಾಮಾನುಗಳದರದಲ್ಲಿ ಶೇಕಡ ಇಷ್ಟು ಕೊಡಬೇಕೆಂದು ಹೇಳಿರುವುದನ್ನು ಒಪ್ಪಿಕೊಂಡು, ಇಷ್ಟು ಅನೇಕ ಇಲಾಖೆಗಳಲ್ಲಿ ಉಳಿತಾಯ ಮಾಡುವುದಕ್ಕೂ ಮತ್ತು ಹೆಚ್ಚಿನ ರೀತಿಯಲ್ಲಿ ಆದಾಯವನ್ನು ಬರಮಾಡಿಕೊಳ್ಳುವುದಕ್ಕೂ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈ ದುಡ್ಡನ್ನು ಏಕೆ ಕೇಳುತ್ತಾ ಇದ್ದೇನೆ ಎಂದರೆ ಸರ್ಕಾರದವರು ದೇಶದಲ್ಲಿ ಈಗಾಗಲೇ ಸಣ್ಣ ನೀರಾವರಿ ಯೋಜನೆಗಳು, ದೊಡ್ಡ ನೀರಾವರಿ ಯೋಜನೆಗಳು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರಸ್ತೆ ವಗೈರೆಗಳನ್ನು ತೆಗೆದುಕೊಂಡು ದುರಸ್ತು ಮಾಡಿಸುತ್ತ ಇದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಎನ್.ಇ.ಎಸ್. ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಪಿ.ಡಬ್ಲ್ಯು. ಇಲಾಖೆಯವರು ತೆಗೆದುಕೊಂಡು ಇನ್ನು ಹೆಚ್ಚಿನ ರೀತಿಯಲ್ಲಿ ವ್ಯವಸ್ಥಿತವಾಗಿ ನಡೆಸಬೇಕಾದರೆ, 50 ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದೀರಿ. ಇಡೀ ಮೈಸೂರು ಸಂಸ್ಥಾನದಲ್ಲಿರತಕ್ಕ ಹಳ್ಳಿಗಾಡಿನಲ್ಲಿ ಒಂದು ಗ್ರಾಮಕ್ಕೆ ಕೂಡ ರಸ್ತೆ ಮಾಡುವುದಕ್ಕಾಗದಿದ್ದ ಪಕ್ಷದಲ್ಲಿ ಇನ್ನು ಯಾವ ಸೌಕರ್ಯ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಈಗ ಕೊಟ್ಟಿರುವ 50 ಲಕ್ಷ ರೂಪಾಯಿ ಸಾಕಾಗುವುದಿಲ್ಲ. ರೂರಲ್ ಕಮ್ಯೂನಿಕೇಷನ್ಸಿಗೆ 2 ಕೋಟಿ ರೂಪಾಯಿ ಆದರೂ ಕೊಟ್ಟಿದ್ದ ಪಕ್ಷದಲ್ಲಿ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗುವ ರಸ್ತೆಯನ್ನು ಮಾಡಿಸಲು ಅವಕಾಶವಾಗುತ್ತಿತ್ತು. ಈಗ ಕೊಟ್ಟಿರತಕ್ಕ ದುಡ್ಡು ಸಾಲದು; ಅದನ್ನು ಹೆಚ್ಚಿಸಬೇಕೆಂದು ಹೇಳುತ್ತೇನೆ.

ಮತ್ತೆ ಸಣ್ಣ ನೀರಾವರಿ ಯೋಜನೆಯಲ್ಲಿ ಒಂದು ಹೊಸ ಸಮಸ್ಯೆಯನ್ನು ಮಾಡಲಾಗಿದೆ. ಒಂದು ಸ್ಪೆಷಲ್ ಇನ್‌ವೆಸ್ಟಿಗೇಟಿಂಗ್ ಸರ್ಕಲ್ ಮಾಡಿದ್ದಾರೆ. ಅದನ್ನು ನೋಡಿದ್ದೇ ಆದರೆ ಅಲ್ಲಿರತಕ್ಕ ಸಿಬ್ಬಂದಿ ಬಹಳ ಕಡಮೆ, ಮತ್ತು ಕೊಟ್ಟಿರತಕ್ಕ ಸೌಲಭ್ಯ ಏನೇನೂ ಇಲ್ಲ. ಲೆವಲಿಂಗ್ ಇನ್‌ಸ್ಟ್ರುಮೆಂಟ್ಸ್ ತರಿಸುವುದಕ್ಕೆ ಕಷ್ಟವಾಗಿದೆ. ಎಂದರೆ ಸುಮ್ಮನೆ ಸಂಬಳಕೊಟ್ಟು ಕೆಲಸ ಕಾರ್ಯಗಳು ಸರಿಯಾದ ರೀತಿಯಲ್ಲಿ, ಸಕಾಲದಲ್ಲಿ ಆಗದಂತಾಗಿದೆ. ಆದುದರಿಂದ ಇನ್‌ವೆಸ್ಟಿಗೇಟಿಂಗ್ ಸರ್ಕಲ್‌ಗೆ ಹೆಚ್ಚಿನ ಸಿಬ್ಬಂದಿ ಮತ್ತು ಬೇಕಾಗಿರತಕ್ಕ ಸಲಕರಣೆಗಳನ್ನು ಆದಷ್ಟು ಬೇಗ ಕೊಟ್ಟು ಅದಕ್ಕೆ ಒದಗಿಸಿರತಕ್ಕ ಹಣವನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ.

ಹಿಂದೆ ಮಾನ್ಯ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಹೇಳುವಾಗ 1924ನೆಯ ಇಸವಿಯಲ್ಲಿ ಮೈಸೂರು ಸರ್ಕಾರಕ್ಕೂ ಮದ್ರಾಸು ಸರ್ಕಾರಕ್ಕೂ ಒಂದು ಒಪ್ಪಂದ ಆಯಿತು ಎಂದು ಹೇಳಿದ್ದಾರೆ ಆಗಿನ ರಾಜಕೀಯ ಪರಿಸ್ಥಿತಿಯೇ ಬೇರೆ ಇತ್ತು. ಮೈಸೂರು ಸಂಸ್ಥಾನ ದೇಶೀಯ ಸಂಸ್ಥಾನವಾಗಿತ್ತು. ಮದ್ರಾಸ್ ಪ್ರಾವಿನ್ಸ್ ನೇರವಾಗಿ ಬ್ರಿಟಿಷರ ಆಡಳಿತದಲ್ಲಿತ್ತು. ಆದುದರಿಂದ ಯಾವುದೋ ಒಂದು ಒತ್ತಡಕ್ಕೆಸಿಕ್ಕಿ ಮೈಸೂರಿನವರು ಇಂಥಾ ಟರ್ಮ್ಸ್ ಅಂಡ್ ಕಂಡೀಷನ್ಸ್‌ಗೆ ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಇತ್ತು. ಇವೊತ್ತಿನ ದಿವಸ 1924ನೆಯ ಇಸವಿ ಅಗ್ರಿಮೆಂಟ್ ಪ್ರಕಾರ ನಮ್ಮ ಸಂಸ್ಥಾನದಲ್ಲಿ ಎಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆಯೋ ಅದನ್ನೂ ಕೂಡ ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಇರತಕ್ಕ ಚಾನಲ್‌ಗಳಿಗೆ ಬೆಟರ್‌ಮೆಂಟ್ ಡ್ಯೂಟಿ ಹಾಕಿ $\frac{1}{3}$ ಭಾಗದಷ್ಟು ಜಮೀನನ್ನು ನಾವು ಹೆಚ್ಚಿಗೆ ಸಾಗಿಗೆ ತರುವುದಕ್ಕೆ ಅವಕಾಶವಿತ್ತು. ಅದನ್ನೂ ಕೂಡ ಮಾಡಿಕೊಳ್ಳುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಕಾರಣ ಮದ್ರಾಸ್ ಸರ್ಕಾರದವರು ತಮಗೆ ಬೇಕಾದ ರೀತಿಯಲ್ಲಿ, ಮಂತ್ರಿಗಳ ಪ್ರಶ್ನೆಗೆ ಉತ್ತರ ಹೇಳಿದ ರೀತಿಯಲ್ಲಿ, ಆ ಅಗ್ರಿಮೆಂಟಿಗೆ ವಿರೋಧವಾಗಿ ಹೊಸಯೋಜನೆಗಳನ್ನು ಮಾಡಿಕೊಂಡಿದ್ದಾರೆ. ನಾವು ಮಾತ್ರ ಕೃಷ್ಣರಾಜಸಾಗರದ ವಿಷಯದಲ್ಲಿ 1924ನೆಯ ಇಸವಿಯಲ್ಲಿ ಅವರಿಗೆ ಒಪ್ಪಂದಕೊಟ್ಟ ಪ್ರಕಾರ ನೀರು ಹೆಚ್ಚಿಗೆ ಬರಲಿ, ಬಾರದೆ ಹೋಗಲಿ ಅವರಿಗೆ ಕೊಡಬೇಕಾದ ನೀರನ್ನು ಕೊಡಲೇಬೇಕಾಗಿದೆ. ಈ ರೀತಿ ಕಾವೇರಿ ವ್ಯಾಲಿಯಲ್ಲಿ ಮತ್ತು ಉಪನದಿಗಳಲ್ಲಿ ನೀರನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗಿತ್ತೋ ಅದು ಆಗಿಲ್ಲ. ಕಾಲುವೆಗಳ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಕಾಲುವೆಗಳಿಗೆ ಜಮೀನು ಸೇರಿಲ್ಲವೆಂದು ಮದ್ರಾಸು ಸರ್ಕಾರದವರು ಅಡ್ಡಿ ಮಾಡುತ್ತಿದ್ದಾರೆ.

ಯಾವ ಯಾವ ಕಾಲುವೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆಯೋ ಅದರ ಪ್ರಕಾರ ಉಪಯೋಗಿಸಿಕೊಳ್ಳುವುದಕ್ಕೆ ನಮ್ಮ ಸರ್ಕಾರ ಏನು ಕ್ರಮ ತಗೆದುಕೊಂಡಿದ್ದಾರೆ? ನನಗೆ ತಿಳಿದ ಹಾಗೆ ಆಗಿನ ಪರಿಸ್ಥಿತಿಯೇ ಬೇರೆಯಾಗಿತ್ತು. ಈಗ ಇಂಡಿಯಾ ದೇಶದ ಪರಿಸ್ಥಿತಿ ಬೇರೆ ಇದೆ. ಇಂಡಿಯಾ ಸರ್ಕಾರದವರು ಎಲ್ಲಾ ಸಂಸ್ಥಾನಗಳ ಮೇಲ್ವಿಚಾರಣೆಯಲ್ಲಿರುವಾಗ ಮತ್ತು ಎಲ್ಲಾ ಸಂಸ್ಥಾನಗಳಿಗೂ ಸಮನ್ವಯವಾದ ಕಾನೂನನ್ನು ಜಾರಿಗೆ ಕೊಡತಕ್ಕ ಪರಿಸ್ಥಿತಿ ಇರುವಾಗ, ನೀರಿನ ಹಂಚಿಕೆಯ ವಿಷಯದಲ್ಲಿ ಎರಡು ಸಂಸ್ಥಾನಗಳಿಗೂ ಸಮಾಧಾನವಾಗುವ ರೀತಿಯಲ್ಲಿ ಅಗ್ರಿಮೆಂಟ್‌ಗಳನ್ನು ಪುನರ್ ವಿಮರ್ಶೆ ಮಾಡಬೇಕು. ಈ ರೀತಿ ಮಾಡಬೇಕೆಂದು

ಇಂಡಿಯಾ ಸರ್ಕಾರಕ್ಕೆ ಒತ್ತಾಯ ಮಾಡಿ ನಮ್ಮ ಸಂಸ್ಥಾನಕ್ಕೆ ಬರಬೇಕಾದ ಹೆಚ್ಚಿನ ನೀರಿನ ಸೌಲಭ್ಯವನ್ನು ಪಡೆದು ಆ ರೀತಿ ಕೆಲಸ ಕಾರ್ಯಗಳು ನಡೆಯಲಿಕ್ಕೆ ಅನುಕೂಲವಾಗುವಂತೆ ಮಾಡಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಪ್ರೊಹಿಬಿಷನ್ ವಿಷಯದಲ್ಲಿ ಹೇಳುವುದಾದರೆ, ಈ ವಿಷಯದಲ್ಲಿ ಬಹಳ ಜನ ಟೀಕೆ ಮಾಡುತ್ತಿದ್ದಾರೆ. ಪ್ರೊಹಿಬಿಷನ್ ಶ್ರೀ ಶ್ರೀನಿವಾಸಶೆಟ್ಟಿಯವರಿಗೆ ಹೇಗೆ ನೆಚ್ಚಿನ ಸಬ್ಜೆಕ್ಟೋ, ಹಾಗೆಯೇ ನನಗೂ ನೆಚ್ಚಿನ ಸಬ್ಜೆಕ್ಟ್. ಪ್ರೊಹಿಬಿಷನ್ನಿನಿಂದ ಉತ್ಪತ್ತಿ ಹೋಗಬಹುದು. ಹೋದರೂ ಚಿಂತೆಯಿಲ್ಲ. ಕುಡಿತ ತಪ್ಪಿಸಬೇಕು. ಅದು ನನ್ನ ಜೀವನದ ಗುರಿಯೆಂದು ನಾನು ಭಾವಿಸಿಕೊಂಡಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಕಳ್ಳಬಟ್ಟಿ ಸಾರಾಯಿ ಜಾಸ್ತಿಯಾಗುತ್ತಿದೆ ಅದನ್ನು ನಿಲ್ಲಿಸಿ. ಯಾರೂ ಈ ಕಸುಬಿನಲ್ಲಿ ದುಡ್ಡು ಸಂಪಾದನೆ ಮಾಡಬಹುದೋ ಅವರು ಕಳ್ಳಬಟ್ಟಿ ಸಾರಾಯಿ ಇಳಿಸುತ್ತಿದ್ದಾರೆ, ಬಾಕಿಯವರು ಉಪಕರಣವನ್ನು ಹೊಂದಿಸಿಕೊಂಡು ಮಾಡುವುದಕ್ಕಾಗುವುದಿಲ್ಲ. ಪ್ರತಿಯೊಬ್ಬರೂ ಕಳ್ಳಬಟ್ಟಿ ಸಾರಾಯಿ ಮಾಡುತ್ತಾರೆ ಎಂದು ಹೇಳುತ್ತಾರೆ ಅದು ನಿಜವಲ್ಲ. ಮಲೆನಾಡು ಕಾಡುಪ್ರದೇಶ ಆ ಪ್ರದೇಶದಲ್ಲಿರುವವರು ಒಬ್ಬಿಬ್ಬರು ಮಾಡುವುದಕ್ಕೆ ಅವಕಾಶವಿರುತ್ತದೆ. ಆದರೆ ಅದು ಗೃಹಕೈಗಾರಿಕೆಯಾಗಿಲ್ಲ ಎಂದು ಹೇಳುತ್ತೇನೆ ಮತ್ತು ಕಳ್ಳಬಟ್ಟಿ ಸಾರಾಯನ್ನು ಕುಡಿಯುವುದರಿಂದ ಆರೋಗ್ಯ ಕೆಡುತ್ತದೆ ಎಂದು ಹೇಳಿದರು. ಅದನ್ನು ಕಾಪಾಡುವುದು ನಮ್ಮ ಕರ್ತವ್ಯ, ಯಾವ ಜನಾಂಗ ಹಿಂದಿನಿಂದ ಕುಡಿತದ ಹಾವಳಿಯಲ್ಲಿ ಸಿಕ್ಕಿ ನೊಂದಿದ್ದಾರೆ ಎಂದು ತಾವು ಭಾವಿಸಿಕೊಂಡು ಅದನ್ನು ಅವರಿಂದ ತಪ್ಪಿಸಬೇಕು ಎಂದು ಜಾರಿಗೆ ತಂದಿದ್ದೀರೋ ಆ ಜನಾಂಗ ಇದರಿಂದ ವಿಮುಕ್ತರಾಗಿ ಉತ್ತಮ ಜೀವನ ಮಾಡುವುದಕ್ಕೆ ಅವಕಾಶವಾಗಿದೆ.

ಶ್ರೀ ಎಂ. ರಾಮಪ್ಪ.—ಅವರು ಬಿಟ್ಟುಬಿಟ್ಟಿದ್ದಾರೆ ಆದರೆ ಬೇರೆಯವರು ಕುಡಿಯುತ್ತಿದ್ದಾರೆ ಎಂಬುದು ಗೊತ್ತಿದೆಯೇ ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ವರ್ತಕರು ಮಾರಾಟ ಮಾಡುವವರು ಕಳ್ಳಬಟ್ಟಿ ಸಾರಾಯಿ ಕುಡಿದ ಕೇಸು ಎಷ್ಟು ಬಂದಿದೆ, ಯಾರು ಯಾರು ಕುಡಿಯುತ್ತಿದ್ದಾರೆ ಎಂಬುದನ್ನು ವಿಮರ್ಶೆ ಮಾಡಿ ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಕಳ್ಳಬಟ್ಟಿ ಸಾರಾಯಿ ಕೇಸುಗಳು ಹೆಚ್ಚಾಗಿವೆ, ಆದದರಿಂದ ಅದನ್ನು ಸ್ಕ್ರಾಪ್ ಮಾಡಬೇಕೆಂದು ಹೇಳುತ್ತಾರೆ. ಆದರೆ ಅನೇಕ ಪೀನಲ್ ಆಕ್ಟ್ಸ್ ಮಾಡಿದ್ದಾರೆ. ಪೋಲೀಸ್ ಇಲಾಖೆ ಇದೆ. ಆದಾಗ್ಯೂ ದೇಶದಲ್ಲಿ ಆಗತಕ್ಕಂಥ ಕಳ್ಳತನ ತಪ್ಪಿಲ್ಲ ಮರ್ಡರ್ ಕೇಸ್ ತಪ್ಪಿಲ್ಲ ದರೋಡೆ ತಪ್ಪಿಲ್ಲ. ಅದಕ್ಕೋಸ್ಕರ ಆ ಕಟ್ಟುಗಳನ್ನು ತೆಗೆದು ಹಾಕುವುದಕ್ಕಾಗುತ್ತದೆಯೇ ? ಕಳ್ಳಬಟ್ಟಿ ಸಾರಾಯಿ ಇಲ್ಲ ಎಂದು ಹೇಳುವುದಿಲ್ಲ ಇರತಕ್ಕದ್ದನ್ನು ಕಡಮೆ ಮಾಡಬೇಕು. ಹಿಡಿದನೀತಿಯನ್ನು ಮುಂದು ವರಿಸುವುದಕ್ಕೆ ಏನು ಮಾಡಿದ್ದಾರೆ ಎಂಬುದನ್ನು ಹೇಳಿದರೆ ಒಪ್ಪಿಕೊಳ್ಳುತ್ತೇನೆ. ಅವರು ವ್ಯಾಪಾರಸ್ಥರ ಪರವಾಗಿ ವಾಲುವ ಸ್ಥಿತಿ ಕಾಣುತ್ತದೆ. ಹಣಕಾಸಿನ ಕೊರತೆಇದೆ ಎಂದು ಹೇಳುತ್ತಾರೆ. ಇದನ್ನು ಇಂಟ್ರಡ್ಯೂಸ್ ಮಾಡಿದರೆ ದೇಶ ಇನ್ನೂ ಸುಭದ್ರ ಸ್ಥಿತಿಯಲ್ಲಿ ಇರುತ್ತದೆ ಶ್ರೀ ಎನ್. ರಾಚಯ್ಯನವರು ಇದಕ್ಕೆ ಬ್ರೇಕ್ ಹಾಕಿದ ಹಾಗೆ ಕಾಣುತ್ತದೆ. ಪಾನನಿರೋಧವನ್ನು ಇನ್ನು ನಾಲ್ಕು ವರ್ಷಗಳಲ್ಲಿ ದೇಶದಾದ್ಯಂತ ಜಾರಿಗೆ ತರುತ್ತೇವೆ ಎಂದು ಹೇಳಿದ್ದಾರೆ. ಈ ವರ್ಷ ಕೊನೆಯ ಪಕ್ಷ ಎರಡು ಜಿಲ್ಲೆಗಳಲ್ಲಿ ಜಾರಿಗೆ ತರುವುದಕ್ಕೆ ಹೋಗಿದ್ದರೆ, ಇನ್ನು ಉಳಿದದ್ದನ್ನು ಎರಡು ವರ್ಷಗಳಲ್ಲಿ ತರುವುದಕ್ಕೆ ಆಗುತ್ತದೆ. ಆ ರೀತಿ ಮಾಡದೆ ಇರುವುದನ್ನು ನೋಡಿದರೆ ಸಮಾಜ ಕಲ್ಯಾಣಕ್ಕೆ ಹೆಚ್ಚಾಗಿ ಕೊಟ್ಟಂಥ ದುಡ್ಡು ಕುಡಿತಕ್ಕೆ ಹೋಗುತ್ತದೆ. ಕುಡಿತದಿಂದ ಬರತಕ್ಕ ದುಡ್ಡಿನಿಂದ ದೇಶವನ್ನು ಕಟ್ಟಬೇಕಾಗಿಲ್ಲ. ಎಲ್ಲಾ ಕುಡಿಯುತ್ತಾರೆ ಎಂದು ಹೇಳಿದ ಪಕ್ಷದಲ್ಲಿ ಹರಿಜನರ ಕೇರಿ ಎಲ್ಲಿದೆ ಅಲ್ಲೇ ಅಂಗಡಿಗಳನ್ನು ಇಡಿಸುತ್ತೀರಿ, ಅದನ್ನು ಈಗ ಬದಲಾಯಿಸಿಲ್ಲ. ಇಂಥಾ ವಿಧಾನ ಸೌಧದ ರೆಜಿಸ್ಟ್ರೇಟರ್ಸ್ ಹೋಮ್‌ನಲ್ಲಿ ಎರಡು ಅಂಗಡಿಗಳನ್ನು ಇಡಿ.

ಶ್ರೀ ಎನ್. ರಾಚಯ್ಯ.—ಎಲ್ಲಾ ವರ್ಗದವವರು ಕುಡಿದು ಕೆಟ್ಟು ಹೋಗುತ್ತಿದ್ದಾರೆ ಎಂದು ಹೇಳಿದರು. ಆದುದರಿಂದ ಎಲ್ಲಾ ವರ್ಗದವರನ್ನೂ ಕುಡಿತದಿಂದ ತಪ್ಪಿಸಿ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹೆಂಡದ ಪಡಕಾನೆಯನ್ನು ತೆಗೆದು ನೀರಾ ಪಡಕಾನೆಯನ್ನು ಇಟ್ಟಿದ್ದೀರಿ, ಆದರೆ ನೀರವೂ ಕೂಡ ಕ್ರಮೇಣ ಹೆಂಡವಾಗುತ್ತದೆ. ಆದುದರಿಂದ ನೀರಾ ಕುಡಿಯುವುದನ್ನು ತಪ್ಪಿಸಬೇಕು.

ಶ್ರೀ ಬಿ. ರಾಚಯ್ಯ.—ಶ್ರೀ ರಾಚಯ್ಯನವರು ಒಂದು ಕಡೆ ಪಾನನಿರೋಧವನ್ನು ಜಾರಿಗೆ ಕೊಡುತ್ತಾರೆ. ಇನ್ನೊಂದು ಕಡೆ ನೀರಾ ಅನ್ನು ಉಪಯೋಗಿಸಲು ಅವಕಾಶ ಕೊಡುತ್ತಾರೆ. ನೀವು ಕೊಡದೆ ಇರಬಹದು, ಖಾದಿ ಮತ್ತು ಗ್ರಾಮೋದ್ಯೋಗದವರು ನೀರಾ ಕೇಂದ್ರಗಳನ್ನು ಕೊಡುತ್ತಾರೆ ಎಂದು ಹೇಳಬಹುದು. ಅಲ್ಲಿ ಇರುವ ಅನುಯಾಯಿಗಳು ಬೇರೆ ಅಲ್ಲ, ಅವರೂ ಗಾಂಧಿ ಅನುಯಾಯಿಗಳು. ಬಿಸಿಲು ಬಂದಾಗ ನೀರಾ ಫರ್‌ಮಂಟೇಷನ್ ಆಗಿ ಹೆಂಡವಾಗುತ್ತದೆ. ಯಾವ ಜನಾಂಗ ಈ ಕುಡಿತಕ್ಕೆ ಸಿಕ್ಕಿದೆ ಅದನ್ನು ಇದರಿಂದ ವಿಮೋಚನೆ ಮಾಡಿ ಅವರನ್ನು ಒಳ್ಳೆಯ ಸದ್ಭಾವನೆಗೆ ಎಳೆದುಕೊಂಡು ಹೋಗುವುದಕ್ಕೆ ಮನಸ್ಸಿಲ್ಲದೆ ಈ ರೀತಿ ಮಾಡುತ್ತಾರೋ ಎಂದು ಶಂಕೆ ಬರುತ್ತದೆ ಅದಕ್ಕೆ ನಾನು ಶ್ರೀಮಾನ್ ಎನ್. ರಾಚಯ್ಯನವರಿಗೆ ಹೇಳುವುದು ಇಷ್ಟೇ. ತಮಗೆ ಇದರಲ್ಲಿ ನಂಬಿಕೆ ಇದ್ದರೆ ನೀರಾ ನಿಲ್ಲಿಸಿ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಅನೇಕ ದೂರುಗಳು ಬರುತ್ತಿವೆ. ಆದರೆ ಅವು ನಿಮ್ಮ ಗಮನಕ್ಕೆ ಬರುತ್ತಾ ಇಲ್ಲ.

ಇನ್ನು ಸಮಾಜ ಕಲ್ಯಾಣದ ವಿಷಯದಲ್ಲಿ ಹೇಳುತ್ತೇನೆ. ಅನೇಕ ಕಡೆ ಇವರ ಕೈಗೆ ಈ ಇಲಾಖೆ ಬಂದ ಮೇಲೆ ಜನರನ್ನು ಸ್ವಲ್ಪ ಹುರಿದುಂಬಿಸಿ ಉತ್ಸಾಹದಿಂದ ಕೆಲಸ ಮಾಡಬೇಕು ಎಂದು ಮಾನ್ಯ ಸಚಿವರು ಮಾಡುತ್ತಿದ್ದ ಹಾಗೆ ಕಾಣುತ್ತದೆ. ಸಮಾಜಕಲ್ಯಾಣ ಇಲಾಖೆಗೆ ಏನೇನು ಪ್ರಪೋಸಲ್ಸ್ ಹೋಗುತ್ತವೋ ಅವುಗಳಿಗೆ ಬೇರೆ ಇಲಾಖೆಗಳಿಂದ ಹೋದ ಪ್ರಪೋಸಲ್ಸ್ ಹಾಗೆ ಮನ್ನಣೆ ದೊರೆಯುತ್ತಾ ಇಲ್ಲ. ಕೆಲಸ ಕಾರ್ಯಗಳು ನಿರೀಕ್ಷಿಸಿದ ಕಾಲದಲ್ಲಿ ಎಷ್ಟು ಮಟ್ಟಿಗೆ ನಡೆಯಬೇಕಾಗಿದ್ದುವೋ ಅಷ್ಟರಮಟ್ಟಿಗೆ ನಡೆಯದೆ ಅವು ನಿಂತು ಹೋಗುತ್ತಿವೆ. ಮಂಜೂರು ಆದ ಕೆಲಸ ಕಾರ್ಯಗಳು ಆಗದೆ ನಿಂತುಹೋಗಿವೆ. ಅದಕ್ಕೆ ಯಾರು ಯಾರು ಕಾರಣಕರ್ತರು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಈ ರೀತಿ ಕೆಲಸಕಾರ್ಯಗಳು

(ಶ್ರೀ ಬಿ. ರಾಚಯ್ಯ)

ಆಗದೆ ನಮ್ಮ ಸಮಾಜ ಕಲ್ಯಾಣದ ಗುರಿ ತಪ್ಪಿ ಯಾರಿಗೋ ಕೆಲವರಿಗೆ ಮಾತ್ರ ಕಲ್ಯಾಣವಾಗುತ್ತಿದೆ ಎಂದು ಮಾತ್ರ ಹೇಳುತ್ತೇನೆ.

ಈ ಸಮಾಜ ಕಲ್ಯಾಣದ ಬಾಬಿನಲ್ಲಿ ಹೌಸಿಂಗ್ ಸ್ಕೀಂ ಇದೆ. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟಿಸುವುದಕ್ಕೆ, ಹಳ್ಳಿಗಾಡಿನಲ್ಲಿ ರಿಕ್ರಿಯೇಷನ್ ಸೆಂಟರ್ ತೆರೆಯುವಂತೆ, ಕಮ್ಯೂನಿಟಿ ಹಾಲ್ ತೆರೆಯುವಂತೆ ಇಂಥ ಯೋಜನೆಗಳಿವೆ. ಹಿಂದೆ ರಾಮಮಂದಿರ ಕಟ್ಟುತ್ತಿದಂತೆ ಕಮ್ಯೂನಿಟಿ ಹಾಲ್ ಕೊಡಬೇಕೆಂದಿದೆ. ನೂರು ಜನ ಹರಿಜನಸಂಸಾರಗಳಿದ್ದರೆ ಒಂದು ಕಮ್ಯೂನಿಟಿ ಹಾಲ್ ಅಥವಾ ರಾಮಮಂದಿರ ಕೊಡಬೇಕೆಂದಿತ್ತು. ಆದರೆ ಯಾರಿಗೆ ಬೇಕೋ ಅವರಿಗೆ ಮಾತ್ರ ಅನುಕೂಲ ವಾಗುತ್ತಿದೆ. ಚಾಮರಾಜನಗರ ಹಾಸ್ಟಲು ವಿಷಯವನ್ನು ಶ್ರೀಮಾನ್ ಎನ್. ರಾಚಯ್ಯನವರ ಬಳಿ ಹಿಂದೆ ಪ್ರಸ್ತಾಪಿಸಿದ್ದೆ. ಕೆಲಸ ನಿಲ್ಲಿಸಿ ಎಂದು ನಾನು ಹೇಳಲಿಲ್ಲವೆಂದು ಹಿಂದೆ ಒಂದು ಪ್ರಶ್ನೆಗೆ ಉತ್ತರ ಹೇಳಿದರು. ಆದರೆ 20-10-1959ಕ್ಕೆ ಟೆಂಡರು ಕರೆದು ಮತ್ತೆ ಟೆಂಡರ್ ತಾರೀಖನ್ನು ರದ್ದು ಮಾಡಿದ್ದಾರೆ. ಇದರಿಂದ ಮೇಲಿನ ಅಂತಸ್ತಿನ ಕೆಲಸವನ್ನು ನಿಲ್ಲಿಸಿದ್ದಾರೆ. ಕಾರಣ ತಿಳಿಯದು. ವ್ಯವಸಾಯದ ಕಾಲೋನಿಗೆ ಸಂಬಂಧಪಟ್ಟಂತೆ 1959ನೆಯ ಇಸವಿ ಆಗಸ್ಟ್ 11ರಲ್ಲಿ Government Order No. AFD 330 DST 58ರ ಪ್ರಕಾರ ಚಾಮರಾಜನಗರ ಸ್ಟೇಟ್ ಫಾರೆಸ್ಟಿನ 600 ಎಕರೆ ಪ್ರದೇಶವನ್ನು ರಿಲೀಸ್ ಮಾಡಿ ಹರಿಜನರು ಮತ್ತು ಲಂಬಾಣಿ ಜನಾಂಗದವರಿಗಾಗಿ ವ್ಯವಸಾಯದ ಕಾಲೋನಿಯನ್ನು ಮಾಡಬೇಕೆಂದು ನಿರ್ಧಾರವಾಯಿತು. ಆದರೆ ಪಕ್ಕದ ಗ್ರಾಮದವರಾದ ಕೋಡಿ ಉಗನೆ ಮತ್ತು ಬಿಸಲವಾಡಿ ಗ್ರಾಮಸ್ಥರನ್ನು ಬಿಟ್ಟು ಮೂಗೂರು, ಕಾಳವಾಡಿ ಫಿರ್ಕ ಇಗ್ಲೂರಿನವರಿಗೆ, ಕೆಲವರಿಗೆ ಮಾತ್ರ ಅಲ್ಲಿ ಸ್ಥಳ ಅಲಾಟ್ ಮಾಡಿ ಬಾಕಿಯವರಿಗೆ ಹೆದರಿಸಿ ಸರ್ಕಾರ ಹೇಳಿದ ಹಾಗೆ ಕೇಳಬೇಕೆಂದು ಹೇಳಿರುತ್ತಾರೆ. ಈ ರೀತಿ ಮಾಡುವುದು ಸರಿಯಲ್ಲ.

ಎನ್. ರಾಚಯ್ಯ.—ಮಾನ್ಯ ಸದಸ್ಯರೂ ಅಲ್ಲಿನವರೂ ಕರೆದುಕೊಂಡು ಹೋಗಿ ಅಲ್ಲಿ ಕಾಲೋನಿ ಮಾಡಬೇಕೆಂದು ಹೇಳಲಿಲ್ಲವೆ?

ಶ್ರೀ ಬಿ. ರಾಚಯ್ಯ.—ತಾವು ಇನ್‌ಸ್ಟ್ರಕ್ಷನ್ಸ್ ಕೊಟ್ಟ ಪ್ರಕಾರ ಸರ್ಕಾರಿ ಆಜ್ಞೆ ಮೊದಲು ಆಗಿತ್ತು. ಆದರೆ ಆದಾದಮೇಲೆ ಮತ್ತೆ ಹಿಂದೆ ಕೊಟ್ಟ ಇನ್‌ಸ್ಟ್ರಕ್ಷನ್ಸ್‌ಗೆ ಪ್ರತಿಯಾಗಿ ಸರಕಾರೀ ಹುಕುಂಗೆ, ವಿರುದ್ಧವಾಗಿ ಇನ್‌ಸ್ಟ್ರಕ್ಷನ್ಸ್ ಕೊಟ್ಟಿರುವುದು ನಿಜವಲ್ಲವೆ?

ಶ್ರೀ ಎನ್. ರಾಚಯ್ಯ.—ಯಾರು ರಿಲೀಜ್ ಆಗಿರುವ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡಿದ್ದರೋ ಅವರಿಗೆ ಕೊಡಬೇಕು, ಹೊರಗಡೆಯಿರುವವರಿಗೆ ಪ್ರಾಶಸ್ತ್ಯಕೊಡಬಾರದು ಎಂದು ಹೇಳಿದೆ. ಆದುದರಿಂದ ಮಾನ್ಯ ಸದಸ್ಯರು ಹೇಳುವುದು ತಪ್ಪು.

SRI B. RACHIAH.—This is the Government Order :—

"G.O. No. AFD. 330 DST. 58, dated 11th August 1959.

Read :—Government Order No. AFD 330 DST 58, dated 18th May, 1959 releasing an area of 600 acres of land in one Block at 138th mile in Chamarajanagar State Forest, Mysore, to the Harijan and Lambani Community people.

Order :—In modification of the orders issued in Government Order No. AFD. 330 DST. 58, dated 18th May 1959, Government is pleased to direct that the area ordered to be disforested therein should in addition to the grantees referred to in the said order be also assigned to 50 families of Kodi Ugane and 31 families of Bisalvadi villages which are adjoining the areas ordered to be disforested in the said Government Order of 18th May 1959. Government is also pleased to direct that these facilities be included in the proposed Co-operative Farming Society to be organised by the grantees."

ಈ ರೀತಿ ಖಚಿತವಾಗಿ ಗೌರ್ನಮೆಂಟ್ ಆರ್ಡರು ಮಾಡಿ ಆ ಆರ್ಡರಿಗೆ ವಿರುದ್ಧವಾಗಿ ಹತ್ತಿರದಲ್ಲಿದ್ದವರಿಗೆ ಕೊಟ್ಟಿದ್ದಾರೆ, ಯಾರಿಗೆ ಅವಕಾಶ ಸಿಕ್ಕಬೇಕಾಗಿತ್ತೋ ಅವರನ್ನು ಹೆದರಿಸಿದ್ದಾರೆ. ಈ ದಿವಸವಾದರೂ ಆರ್ಡರನ್ನು ತಿದ್ದುಪಡಿಮಾಡಿ ಸರಿಯಾದ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದರೆ ಒಪ್ಪಬಹುದಾಗಿತ್ತು.

SRI N. RACHIAH.—He is making false allegations. I refute them. The Hon'ble Member may know that the land must have been given to some people. Until and unless they go and settle on the spot, no grant can be given. If he is wrong he must resign his membership, or if it is not I will resign my ministership.

SRI B. RACHIAH.—He is always taking a challenge that he is going to resign. This assertion and vehemence will not amount to a Statement of facts. I accept the challenge. Let there be an impartial enquiry.

ಈ ವಿಚಾರದಲ್ಲಿ ಒಂದು ಇಂಪಾರ್ಷಿಯಲ್ ಎಕ್ಸ್‌ಕ್ವೈರಿ ಮಾಡಬೇಕ . ನಾನು ಹೇಳಿದಂತೆ ಮಾಡಿದ್ದಾರೆಯೇ ಇಲ್ಲವೇ ಅದರಿಂದಾಗುವ ಪರಿಣಾಮವೇನು ಎಂಬುದನ್ನು ಪರಿಶೀಲಿಸಬೇಕು, ನಾವು ನಮ್ಮ ನಾಯಕರಾದ ಮಹಾತ್ಮ ಗಾಂಧೀಜಿಯವರ ತತ್ವವನ್ನು ಅನುಸರಿಸಬೇಕಾಗಿದೆ. ರಷ್ಯ, ಚೈನಾ ಮುಂತಾದ ದೇಶಗಳವರೂ ಕೂಡ ಎಗ್ರೆಸಿವ್ ಪಾಲಿಸಿಯನ್ನು ಬಿಟ್ಟಿದ್ದಾರೆ. ಸಮಾಜದಲ್ಲಿ ಹಿಂದುಳಿದ ಜನಾಂಗದ ಸರ್ವತೋಮುಖವಾದ ಉದ್ಧಾರ ವಾಗಬೇಕೆಂದ

ಹೇಳಿ ಒಂದು ಸೆಕ್ಷನ್ ತುಳಿದು ಇನ್ನೊಂದು ಸೆಕ್ಷನ್ನಿಗೆ ಪ್ರೋತ್ಸಾಹ ಕೊಡುವುದು, ಸರ್ಕಾರದ ನೀತಿಗೆ ವಿರುದ್ಧವಾಗಿ ವರ್ತಿಸುವ ಮಂತ್ರಿಗಳಿದ್ದರೆ ದೇಶದಲ್ಲಿ ಸುಭದ್ರ ದಕ್ಷತೆಯಿಂದ ಸರ್ಕಾರಿ ಕೆಲಸ ನಡೆಯುತ್ತದೆಯೇ! ಹೀಗಿರುವಾಗ ದಕ್ಷತೆಯಿಂದ ಆಡಳಿತ ನಡೆಸುತ್ತಿದ್ದೇವೆಂದು ಹೇಳಿದರೆ ಅರ್ಥವಾಗುವುದಿಲ್ಲ. ನನಗೂ ಜವಾಬ್ದಾರಿಯಿದೆ, ಕಾಂಗ್ರೆಸ್ ಸದಸ್ಯನಾಗಿ ನಾನು ಧೈರ್ಯದಿಂದ ಇರುವ ವಿಚಾರವನ್ನು ಹೇಳುತ್ತಿದ್ದೇನೆ. ಸತ್ಯವನ್ನು ಹೇಳುವುದಕ್ಕೆ ಯಾರೂ ಹೆದರಬೇಕಾಗಿಲ್ಲ. ನಾನು ಇದರಿಂದ ಜೀವನ ನಡೆಸಬೇಕಾಗಿಲ್ಲ. ಇದು ಸತ್ಯವಾದ ಮಾತು. ಇದೇ ಮುಖ್ಯ ಮಂತ್ರಿಗಳಿಗೆ ಅಕ್ಟೋಬರ್ 1959ರಲ್ಲಿ ಕಾಗದ ಬರೆದೆ, ಅದಕ್ಕೆ "your letter has been forwarded to the Secretary for Planning and Development" ಎಂದು ಉತ್ತರ ಬಂತು. ಆದರೆ ಸೆಕ್ರೆಟರಿಗಳು ಮಂತ್ರಿಗಳ ವಿಚಾರದಲ್ಲಿ ಏನು ಎಂಕ್ವೈರಿ ಮಾಡಲು ಸಾಧ್ಯ? ಇರುವ ವಿಚಾರ ಹೇಳುತ್ತಿದ್ದೇನೆ.

Sri N. RACHIAH.—But do not make such false allegations.

Sri B. RACHIAH.—There is the fact, I have read the Government order, If the Government is not pleased with my allegations, let them appoint an impartial Committee. Let them go into the matter.

Sri N. RACHIAH.—There is no need to appoint a committee.

ಶ್ರೀ ಬಿ. ರಾಚಯ್ಯ.—ಹಿಂದಿನ ಕಾಲದಲ್ಲಿ ಒಂದು ರಥಕ್ಕೆ ಹತ್ತು ಕುದುರೆಗಳನ್ನು ಕಟ್ಟಿ ಸವಾರಿಮಾಡುತ್ತಿದ್ದರೆಂದು ಹೇಳುತ್ತಾರೆ. ಆ ಕುದುರೆಗಳಿಗೆ ವೀರಾವೇಶ ಬರಲು ಇಂಟಾಕ್ಸಿಕೇಟ್ ಮಾಡುತ್ತಿದ್ದರಂತೆ. ಆ ರೀತಿಯಿಂದ ನಡೆದು ಹೋಗುವಹಾಗೆ ಜತ್ತಿಯವರ ಸರಕಾರದ ವೈಖರಿ ಕಾಣುತ್ತದೆ. ಹತ್ತು ಮಂತ್ರಿಗಳು ಹತ್ತು ದಿಕ್ಕಿನಲ್ಲಿ ಮುಂದುವರಿದ ಹಾಗೆ ಇದೆ. It is something like a person who rode a chariot of ten horses, ultimately losing the control over them.

Sri M. MALLIKARJUNASWAMY.—It is not social welfare which is prevailing in the country, but it is social illfare which is prevailing.

ಶ್ರೀ ಬಿ. ರಾಚಯ್ಯ.—ಹಿಂದೆ ಶಂಕರಾಚಾರ್ಯರು, ಬಸವಣ್ಣನವರು ಅನ್ಯಾಯ ಮಾಡಿದ್ದರೆ ಏನಾಗುತ್ತಿತ್ತು? ಇದನ್ನು ವಿಮರ್ಶೆ ಮಾಡಬೇಕು. ಈಗ ನಡೆಯುವಂತೆ ಮುಂದುವರಿದರೆ ಅನೇಕ ಸಂದರ್ಭಗಳಲ್ಲಿ ಗೌರವಯುತವಾಗಿರುವವರಿಗೆ ಅಪಾಯ ಬರುತ್ತದೆ, ಹಿಂದೆ ಸರ್ಕಾರಕ್ಕೆ ಮನವಿಮಾಡಿಕೊಂಡರೆ ಪರಿಶೀಲನೆಯಾಗುತ್ತಿತ್ತು. ಅದೇ ಈಗಿನ ಪರಿಸ್ಥಿತಿಯನ್ನು ನೋಡಿದರೆ ಸಮಾಜ ಸುಧಾರಣೆಯಾಗುತ್ತದೆಯೆ ಎಂಬ ಅನುಮಾನವಿದೆ.

4 P.M.

ಪತ್ರಿಕೆಗಳಿಗೆ 5 ಸಾವಿರ ರೂಪಾಯಿಗಳ ಗ್ರಾಂಟು ಕೊಡುತ್ತಿದ್ದಾರೆ. ಅದಕ್ಕಾಗಿ ಒಂದು ಅಡ್ವೈಸರಿ ಬೋರ್ಡ್ ಇದೆ. ಆದರೆ ಒಂದು ಗಂಟೆ ಮೀಟಿಂಗ್ ಮಾಡಿದರೆ ವಿಷಯಗಳನ್ನು ಚರ್ಚಿಸಲು ಅವಕಾಶ ಸಾಲುವುದಿಲ್ಲ. ಅಜೆಂಡದಲ್ಲಿರುವ ವಿಷಯಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಜವಾಬ್ದಾರರಾಗಿರುವವರು ಹೋಗಿ ಫೋಟೋಗಳನ್ನು ತೆಗೆಸಿಕೊಳ್ಳುವುದು, ಪತ್ರಿಕಾ ಪ್ರತಿನಿಧಿಗಳ ಜೊತೆ ಮಾತನಾಡುವುದು, ಟಾಕ್ಸ್ ಜೊತೆ ಮಾತನಾಡುವುದು, ಇಷ್ಟು ಆಗಿ ಬಿಟ್ಟರೆ, ನಾವು ಏನು ಇವರ ಹತ್ತಿರ ಮಾತನಾಡುವುದು? ಹೇಗೆ ಮಾತನಾಡುವುದು? ನಾನು ಏನೇನು ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆಯೋ ಅದಕ್ಕೆ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದೇನೆ. ಸುಮಾರು 35 ಜನ ಮೆಂಬರುಗಳಿರುವ ಒಂದು ಅಡ್ವೈಸರಿ ಬಾಡಿಯನ್ನು ಮಾಡಿದ್ದಾರೆ. ಇಂಥ ಪರಿಸ್ಥಿತಿ ಇರುವಾಗ ಅವರು ಅದರಲ್ಲಿ ಕುಳಿತುಕೊಂಡು ಏನುಮಾಡುವುದು? ಇವರು ಪತ್ರಿಕಾಕರ್ತರಿಗೆ 3,000 ಸಾವಿರ ರೂಪಾಯಿ 5,000 ರೂಪಾಯಿ ಗ್ರಾಂಟನ್ನು ಕೊಟ್ಟು ಇವರ ಫೋಟೋಗಳನ್ನು ಹಾಕಿಸಿಕೊಳ್ಳುವುದು; ಇವರಿಗೆ ವ್ಯತಿರಿಕ್ತವಾಗಿ ಲೇಖನಗಳು ಬಂದರೆ, ಇವರಿಗೆ ತಕ್ಕ ಹಾಗೆ ಬರೆಸಿಕೊಳ್ಳುವುದು ಈ ರೀತಿ ಇವರ ಆಡಳಿತದ ವೈಖರಿ ನಡೆಯುತ್ತಾ ಇದೆ. ಹರಿಜನ ಪ್ರತಿನಿಧಿಗಳು, ಬುದ್ಧಿವಂತರು, ಪದವೀಧರರು, ಯುವಕರು ಈ ಪದವಿಗೆ ಬಂದು ಆಗುತ್ತಿರುವ ಕೆಲಸ ಕಾರ್ಯ ಹೀಗಿದೆ! ಕಾಂಗ್ರೆಸ್ ಸಂಸ್ಥೆಯ ಹೆಸರು ಹೇಳಿಕೊಂಡು ಏನೋನೋ ಮಾಡುವುದು. ಧರ್ಮ, ನೀತಿ, ನಿಷ್ಠೆ, ನಿಯಮ ಉಳ್ಳವರಿಗೆ ಕಾಲವಲ್ಲ! ಎಲ್ಲರೂ ಯೋಚಿಸಬೇಕಾದ ವಿಚಾರ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—Point of order. ಇದು ಬಜೆಟ್ ಸ್ಪೀಚೇ?

ಅಧ್ಯಕ್ಷರು.—ಏನಾದರೂ ಒಂದು ಪಾಯಿಂಟ್ ಆಫ್ ಆರ್ಡರ್ ತೆಗೆಯಬೇಡಿ, ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.—ಮಂಜೂರಾದ ಕೆಲಸಗಳನ್ನು ನಿಲ್ಲಿಸಿಬಿಡುವುದು. ನನ್ನ ಹತ್ತಿರ ಜನಗಳು ಬಂದು ಕೇಳಿಕೊಳ್ಳುವವರೆಗೂ, ಕೆಲಸವನ್ನು ಮಾಡಿಸುವುದಿಲ್ಲವೆಂದು ಹೇಳಿದರು. ನಿಜವಾಗಿಯೂ ಇವರ ಕೈಯಲ್ಲಿ ಸರ್ಕಾರದ ಆಡಳಿತ ಇದ್ದು ಪಕ್ಷದಲ್ಲಿ ನಿಷ್ಪಕ್ಷಪಾತವಾಗಿ, ನ್ಯಾಯ ಬದ್ಧರಾಗಿ ನಡೆಯತಕ್ಕಂಥ ಸಾಮಾನ್ಯ ಜನಗಳಿಗೆ, ಅಧಿಕಾರಿಗಳಿಗೆ ಇಲ್ಲಿ ಒಳ್ಳೆಯ ಅವಕಾಶವಿಲ್ಲ.

Sri T. MARIAPPA.—It is much better that personal allegations are not allowed. I am making a special appeal.

Mr. SPEAKER.—I do not allow any personal allegations. If the allegations have got to do any thing with him in the performance of duties as Minister and the Minister has not performed his duties properly then only such allegations will be relevant. If you make personal allegations, they will not be relevant.

ಶ್ರೀ ಬಿ. ರಾಚಯ್ಯ.—ಅವರ ವೈಯಕ್ತಿಕ ಜೀವನದ ವಿಷಯದಲ್ಲಿ ನಾನು ಏನೂ ಹೇಳಲಿಲ್ಲ. The way in which he is conducting as Minister, ನಾನು ಹೇಳಿದ್ದೇನೆ. ಅವರ 'ಪರ್ಸನಲ್' ವಿಷಯ ಹೇಳುವುದಿಲ್ಲ. ಇವೊತ್ತು ಪರ್ಸನಲ್ಲಾಗಿ, ನಮಗೂ ಅವರಿಗೂ ವಿಶ್ವಾಸವಿದೆ. As Minister, ಮಾಡಿರತಕ್ಕಾಂಥಾದ್ದು ಏನು ಎನ್ನುವುದನ್ನು ತಿಳಿಸಿದೆ.

ಈ ಸಭೆಯ ಕಾಲವನ್ನು ಹೆಚ್ಚಾಗಿ ತೆಗೆದು ಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಸಮಾಜ ಕಲ್ಯಾಣ ಇಲಾಖೆಗೆ ಸ್ಪೆಷಲ್ ಆಫೀಸರುಗಳನ್ನು ಅಪಾಯಿಂಟ್ ಮಾಡುವ ವಿಷಯದಲ್ಲಿ ಪಿ.ಎಸ್.ಸಿ.ಗೆ ರೆಫರ್ ಮಾಡುವುದನ್ನು ಬಿಟ್ಟು ಇವರಿಗೆ ಯಾರು ಬೇಕೋ, ಅವರನ್ನು ಅಪಾಯಿಂಟ್ ಮಾಡುತ್ತಾ ಇದ್ದಾರೆ.

ಕಾನ್‌ಸ್ಟಿಟ್ಯೂಷನ್ ಪ್ರಕಾರ, ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗಳಿಗೆ 15-16 ಪರ್ಸೆಂಟ್ ರಿಸರ್ವೇಷನ್ ಇದೆ. ಅದನ್ನು ಪಿ. ಎಸ್. ಸಿ. ಯವರೇ ಅನುಸರಿಸಿಕೊಂಡು ಬರಲಿ. ಯಾವ ಇಲಾಖೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲವೋ, ಅಲ್ಲಿ ಸಾಕಷ್ಟು ಪ್ರೊವಿಷನ್ ಮಾಡಬೇಕೆಂದು ಹೇಳಿದರೆ, ಅವರೇ ರಿಸರ್ವ್ಡ್ ವೇಕೆನ್ಸಿಗಳನ್ನು ಸರಿಯಾಗಿ ಫಿಲ್‌ಅಪ್ ಮಾಡುತ್ತಾರೆ. Even among the Harijans, I do not want dullards to be preferred in preference to intelligent people. Let there be a test for these people also. 15-18 ಪರ್ಸೆಂಟ್ ರಿಸರ್ವೇಷನ್ ಇರುವುದನ್ನು ಪಿ. ಎಸ್. ಸಿ.ಗೇ ರೆಫರ್ ಮಾಡಿ ಎಂದು ಹೇಳುತ್ತಿದ್ದೇನೆ. ಪಿ. ಎಸ್. ಸಿ. ಯವರೇ ಹರಿಜನ ಉಮೇದುವಾರರನ್ನು ಇಂಟರ್‌ವ್ಯೂ ಮಾಡಿ, ಅವರೇ ಸೆಲೆಕ್ಟ್ ಮಾಡಲಿ. ಹೀಗೆ ಮಾಡಿಸುವುದನ್ನು ಬಿಟ್ಟು, ಇವರಿಗೆ ಇಷ್ಟ ಬಂದ ರೀತಿಯಲ್ಲಿ ಬೇಕಾದವರಿಗೆ ನೇಮಕಮಾಡುತ್ತಾ ಹೋದರೆ, ನಮ್ಮ ಜನಾಂಗದಲ್ಲಿ ಎಫಿಷಿಯಂಟಾಗಿರತಕ್ಕಂಥ, ಅನುಭವ ಇರತಕ್ಕಂಥ, ನಿಷ್ಪಕ್ಷಪಾತವಾಗಿ ಕೆಲಸ ಮಾಡತಕ್ಕಂಥ ಅನೇಕ ಜನರಿಗೆ ಬಹಳ ಅನ್ಯಾಯವಾಗುತ್ತದೆ ಎಂದು ನಾನು ಈ ಸಂಧರ್ಭದಲ್ಲಿ ಸೂಚನೆ ಮಾಡುತ್ತೇನೆ.

ಇದುವರೆಗೆ ಬಿ. ಡಿ. ಓ. ಗಳನ್ನು ಪಿ. ಎಸ್. ಸಿಯವರು ಷೆಡ್ಯೂಲ್ಡ್ ಕ್ಯಾಸ್ಟ್ಸಿಗೆ ಎಷ್ಟು ರಿಸರ್ವೇಷನ್ ಇತ್ತೋ ಅಷ್ಟನ್ನು ಮಾಡಿದ್ದಾರೆ. ಆದರೆ ಈಗ ಅವರಿಂದ ಆ ಅಧಿಕಾರವನ್ನು ವಿತ್‌ಡ್ರಾ ಮಾಡಿಕೊಂಡಿದ್ದಾರೆ. ಇವರುಗಳನ್ನು ನೇರವಾಗಿ ಸರ್ಕಾರವೇ ಏಕೆ ಅಪಾಯಿಂಟ್ ಮಾಡಬೇಕು ? ಪಿ. ಎಸ್. ಸಿ.ಗೆ ನಮ್ಮ ಕೋಟಾ ಕೊಟ್ಟಮೇಲೆ, ಅವರೇ ಕ್ಯಾಂಡಿಡೇಟುಗಳನ್ನು ಸ್ಕ್ರೀನ್ ಮಾಡಲಿ, Let them select the best candidates among the Scheduled Caste candidates. ನಮ್ಮ ಸರ್ಕಾರದ ಇಲಾಖೆಗಳಲ್ಲಿ ಎಲ್ಲಾ ನೌಕರರು ದಕ್ಷತೆಯಿಂದ, ನಿಸ್ಪೃಹತೆಯಿಂದ, ನಿಷ್ಪಕ್ಷಪಾತದಿಂದ ಕೆಲಸ ಮಾಡಬೇಕು ಎಂದು ನಾವು ಹೇಳುತ್ತಾ ಇರುವಾಗ, ಅನನುಭವಿತರಾದ ಹರಿಜನರಿಗೆ ಕೊಟ್ಟು, ಬೇರೆಯವರಿಂದ "ಇಂಥ ಹರಿಜನರಿಗೆ ಕೊಟ್ಟಿದ್ದಾರೆಂದು" ಎಂದು ಅನ್ನಿಸಿಕೊಳ್ಳುವುದಕ್ಕೆ ನಾನಂತೂ ತಯಾರಿಲ್ಲ. ಹರಿಜನರಿಗೆ ಕೊಟ್ಟಿರುವ ಒಂದು ಕನ್‌ಸೆಷನ್‌ನ್ನನ್ನು ದುರುಪಯೋಗಪಡಿಸಿಕೊಂಡು ಈ ಜಾತಿಗೇ ಕೆಟ್ಟ ಹೆಸರು ತರಬಾರದು. Among the Harijans, let there be a competitive examination and selection. ಈ ತರಹ ಇವರ ಇಷ್ಟಕ್ಕೆ ಬಿಡುವುದರಿಂದ ಅರ್ಹತೆಯುಳ್ಳ ಹರಿಜನರಿಗೆ ಅನ್ಯಾಯವಾಗುತ್ತದೆ. ಈ ರೀತಿ ಮಾಡಕೂಡದು.

ಹರಿಜನ ಹಾಸ್ಟಲುಗಳ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕು. ಪ್ರೈವೇಟ್ ಹಾಸ್ಟಲುಗಳಿಗೆ ಗ್ರ್ಯಾಂಟ್ ಇನ್‌ಏಡ್ ಕೊಡುತ್ತಾರೆ. ಅವುಗಳು ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಕೆಳಗಿದ್ದರೆ, grant-in-aid rulesನ್ನು observe ಮಾಡಲಾಗುತ್ತಿದೆಯೋ ಎಂಬುದನ್ನು ಆಡಿಟರುಗಳು ಬಂದು ನೋಡುತ್ತಿರುತ್ತಾರೆ. ಈ ಪ್ರೈವೇಟ್ ಹಾಸ್ಟಲುಗಳು ಸಮಾಜ ಕಲ್ಯಾಣ ಇಲಾಖೆಗೆ ಬಂದು ಬಿಟ್ಟರೆ, ಈ ಲೋಕಲ್ ಫಂಡ್ ಡಿಸ್‌ಪೆನ್ಸರಿಯಿಂದ ಹಳ್ಳಿಗಾಡಿನ ಜನಗಳಿಗೆ ಏನೇನು ಉಪಯೋಗ ದೊರೆಯುತ್ತಿದೆಯೋ, ಅದೇ ರೀತಿ ಉಪಯೋಗಗಳು ಈ ಹಾಸ್ಟಲುಗಳಿಂದಲೂ ದೊರೆಯುತ್ತವೆ. ಈ ರೀತಿ ಮಾಡಿದರೆ ಎಲ್ಲಿ ನ್ಯಾಯ ದೊರೆಯುತ್ತದೆ ? ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ನೋಡಿಕೊಳ್ಳುವುದಕ್ಕೆ ಒಂದು ಸ್ಪೆಷಲ್ ಡಿಪಾರ್ಟ್‌ಮೆಂಟಿದೆ. ಅದು ಎಜುಕೇಷನ್ ಡಿಪಾರ್ಟ್‌ಮೆಂಟ್ ಆ ಇಲಾಖೆಯಲ್ಲಿ ಕೆಲಸವನ್ನು ಸೂಪರ್‌ವೈಸ್ ಮಾಡುವುದಕ್ಕೆ, ನಿಯಮಗಳನ್ನು ಅನುಸರಿಸಲಾಗುತ್ತಿದೆಯೋ ಎಂದು ನೋಡುವುದಕ್ಕೆ ಡೆಪ್ಯುಟಿ ಡೈರೆಕ್ಟರುಗಳು ಡಿ. ಇ. ಓಗಳು, ಇನ್‌ಸ್ಪೆಕ್ಟರುಗಳೂ ಇರುತ್ತಾರೆ. ಈ ಹಾಸ್ಟಲುಗಳಿಗೆ ಯಾವ ಗ್ರ್ಯಾಂಟು ಕೊಡಬೇಕಾದರೂ, ಅವುಗಳು ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಸುಪರ್ದಿನಲ್ಲಿರಬೇಕೇ ಹೊರತು ಸಮಾಜ ಕಲ್ಯಾಣ ಇಲಾಖೆಗೆ ಬರುವುದು ಸರಿಯಲ್ಲ. ಒಂದು ವೇಳೆ ಆ ಇಲಾಖೆಯವರು ಹರಿಜನ ಹಾಸ್ಟಲುಗಳನ್ನು ನಡೆಸುವುದಕ್ಕೆ ಆಗುವುದಿಲ್ಲವೆಂದರೆ ಹರಿಜನರಿಗೆ ಹಾಸ್ಟಲುಗಳಲ್ಲಿ ಎಷ್ಟು ಪರ್ಸೆಂಟೇಜ್ ಸೀಟ್ ಕೊಡಬೇಕು. ಅವರಿಗೋಸ್ಕರ ಎಷ್ಟು ಖರ್ಚು ಮಾಡಬೇಕೆಂಬುದನ್ನು ವಿಧಾಯಕ ಮಾಡಲಿ ಎಂದು ಮಾತ್ರ ಹೇಳುತ್ತೇನೆ. ಇವೊತ್ತು ಪ್ರಶ್ನೋತ್ತರ ಕಾಲದಲ್ಲಿ, ಮಂತ್ರಿಗಳು ತಾಲ್ಲೂಕು ಮಟ್ಟದಲ್ಲಿ ಹರಿಜನ ವಿದ್ಯಾರ್ಥಿನಿಲಯಕ್ಕೆ ಕಟ್ಟುವ ಕಟ್ಟಡಕ್ಕೆ 25 ಸಾವಿರಕ್ಕಿಂತ ಹೆಚ್ಚಿಗೆ ವೆಚ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಮೈಸೂರಿನಲ್ಲಿ ಎರಡು ಲಕ್ಷ ರೂಪಾಯಿ ಖರ್ಚುಮಾಡಿ ಒಂದು ಹಾಸ್ಟಲ್ ಕಟ್ಟಿಸಿದ್ದಾರೆ. ಅದನ್ನು ಶ್ರೀ ಜಗಜ್ಜೀವನ್‌ರಾಮ್ ಅವರು ಓಪನ್ ಮಾಡಿದ್ದಾರೆ. ಇದನ್ನು ಮೈಸೂರು ಸಿಟಿಯೊಳಗೆ ಸ್ಯಾಂಕ್ಷನ್ ಮಾಡಿಕೊಂಡು ನಡೆಸುತ್ತಾ ಇದ್ದಾರೆ. ಬೆಂಗಳೂರು ಸಿಟಿಯೊಳಗೆ ಇನ್ನೊಂದು ಹಾಸ್ಟಲ್ ಕೊಟ್ಟಿದ್ದಾರೆ. ಹೀಗಿದ್ದರೂ ಮತ್ತೆ ಮೈಸೂರು ಮತ್ತು ಬೆಂಗಳೂರಿಗೂ ಎರಡು ಲಕ್ಷ ಅಂದಾಜಿನ ಕಟ್ಟಡಗಳನ್ನು ಮತ್ತೆ ಮಂಜೂರು ಮಾಡಿ ಈ ರೀತಿಯಲ್ಲಿ ಹೆಡ್ ಕ್ವಾರ್ಟರಿಗೆ ಏಕೆ ಕೊಡುತ್ತಾ ಇದ್ದಾರೆ ? ರಾಚಯ್ಯನವರಿಗೆ ಒಂದು ಅಳತೆ ಪಟ್ಟಿ, ಜತ್ತಿಯವರಿಗೆ ಒಂದು ಅಳತೆ ಪಟ್ಟಿ. ಹರಿಜನ ಕೋಮಿನಲ್ಲಿ ಎಲ್ಲರಿಗೂ ಹೆಚ್ಚಿನ ರೀತಿಯಲ್ಲಿ ವಿದ್ಯಾ ಸೌಲಭ್ಯಗಳನ್ನು ಕೊಡಬೇಕು. ಚೀಫ್ ಮಿನಿಸ್ಟರು ನಿಜಲಿಂಗಪ್ಪನವರು ಮಾಡಿದ ಆರ್ಡರು, ಜತ್ತಿಯವರು ಮಾಡಿದ ಆರ್ಡರನ್ನು ಶ್ರೀ ರಾಚಯ್ಯನವರು ರೆಟ್ರಾಸ್ಪೆಕ್ಟಿವಾಗಿ ವಿತ್‌ಡ್ರಾ ಮಾಡಿ, ಹಾಸ್ಟೆಲ್ ಕಟ್ಟಡವನ್ನು ನಿಲ್ಲಿಸಿ ಬಿಡಿ, ದುಡ್ಡು ಇಲ್ಲವೆಂದು ಹೇಳಿದ್ದಾರೆ. ಹೀಗೆ ಹೇಳಿ ಮೇಲಕ್ಕೆ ಹೋಗಿ ಬಿಟ್ಟಿದ್ದಾರೆ. ಇಂಥ ಅನ್ಯಾಯಗಳನ್ನು ತಡೆಗಟ್ಟುವುದಕ್ಕ ನಾನು ಮುಖ್ಯ ಮಂತ್ರಿಗಳಿಗೆ ಬರೆದಿದ್ದೇನೆ. ಮುಖ್ಯ ಮಂತ್ರಿಗಳು ಅದನ್ನು ಎನ್‌ಕ್ವಯರಿ ಮಾಡದೆ ಇರುವಷ್ಟು ಅಸಮರ್ಥರಾಗಿದ್ದಾರೆ. ನಾನು ಏನೇನು ಅಲಿಗೇಷನ್ಸ್

ಮಾಡುತ್ತಿದ್ದೇನೋ ಅದನ್ನು ಎನ್‌ಕ್ವಯರಿ ಮಾಡಿದರೆ, ಯಾರು ಸತ್ಯ ಹೇಳುತ್ತಿದ್ದಾರೆನ್ನುವುದು ಗೊತ್ತಾಗುತ್ತದೆ. ಒಂದು ಎನ್‌ಕ್ವಯರಿ ಕಮಿಟಿ ಮಾಡುವುದರಿಂದ, ಅವರು ಹೇಳುವುದು ಸತ್ಯವೇ ನಾನು ಹೇಳುವುದು ಸತ್ಯವೇ ಎಂಬುದು ಗೊತ್ತಾಗುತ್ತದೆ. ನಾನು ಹೇಳಿದ್ದನ್ನು ಪರೀಕ್ಷೆ ಮಾಡಿದ ಮೇಲೆ, ತಪ್ಪಿದ್ದರೆ ಏನು ಶಿಕ್ಷೆ ವಿಧಿಸಿದರೂ ಅನುಭವಿಸುವುದಕ್ಕೆ ಸಿದ್ಧ.

ಈ ಹಣಕಾಸಿನ ಆಯುವ್ಯಯು ಅಂದಾಜನ್ನು ನಾನು ಅನುಮೋದಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri G. VENKATAI GOWDA (Kollegal).—Mr. Speaker, Sir, a perusal of the budget papers would reveal that the financial position of the State is not bad at any rate till the end of the Second Five-Year Plan. But what would be the state of affairs in the Third Five-Year Plan, the Hon'ble Finance Minister has not made any hint in that direction. All the same, I would invite attention to some of the commitments of the Government which would have a very serious repercussion on the finances of the State during the Third Five-Year Plan. It has been said that we have got to give Rs. 240 lakhs to the village panchayats and taluk boards. It has been decided to grant concessions to co operative institutions, to abolish hereditary posts of village officers and village servants, to pay compensation under the several land enactments, to grant free education upto S.S.L.C. to the children of all persons whose annual income does not exceed Rs. 1,200 and to take over for improvement a large number of rural communications. All these will have a serious effect on the internal resources and sufficient information has not been given to us to show where exactly we will stand in the Third Five-Year Plan. It has been contemplated to raise Rs. 20 crores by way of additional taxation during the Third Five-Year Plan and I do not know whether the Hon'ble Finance Minister would be able to give us a plan of the order of Rs. 279 crores taking for granted that he will be able to find about Rs. 20 crores by way of additional taxation. I am saying this because even during the Second Five-Year Plan more than Rs. 12 crores have been raised by way of additional taxation and still he has not been able to give us a plan of the order of Rs. 145.

And if you could study the increase in the taxation, Sir, it will definitely show that it has no relation whatsoever to the living standards of our people. So far as direct taxation is concerned, from 1956-57 to 1960-61, nearly 6½ crores of rupees more has been realised. The increase is as much as that. Likewise indirect taxes we have got nearly 7 to 8 crores from 1956-57 to 1960-61. But according to expectations, non-tax revenue has not increased correspondingly as already admitted by the Hon'ble Minister for Finance himself. I request him that there must be a corresponding increase so far as non-tax revenue is concerned. Otherwise, only the common man would be hard hit. But indirect taxes are more than direct taxes. There is only one way out of all this. You have got to put a clear case before the Government of India and urge for a larger share of income-tax, excise duties and other grants. Sri Mallaradhya also said yesterday that it was fundamentally necessary for us to approach the Government of India and put our case. We are aware that more than 50 per cent of our people are getting below the national income. If you compare the increase in the national income with the percentage of increase in the revenue taxation, it will reveal how it has hard hit the common man. By the end of the First Five-Year Plan, from 8.5 crores, it has increased to 16 crores. There is almost a cent per cent increase, in the taxation revenue. National income has increased from 3½ per cent at the end of the First Plan to 18 per cent by the end of the Second Plan. That shows that the increase in taxation is not consistent with the increase in the national income. Therefore, my submission is that it is always desirable to have increase in non-tax revenue and as far as practicable, indirect taxes must be reduced.

Sir, though the fincial position is not bad, as I already said, if we look at the position from the position of the Debt it causes serious apprehension in our mind. Because, as we are seeing, every year, we are giving an increasing percentage towards the Debt Service

(SRI G. VENKATAI GOWDA)

Charges and what is the asset that has been shown in the revised estimate for 1959-60 and 1960-61? it is about one crore. It is not even one quarter of the debt services. But correspondingly the debt liability also increases. My submission is that unless we press the Government of India for a consolidation and rationalisation of the terms and conditions of these debts, I do not think we have got any salvation. No doubt, the Government of Mysore has represented to the Finance Commission which has recommended to the Government of India for consolidation and rationalisation. But the Government of India does not agree to it. My submission is that the State Government should take a firm stand and urge for the consolidation and rationalisation of the terms and conditions of these debts. Why I am saying this is, that the Government of Mysore has simply agreed to this debt being taken over that the Government of India insisted upon them. My submission is that the State Government has agreed to the transfer of these loans due by the ex-Bombay, ex-Madras and other integrating areas on a population basis. The Government of India insisted upon this burden being transferred to the Government of Mysore and the Government of Mysore agreed to repay the liability of these debts. For the information of this Hon'ble House I may be permitted to say :—

1.	Share of loans transferred from the integrated areas. on population basis.	1857 lakhs
2.	Share of loans transferred from the portion of ex-Hyderabad, Bombay and Madras.	790 lakhs

In all, a sum of 26.67 crores has been transferred to the Government of Mysore and the Government of Mysore has undertaken to discharge this liability (page 133 Annex. 3 Budget Memorandum). This sum has been simply transferred by the Government of India. These loans were originally borrowed by the former Governments of Bombay, Madras, and Hyderabad and they have been transferred to the New State of Mysore on the population basis. I want to know whether these amounts that have been transferred to this State have been spent in the integrating areas, the areas which have actually been handed over to the New Mysore State. If they have not spent on those areas, what justification is there for the Government of Mysore, to undertake responsibility for discharging them? Why did the Government of Mysore agree to the proposal of having these debts transferred to the New Mysore State.'

Sri T. MARIAPPA.—Under the States Reorganisation Act we are bound to take over liabilities on a population basis.

Sri G. VENKATAI GOWDA.—I know that. You should have told them that nearly 26 crores are being transferred and have asked whether they have spent that money on the actual areas which are being transferred from Hyderabad, Bombay and Madras.

Sri T. MARIAPPA.—These were parts which were neglected for ages.

Sri G. VENKATAI GOWDA.—If those Governments have borrowed loans from the public, does it mean that the integrating areas should bear the responsibility for these loans? What has been done to those areas actually? If there is any satisfaction to the effect that there is some physical target that has been achieved because of this loan, then there is every reason for us to oblige those Governments by accepting to repay these amounts. But where is the proof that this amount has been spent on the integrating areas? Because 17 lakhs of people come into the New Mysore State from Madras, does it mean that Rs. 17 lakhs of debt should be transferred to the New State? What I say is, you please ask the Government of India for reimbursement to this extent.

Sri T. MARIAPPA.—Accounts are there. Accounts are audited and accepted by the Legislature, year by year. Nobody can go behind them.

SRI G. VENKATAI GOWDA.—I know, Sir. But we have got to make representations to the Government of India. We have got to make out a case and tell them that because of this position, we are entitled to get reimbursement. On that ground, if you urge, you may convince the Government of India to some extent with regard to rationalisation and the terms and conditions of our loan. To that extent, I think, we can be benefitted. If we do not urge strongly in these matters, I do not think that the Government of India, will agree. And unless we try hard to get some reimbursement or grant from the Government of India, to which we are entitled, this liability towards the debt will not be easily solved. Sri Mallaradhya has already been pleased to observe that by the middle of the Third Five Year Plan, we may be compelled to pay by way of interest charges to the tune of Rs. 10 crores. You have been pleased to say wherever it is possible economy has been effected.

My submission is I have not found anywhere in the expenditure items, decrease in expenditure due to practising economy in the administration. I have not seen it. Wherever there is decrease in expenditure, the Budget memorandum says that it is due to not having filled up vacancies or not having expended that amount for that particular purpose. You have not stated anywhere that the amount has not been spent due to effecting economy. Nowhere has it been said so. Therefore, my submission is that unless you take stringent measures to avoid wasteful expenditure and practise economy, I do not think we can mobilise our resources. There are one or two items to which I would like to invite the Hon'ble Minister's attention and they are these: in respect of Forests, if you compare the 1959-60 Revised Estimates, with that for 1960-61 it has been possible to have about Rs. 34 lakhs or so more. But if you will kindly see the expenditure, it is a about Rs. 257·78; nearly 40 per cent of the revenue is being spent on forest. At least there is scope for reduction of 10 percent in the expenditure. If you spend 40 per cent and derive revenue that will not be conducive to the progress of the State. Therefore, I submit, it can be easily reduced. Similarly in regard to Registration, on page 23, you will find that you are spending more than 45 per cent of the revenue. You are getting about Rs. 31.68 lakhs but you are spending about Rs. 14.19 lakhs; that is more than 45 per cent of the revenue is spent on Registration. In this connection, I wish to bring another thing to your notice. Though you have been able to bring in uniformity in respect of some taxation measures, there are several simple measures in which uniformity is required. For example in registration, there is a difference between the rules prevailing in Madras Karnataka and those prevailing in Hyderabad Karnatak. There is disparity in rates for getting encumbrance certificates and that has got to be removed.

SRI T. MARIAPPA.—Lower rates will be stepped up.

SRI G. VENKATAI GOWDA.—It has got to be done. Wherever there is higher rate, you are obliged to receive. You do not care to bring about uniformity in this respect. There are very many important laws which require uniformity. Under the forest laws, we are made to pay Rs. 7 to 8 and the raiyats cannot get fuel. In Old Mysore, the raiyats get a pass for one rupee or 8 annas and get the required fuel.

SRI M. RAMAPPA (Harihar).—It will not be reduced to Re. 1 but it will be increased to Rs. 7.

SRI T. MARIAPPA.—He has been accustomed to higher rate of taxation in Madras. In fact, he got relief by the new Sales Tax. There it is Rs. 5 per capita but ours is only Rs. 3 and odd.

SRI G. VENKATAI GOWDA.—So far as court fees are concerned, we are continuing to have Madras rates. But for Old Mysore, it is less. I want uniformity at some level or other because the lack of of uniformity will have bad repercussion. The officers coming there do not know the procedure. It takes a long time for them to acquaint themselves with it. Therefore I wish at least in the case of simple procedure and rules which do not require the

(SRI G. VENKATAI GOWDA)

attention of this House, the Government can *suo motu* do those things as early as possible. In respect of sales tax, you have shown Rs. 1 lakh or so less than the revised estimates of 1959-60. When the prices are going up, I do not understand what justification is there to show Rs. 1 lakh less than the revised estimates? There is no reason why it should be decreased.

SRI T. MARIAPPA.—In fact if you read the note, you will find that we have collected arears in that year. We cannot go on collecting arrears during the next year also.

SRI G. VENKATAI GOWDA.—You are spending 58 per cent of the revenue in regard to sales tax. My Hon'ble friend Sri Mallaradhya urged yesterday that there was vast scope for reduction of expenditure. Avoidance of wasteful expenditure would solve the problem and economy of expenditure is another method. Where have you effected economy? Whatever decrease I find in expenditure, I find it due to non-filling up of some posts or non-spending on particular items. Therefore, I submit that it is desirable and it is abolutely necessary to practise economy and also avoid all wasteful expenditure. Even in the Revenue Account, Sir, the expenditure has fallen down and you have not given the reasons for it. We do not know whether the expenditure anticipated is going to be incurred before the close of the year. What are the achievements you have made? Though you have stated them on page 23 of your Budget speech, I do not know whether they could be taken as genuine or correct. What are the targets envisaged and what are the things achieved, we do not know. The Hon'ble Minister for Health said that about 70 health units were functioning. You might have sanctioned and passed orders for so many health units. But whether they are functioning is a question to be considered. Likewise, veterinary dispensaries. This year it is said that 3 veterinary dispensaries have been sanctioned; but no money is spent for increasing the number of stockmen. On the face of these things, we cannot take them as correct. Therefore, a detailed list giving the works that have been envisaged in your Plan and the works that have been turned out physically would have been very helpful to make observations in that direction. What about the shares held by the Government in Industrial concerns and what is the dividend that we have been able to get?

SRI T. MARIAPPA.—We have given it in detail.

SRI G. VENKATAI GOWDA.—Nearly 60 per cent of the concerns have not declared any dividend.

SRI T. MARIAPPA.—I want you to kindly read page 131 of the Budget Memorandum. Most of them are giving good return. You cannot expect co-operative institutions to give us any money.

SRI G. VENKATAI GOWDA.—The Mysore Chrome Tanning Co. Ltd. have not declared any dividend.

SRI T. MARIAPPA.—The Mysore Chrome Tanning Company has been rehabilitated.

SRI G. VENKATAI GOWDA.—The Mysore Match Factory has not given any dividend. The Bangalore Ex-Servicemen's Transport Company has not given anything.

SRI T. MARIAPPA.—That is under liquidation.

SRI G. VENKATAI GOWDA.—What about the Mysore State Co-operative Apex Bank? Pandavapura Sahakara Sakkare Karkhane Ltd., has been recently started. What about All-India Handloom Fabrics Marketing Co-operative Society? These hvae got to make some profit. You were pleased to open a marketing society at Kollegal. For seven months, it has got Rs. 8,000 projects or.

SRI T. MARIAPPA.—In fact I want these co-operative institutions to come up well.

4-30 P.M.

SRI G. VENKATAI GOWDA.—The Mysore Co-operative Central Land Mortgage Bank has not declared any dividend. I am not expecting the societies in village level to pay any

dividends. But if co-operative apex banks and district urban banks do not declare dividends, I cannot understand. They do not give even two per cent interest on the capital investment. I do not know what your representatives are doing in such cases.

Sri T. MARIAPPA.—Concessions to co-operatives are a great drain.

Sri G. VENKATAI GOWDA.—Concessions may be a great drain. But you are putting in shares. They have got to declare dividends not only for you but for other shareholders also.

So far as the Government Industrials are concerned, yesterday Sri Malla-radhya very elaborately discussed that point and there is no necessity for me to go into it again. In this connection, I would like to submit that unless stringent measures are taken to avoid wasteful expenditure and effect economy and also mobilise internal resources, it is not possible to work them on a profitable basis.

So far as the Small Savings Scheme is concerned, you have said that it is successful or some such thing. "It is gratifying that the net collections during 1958-59 rose up to Rs. 210 lakhs as against Rs. 180 lakhs during the previous year." The idea of this Small Savings Scheme is not only to get some money to the Government, but to make the middle class and lower middle class people save something for the benefit of their future. Who are those people who have contributed to this scheme? It is only the big people and the institutions, and not the middle class and the lower middle class. You can otherwise have floated a loan. As the big men and institutions have contributed to this scheme, I say that this scheme is a complete failure. The intention with which it is started is not realised in the sense that no middle class and lower middle class people have contributed. In other words, it is a loan floated by the Government. Therefore, you cannot say that it is successful. Recently there was a drive by the various Assistant Commissioners in the Sub-Divisions. In certain taluks, they might not have realised even the amount spent for canvassing towards the scheme I therefore say that this scheme is a thorough failure.

Sri T. MARIAPPA.—You must make it successful. It is as much yours as it is mine.

Sri G. VENKATAI GOWDA.—How can the middle class and the lower middle class save anything in these days of abnormal prices?

So far as Survey and Settlement is concerned, I should say that the Government have been very slow in this direction. Unless you have a phased programme, say two or three years, I do not think we can mobilise land revenue. There has been a suggestion of surcharge on land revenue. But it should not affect the small landlords. Big landlords may pay extra. Sri Rachiah, I think, suggested this surcharge. I do not think it is feasible. The survey and settlement work is very important. There will be uniformity and we will raise more revenue. It is very necessary to have this work expedited by having a phased programme and completing the work district by district.

It is also unfortunate that under irrigation works we have not been able to get water rates and betterment rates to the extent anticipated. You have stated that after the passing of the amendment, you will do well. I do not know why the anticipated amount was not collected.

So far as the interim relief given to the Government servants is concerned, I should say that the present relief is no relief. It is belated. I do not know when this committee is going to be constituted, when they are going to examine the matter and when the report will be submitted and Government will take action. Unless you take a firm decision in the matter, it is not possible to have efficiency in the administration. I would even go to the extent of saying that you amalgamate this D.A. with the basic pay. After all what is the financial implication for this short period? Only people who retire may have a claim for some more gratuity and pension. But it will not be having serious repercussions, On the other

(SRI G. VENKATAI GOWDA)

hand, it will give very great satisfaction to the Government servants, especially those people who are getting below Rs. 300. After all dearness allowance will be there permanently. There is no likelihood of that being removed.

Sri T. MARIAPPA.—The committee will go into the question of the extent to which D.A. could be merged with the basic pay. That will be considered by the committee.

Sri G. VENKATAI GOWDA.—I would say that the entire amount that is given to the N.G.Os is to be amalgamated instead of a portion. You can give even five or ten rupees extra as the Central Government have done. Persons retiring now will have some benefit. Since the D.A. is said to be permanent, it is better to amalgamate it with pay and better their service conditions. It is gratifying to see that temporary service when followed by permanency will count for pension. I want a clarification on one point. You say temporary service. Suppose there are servants working in the local bodies or aided institutions and they are taken over to the Government service. Are you taking their services in such local bodies and aided institutions? You cannot say that their service in those institutions was temporary service.

Sri T. MARIAPPA.—Government service.

Sri G. VENKATAI GOWDA.—Suppose they are serving in an aided institution. For the purposes of pension, why not take their service in the institution? For example in the Kollegal High School, there are teachers who have served for 25 years. If you do not treat their services for pension, they won't get pension, but only gratuity. In such cases, it will hit them very hard. There will be much hardship. Therefore I am submitting that if they have put in a service in any institution, for the purposes of pension at least, their entire service should be taken. When you are taking temporary service into account, why not you include service in other institutions? You have to give a long margin and service weightage, leave, etc., should be given to them. So far as the Madras District Board Institutions are concerned, people used to be recruited to their services as per educational rules, unlike in Old Mysore. In Mysore, they did not follow the rules, but used to appoint anyone they liked. But in our area, they would be recruited according to rules. Therefore, if you do not take their service into account, you will not be doing justice. Services rendered outside also within Government or outside should be counted for the purposes of pension. So far as accommodation of Government servants is concerned, it is a serious matter. In several taluks there is no accommodation. Officers are not inclined to go there if there is no accommodation. Therefore, at least you should have the minimum number of houses in each taluk headquarters so that the taluk administration will be better.

So far as industrial development is concerned, an amount of Rs. 43 lakhs was not spent out of the amount earmarked in 1958-59. I do not want to say much on this now because there will be an opportunity to speak on the Industries demand.

So far as the publication of the Inter-State Seniority List is concerned, the other day the Hon'ble Chief Minister told the House that the list in respect of the Gazetted officers had been finalised and that they had taken a decision. But they are releasing it stage by stage. Three or four lists have been published so far and for that it has taken two or three months. At this rate it may take a year to publish all the lists in respect of them. When they have taken a final decision in this matter, I am at a loss to understand why they cannot publish the entire list at the same time. Otherwise, what happens is that, supposing some persons have been promoted wrongly, they are enjoying their promotion and if their names are found to be below in the final list naturally they will have to come down.

Sri T. MARIAPPA.—All the promotions so far made are only provisional subject to the finalisation of the list. Therefore nobody acquires any right

simply because he is promoted now. It is for the sake of convenience of Government work that we have promoted them. Let there be no doubt about it.

Sri G. VENKATAI GOWDA.—When you have taken the decision, why don't you publish all the lists at the same time so that things that are not properly done can be remedied?

So far as credit facilities to the ryots are concerned, we know that the Reserve Bank is giving money at the rate 2% but when it reaches the ryots they have to pay about 7½ per cent. I would request the Government to examine the position and see that the present rate of interest is reduced. Unless that is done, the credit facilities will not benefit the ryots.

So far as motor vehicles taxation is concerned, we have no details as to whether the amount earmarked for expenditure on roads has been spent and to what extent amelioration has taken place. Why do you take it into the general revenues?

Sri T. MARIAPPA.—It is not earmarked. After paying compensation, the motor vehicles tax comes to the general revenues. As a matter of fact, we spend more than the amount earmarked.

Sri G. VENKATAI GOWDA.—So far as the prohibition policy is concerned, I do not wish to say much except requesting the Government to extend it to the Mysore District because unless you extend it to the areas near which prohibition is in vogue, it is difficult to implement it.

Another lacuna in it is the lack of uniformity in prohibition laws. Under the Madras Prohibition Act, drinking arrack and going in the street has not been treated as an offence. Of course, the Madras Government has amended the Act but since there is lacuna, the Police hare not been able to do anything in this matter. I, therefore, request the Government to bring about uniformity in the prohibition law as early as possible.

With these observations I thank the Speaker for having given me an opportunity to speak.

ಶ್ರೀ ಎಕ್.ಜಿ. ನರಸಿಂಹೇಗೌಡ.—ನಮ್ಮ ಪಾರ್ಟಿಯ ಸದಸ್ಯರು ಯಾರು ಯಾರು ಮಾತನಾಡುವವರು ಎಂಬುದನ್ನು ಗೊತ್ತುಮಾಡಿ ಒಂದು ಲಿಸ್ಟ್ ತಯಾರು ಮಾಡಿ ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ಆ ಲಿಸ್ಟ್ ಪ್ರಕಾರ ನಮ್ಮ P.S.P. ಪಾರ್ಟಿ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಬೇಕು. ಇಂದು ನಮ್ಮ ಪಾರ್ಟಿಯ ನಾಲ್ಕು ಸದಸ್ಯರಿಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

Sri G. N. PUTTANNA.—For the last three days I have been waiting for a chance to speak. I take it as a curtailment of my fundamental right as a member of this House to have a chance. I want to know whether I will have a chance. Not a single P.S.P. member has been given a chance today. What is the use of calling for a list? Such a thing should be avoided in the future and we cannot be treated like that.

ಶ್ರೀ ಟಿ. ಎಕ್. ಮುಡಲಗಿರಿಗೌಡ (ಕುಣಿಗಲ್).—ಮಾನ್ಯ ಅಧ್ಯಕ್ಷರೆ, 1960-61ನೆಯ ಸಾಲಿನ ಆಯ ವ್ಯಯ ಪಟ್ಟಿಯನ್ನು ನಮ್ಮ ಹಣಕಾಸಿನ ಮಂತ್ರಿಗಳು ನಮ್ಮ ಮುಂದಿಟ್ಟಿದ್ದಾರೆ. ಅದು ಚರ್ಚೆಯಾಗುತ್ತಿದೆ. ಅದರಲ್ಲಿ ಬಹಳ ಸಂತೋಷಕರವಾದಂಥ ಒಂದು ವಿಷಯವಿದೆ. ನಾನು ಅನೇಕ ವರ್ಷಗಳಿಂದ ಆಯವ್ಯಯ ಪಟ್ಟಿಯನ್ನು ನೋಡಿದ್ದೇನೆ. ಈ ಸಾರಿಯ ಆಯವ್ಯಯಪಟ್ಟಿ, ಅದರ ವಿಮರ್ಶೆ, ಅಂಕಿ ಅಂಶಗಳು, ವಿವರಣೆಕೊಟ್ಟಿರುವ ರೀತಿ ನೀತಿ ನೋಡಿದರೆ ಸಾಮಾನ್ಯವಾಗಿ ಎಲ್ಲ ಸದಸ್ಯರಿಗೂ ಅರ್ಥವಾಗುವಂತಿದೆ, ಎಲ್ಲರಿಗೂ ಸಂಪೂರ್ಣ ಮಾಹಿತಿ ದೊರೆಯುವ ರೀತಿಯಲ್ಲಿ ಈ ಸಾರಿ ಮಾನ್ಯ ಹಣಕಾಸಿನ ಸಚಿವರು ಆಯವ್ಯಯ ಪಟ್ಟಿಯನ್ನಿಟ್ಟಿರುವುದಕ್ಕಾಗಿ ನಾನು ಅವರಿಗೆ ವಿಶೇಷವಾದಂಥ ವಂದನೆಗಳನ್ನರ್ಪಿಸುತ್ತೇನೆ. ಈ ಸಾರಿಯ ಆಯವ್ಯಯ ಪಟ್ಟಿ ಹಣಕಾಸಿನ ಉಳಿತಾಯದ ಪಟ್ಟಿಯಾಗಿದೆ. 1959-60 ನೆಯ ಸಾಲಿನಲ್ಲಿ ಎಷ್ಟು ಹಣ ನಮಗೆ ಉಳಿತಾಯವಾಗಿತ್ತೋ ಅದಕ್ಕಿಂತಲೂ ಹೆಚ್ಚಿನ ಹಣವನ್ನು ಉಳಿತಾಯಮಾಡಿ ಕೊಟ್ಟಿದ್ದಾರೆ. ಉಳಿತಾಯಕ್ಕೆ ಕಾರಣ ಕೇಳಿದಾಗ ಖರ್ಚುಮಾಡದೆ ಉಳಿದಿಲ್ಲ, ಉತ್ಪತ್ತಿ ಹೆಚ್ಚಾದ್ದರಿಂದ ಉಳಿತಾಯವಾಗಿದೆ ಎಂದು ಸಚಿವರು ಹೇಳಿದರು. ಆದರೆ ಅವರಿಗೆ ವಿನಯಪೂರ್ವಕವಾಗಿ ಒಂದು ವಿಷಯವನ್ನು ತಿಳಿಸುತ್ತೇನೆ. ನಮಗೆ ವಿಶೇಷ ಹಣಬೇಕು, ಪ್ಲಾನ್ ಇದೆ, ದಿನಚರಿ ಕೆಲಸವಿದೆ, ಅಭಿವೃದ್ಧಿ ಕಾರ್ಯ ಆಗಬೇಕಾಗಿದೆ, ವಿಶೇಷ ಹಣಬೇಕು ಎಂದು ಆತುರಪಡುತ್ತಿರುವಾಗ 4 ಕೋಟಿ ಚಿಲ್ಲರೆ ಹಣವೇನು ಬಂತೋ ಅದನ್ನು ಅತ್ಯಗತ್ಯವಾದ ಬಾಬುಗಳಿಗೆ ಒದಗಿಸಿ ಇನ್ನೂ ಹೆಚ್ಚಿನ ಸಹಾಯವಾಗುವಂತೆ ಅವಕಾಶ ಮಾಡಬಹುದಾಗಿತ್ತು ಎಂಬ ಸೂಚನೆಯನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ.

ಇದುವರೆಗೆ ಮಾತನಾಡಿರುವ ಮಾನ್ಯ ಸದಸ್ಯರ—ಅದರಲ್ಲೂ ವಿರೋಧಪಕ್ಷದ ಪ್ರಮುಖ ಸದಸ್ಯರಾದ ಶ್ರೀಮಾನ್ ಮಲ್ಲಾರಾಧ್ಯರ ಭಾಷಣಗಳನ್ನು ನಾನು ಗಹನವಾಗಿ ಕೇಳಿದ್ದೇನೆ. ಲ್ಯಾಂಡ್ ರೆವಿನ್ಯೂ ಬಾಬಿನಲ್ಲಿ ಹೋದ ಸಾರಿ, ಅದರ ಹಿಂದಿನ ಸಾರಿ ಇದ್ದುದಕ್ಕಿಂತ ಕಡಮೆ ರೆವಿನ್ಯೂ ಈ ಸಾರಿ ತೋರಿಸಿರುವುದು ಸರಿಯಲ್ಲ ಎಂದು ಹೇಳಿದರು. ಶ್ರೀ ಮಲ್ಲಾರಾಧ್ಯರೂ ಸಹ ಸಿವಿಲ್ ಸರ್ವಿಸ್ಸಿಗೆ ಸೇರಿದಕ್ಕಳಾಗಿ ಕೆಲಸ ಮಾಡಿ

(ಶ್ರೀ ಟಿ. ಎಚ್. ಮೂಡಲಗಿರಿಗೌಡ)

ದ್ದಾರೆ, ಅವರು ಹಳ್ಳಿಗಳಿಗೆ ಹೋಗಿ ರೆವೆನ್ಯೂ ಇನ್ಸ್‌ಪೆಕ್ಟರು, ಪಟೇಲ, ಶಾನುಭೋಗರು ಮುಂತಾದವರನ್ನು ಹಿಂಸೆ ಮಾಡಿ ಸರ್ಕಾರಕ್ಕೆ ಬರಬೇಕಾದ ಒಂದು ಕಾಸೂ ಬಿಡದೆ ವಸೂಲು ಮಾಡುವ ಸ್ವಭಾವದಲ್ಲಿ ಬೆಳೆದವರು. ಅದೇ ಧಾಟಿಯಲ್ಲಿ ಈ ಸಾರಿ ಲ್ಯಾಂಡ್ ರೆವೆನ್ಯೂನಲ್ಲಿ ಏಕೆ ಇಷ್ಟು ಕಡಮೆ ತೋರಿಸಿದ್ದೀರಿ ಎಂದು ಕೇಳಿದರು. ಅದಕ್ಕೆ ಮಾನ್ಯ ಆರ್ಥಿಕ ಸಚಿವರು ಉತ್ತರಕೊಟ್ಟರು. ಮೈಸೂರು ದೇಶದ ಪರಿಸ್ಥಿತಿಯನ್ನು ನೋಡಿದರೆ ವಿಚಿತ್ರವಾಗಿದೆ. ವಿಶೇಷವಾದಂಥ ನೀರಾವರಿ ಸೌಕರ್ಯ ಇದ್ದು ಸಮೃದ್ಧಿಯಾಗಿ ಬೆಳೆಯಾಗುವುದೂ ಉಂಟು, ಹೆಚ್ಚು ಮಳೆ ಬಂದು ಬೆಳೆ ಕೊಚ್ಚಿ ಹೋಗಿ ಉತ್ಪತ್ತಿ ಸರಿಯಾಗಿ ಆಗದಿರುವ ಪರಿಸ್ಥಿತಿ ಒದಗುವುದೂ ಉಂಟು. ಬರಗಾಲ ಬಂದು ತಿನ್ನುವುದಕ್ಕೆ ಅನ್ನವೇ ಸಿಕ್ಕದೆ ಹೋಗುವ ಪರಿಸ್ಥಿತಿ ಬರುವುದೂ ಉಂಟು. ಹೀಗೆ ನಾಲ್ಕಾರು ವಿಧವಾದ ಪ್ರಕೃತಿ ನಿಯಮ ನಮ್ಮ ದೇಶದಲ್ಲಿರುವುದರಿಂದ ಜಮೀನು ಕಂದಾಯವನ್ನೂ ಕಡಮೆಯಾಗಿ ತೋರಿಸಲು ಕಾರಣವಾಗಿದೆ. ಆದುದರಿಂದ ವಿರೋಧ ಪಕ್ಷದ ಸದಸ್ಯರು ಹೇಳಿರುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಈ ವರ್ಷ ಜೀವನ ಮಾಡುವುದಕ್ಕೆ ಸಾಧ್ಯವೇ ಇಲ್ಲದಿರುವ ಪರಿಸ್ಥಿತಿ ಬಂದಿರುವಾಗ ಒಂದು ರೂಪಾಯಿ ಕಂದಾಯ ಕೊಡುವುದಕ್ಕೂ ಕೂಡ ಸಾಧ್ಯವಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕು.

ಶ್ರೀ ಟಿ. ಮರಿಯಪ್ಪ.—ಕ್ಷಾಮ ಬಂದಾಗ ತಕ್ಷಣವೇ ಸಸ್ಪೆಂಡ್ ಮಾಡಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕೆಲವು ಸದಸ್ಯರು ಸರ್‌ಛಾರ್ಜ್ ಜಮೀನು ಕಂದಾಯದ ಮೇಲೆ ಹಾಕಬೇಕು, ಅದನ್ನು ಹಾಕದಿರುವುದು ಸರಿಯಲ್ಲ ಎಂದು ಹೇಳಿದರು. ಈ ದಿವಸದ ಪರಿಸ್ಥಿತಿಯೇನಾಗಿದೆಯೆಂಬುದನ್ನು ನೋಡಬೇಕೆಂದು ನಾನು ಅವರಿಗೆ ವಿನಯಪೂರ್ವಕವಾಗಿ ಅರಿಕೆ ಮಾಡುತ್ತೇನೆ. ರೂಪಾಯಿಗೆ ಒಂದು ಸೇರು ಅಕ್ಕಿಯಿದೆ. ಬೆಳೆಯುವವನಿಗೂ ಕೊಳ್ಳುವವನಿಗೂ ಕಷ್ಟವಾಗಿದೆ. ನಮ್ಮ ದೇಶದಲ್ಲಿ 2 ತಿಂಗಳೂ ಬೆಳೆಯುವ ರೈತರೆಷ್ಟಿದ್ದಾರೆಂಬುದನ್ನು ನೋಡಬೇಕು. ಒಂದು ವರ್ಷಕ್ಕಾಗುವಷ್ಟನ್ನು ಸಹ ಬೆಳೆಯದೆ ಇತರರನ್ನು ಆಶ್ರಯಿಸುವವರು ಅನೇಕರಿದ್ದಾರೆ. ಹೆಚ್ಚು ಬೆಳೆಯುವವರು ಕಡಮೆಯಿದ್ದು ವರ್ಷಕ್ಕೆ ಬೇಕಾಗುವುದಕ್ಕಿಂತ ಕಡಮೆ ಆಹಾರ ಪದಾರ್ಥಗಳನ್ನು ಬೆಳೆಯುವವರ ಸಂಖ್ಯೆ ಹೆಚ್ಚಾಗಿದೆ. ಪೂರ್ವದಲ್ಲಿ ಇದ್ದ ಪರಿಸ್ಥಿತಿಯೇನೆಂಬುದನ್ನು ಸರ್ಕಾರದವರು ಮತ್ತು ಈ ಸಭೆ ಯೋಚಿಸಬೇಕು. ಹಿಂದೆ ನಾಲ್ಕಾಣೆ ಕೊಟ್ಟರೆ ಒಂದು ಗಜ ಬಟ್ಟೆ ಬರುತ್ತಿತ್ತು. ಅದೇ ಈ ದಿವಸ ನಾಲ್ಕಾಣೆಯಿದ್ದುದ್ದಕ್ಕೆ 4 ರೂಪಾಯಾಗಿದೆ. ಹೀಗಿರುವಾಗ ರೈತ ಎಷ್ಟು ಪ್ರಮಾಣದಲ್ಲಿ ಕೊಂಡು ಧರಿಸಬಹುದು, ಎಷ್ಟು ಜೊತೆ ಬಟ್ಟೆ ಇಟ್ಟುಕೊಳ್ಳಲು ಅವನಿಗೆ ಯೋಗ್ಯತೆಯಿದೆ ಎಂದು ಕೂಡ ವಿಮರ್ಶೆ ಮಾಡಬೇಕು. ರೈತ ಎಲ್ಲ ಪದಾರ್ಥಗಳನ್ನೂ ಬೆಳೆಯದಿರುವಾಗ ಸುಲಭ ಬೆಲೆಯಲ್ಲಿ ಅವನಿಗೆ ಬೇಕಾದ ಇತರ ಪದಾರ್ಥಗಳು ಸಿಕ್ಕುತ್ತವೆಯೋ ಎಂಬುದನ್ನು ಯೋಚನೆ ಮಾಡಬೇಕು. ಅವನ ಪರ್ ಕ್ಯಾಪಿಟಾ ಇನ್‌ಕಂ ಜಾಸ್ತಿಯಾಗಿದೆಯೆ, ಖರ್ಚು ಎಷ್ಟಾಗಿದೆ, ವ್ಯವಸಾಯ ಮಾಡಲು ಒಂದು ಎಕರೆ ಜಮೀನಿಗೇನು ಖರ್ಚಾಗುತ್ತದೆ ಎಂಬುದನ್ನೂ ಗಮನಿಸಬೇಕು. ಈ ದಿವಸ ಇಪ್ಪತ್ತರಷ್ಟು ಖರ್ಚು ಮಾಡಿದರೂ ಜೀವನ ಸರಿಯಾಗಿ ನಡೆಸಿಕೊಂಡು ಬಾಳಲು ಸಾಧ್ಯವಿಲ್ಲದಿರುವ ಪರಿಸ್ಥಿತಿಯಿದೆ. ಆಹಾರ ಪದಾರ್ಥಗಳ ಬೆಲೆ ಏರಿ ಹೋಗಿದೆ. ಬತ್ತ ಬೆಳೆದವನು ಮೆಣಸಿನ ಕಾಯಿ, ಹುಣಿಸೆಹಣ್ಣು ವಗೈರೆ ಬೆಳೆಯುವುದಿಲ್ಲ, ಅವನ್ನು ಕೊಳ್ಳಲು ಅವನು ಯಾವ ಮಟ್ಟದಲ್ಲಿದ್ದಾನೆ. ಸುಖವಾಗಿ ಎರಡು ಹೊತ್ತು ಊಟ ಮಾಡುತ್ತಿದ್ದಾನೆಯೆ ಎಂಬುದನ್ನು ಯೋಚಿಸಬೇಕು.

ಶ್ರೀ ಜಿ. ಎಚ್. ಪುಟ್ಟಣ್ಣ.—ಸರ್ ಛಾರ್ಜು ಹಾಕುವ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ?

5 P.M.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—50 ಎಕರೆ, 50 ರೂಪಾಯಿ ಕಂದಾಯದ ಮೇಲೆ ಇರತಕ್ಕಂಥವರಿಗೆ ಸರ್-ಚಾರ್ಜ್ ಹಾಕತಕ್ಕದು ಎನುವುದು ಅಭಿಪ್ರಾಯದ ಮಾತು. 50 ರೂಪಾಯಿ ಮೇಲೆ ಹಾಕಬೇಕೋ, 100 ರೂಪಾಯಿ ಮೇಲೆಯೂ ಹಾಕಬೇಕೋ, 1000 ಎಕರೆ ಇಟ್ಟುಕೊಂಡಿರುವವರ ಮೇಲೆಯೂ ಹಾಕಬೇಕೋ ಎನ್ನುವುದು ಅಭಿಪ್ರಾಯದ ಮಾತು. ಈಗಾಗಲೇ ಸರ್ಕಾರದವರು ಒಂದು ಮಾರ್ಗವನ್ನೂ, ನೀತಿಯನ್ನೂ ಅನುಸರಿಸಿದ್ದಾರೆ. ಸರ್ವೆ ಸೆಟಲ್‌ಮೆಂಟನ್ನು ಮಾಡಬೇಕೆನ್ನುವ ನೀತಿಯನ್ನು ಅನುಸರಿಸಿದ್ದಾರೆ. ಇದನ್ನು ಮಾಡಬೇಕು. ಇದನ್ನು ನಡೆಸುವಾಗ ತೀವ್ರವಾದಂಥ ರೀತಿಯಲ್ಲಿ ಏರ್ಪಾಡು ಮಾಡಿ, ಜಾಗರೂಕತೆಯಾಗಿ ಮುಕ್ತಾಯವಾಗತಕ್ಕಂಥ ರೀತಿಯಲ್ಲಿ ಏರ್ಪಾಡು ಮಾಡತಕ್ಕಂಥಾದ್ದು ಸಾಧುವಾದ ಮಾತು. ಅದಕ್ಕಿಂತಲೂ ಮುಂಚಿತವಾಗಿ ನಮ್ಮ ಹಣದ ಕೊರತೆ ಬಹಳವಾಗಿದೆ. ಅದಕ್ಕೋಸ್ಕರ ವ್ಯವಸಾಯ ಮಾಡುವ ಜನರ ಮೇಲೆ ಸರ್ ಚಾರ್ಜ್ ಹಾಕಬೇಕೆಂದು ಎಷ್ಟು ಸುಲಭವಾಗಿ, ಹಗುರವಾಗಿ ವಾದ ಮಾಡುತ್ತಾರೆಂಬುದನ್ನು ಮಾತ್ರ ಹೇಳುತ್ತೇನೆ. ಇಷ್ಟನ್ನು ಮಾತ್ರ ಹೇಳುತ್ತೇನೆ: ಇದು ಸರಿಯಾದುದಲ್ಲ. ಶ್ರೀಮಾನ್ ವೆಂಕಟೇಗೌಡರು ಇರಿಗೇಷನ್ ವಿಷಯ ಪ್ರಸ್ತಾಪ ಮಾಡುತ್ತಾ, ಬೆಟರ್‌ಮೆಂಟ್ ಲೆವಿ ಹಾಕಬೇಕೆಂದು ಹೇಳಿದರು. ಸರ್ಕಾರದವರು ಯೋಚನೆ ಮಾಡಿದರೆ, ಬೆಟರ್‌ಮೆಂಟ್ ಲೆವಿ ಹಾಕಬೇಕೆನ್ನುವ ಉದ್ದೇಶವಾದರೂ ವ್ಯವಸಾಯ ಮಾಡುವ ರೈತನಿಗೆ ಹೆಚ್ಚಿನ ಸೌಲಭ್ಯವನ್ನೂ, ಸೌಕರ್ಯವನ್ನೂ ಒದಗಿಸಿ ಕೊಡುವುದಕ್ಕೆ ರೈತನು ಉತ್ಸಾಹವನ್ನು ಹೆಚ್ಚಿಸುವುದಕ್ಕೋಸ್ಕರ ಏನೇನು ಏರ್ಪಾಡುಗಳನ್ನು ಮಾಡಿಕೊಳ್ಳಬೇಕೋ, ಅವುಗಳನ್ನು ಒದಗಿಸುವ ಸಲುವಾಗಿ ಬೆಟರ್‌ಮೆಂಟ್ ಲೆವಿ ಹಾಕಬೇಕೆಂದು ಹೇಳಿದ್ದಾರೆ. ಇವೊತ್ತಿನ ದಿವಸ ತಮ್ಮ ಮೂಲಕ ರೆವಿನ್ಯೂ ಮಂತ್ರಿಗಳಿಗೂ, ಹಣಕಾಸಿನ ಮಂತ್ರಿಗಳಿಗೂ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅನೇಕ ಕಡೆಗಳಲ್ಲಿ ಪಿ. ಡಬ್ಲ್ಯು. ಡಿ.ಯವರು ಇರ್ರಿಗೇಷನ್ನಿಗೆ ದೊಡ್ಡ ದೊಡ್ಡ ಮೇಜರ್ ಟ್ಯಾಂಕುಗಳಿಂದ ನೀರನ್ನು ಹಂಚುವ ವ್ಯವಸ್ಥೆ ತೆಗೆದುಕೊಂಡಿದ್ದಾರೆ. ಅದಕ್ಕೋಸ್ಕರ ವಾಟರ್ ಟ್ಯಾಕ್ಸ್ ಲೆವಿ ಮಾಡಿದ್ದಾರೆ. ಸರ್ಕಾರದವರು ಒಂದು ಉದ್ದೇಶಕ್ಕೋಸ್ಕರ ಟ್ಯಾಕ್ಸ್ ಹಾಕಿದ್ದರೆ, ಅದನ್ನು ಯಾವ ಉದ್ದೇಶಕ್ಕಾಗಿ ಹಾಕಿರುತ್ತೀರಿ ? ಆ ಉದ್ದೇಶವನ್ನಾದರೂ ಪ್ರಯೋಜನಕಾರಿಯನ್ನಾಗಿ ಮಾಡುವುದಕ್ಕೆ ಪ್ರಯತ್ನಗಳನ್ನೇ ಮಾಡುವುದಿಲ್ಲ. ಅದಕ್ಕೆ ಸರಿಯಾದ ಏರ್ಪಾಡುಗಳನ್ನು ಮಾಡುವುದಿಲ್ಲ. ಯಾವುದಾದರೂ ಒಂದು ಕೆರೆ ತೆಗೆದುಕೊಳ್ಳಿ, ಕಡಬದ ಕೆರೆ, ಚಂದ್ರಶೇಖರಪುರಕೆರೆ, ಕುಣಿಗಲ್‌ಕೆರೆ,

ಮಾತ್ತೊಂದು ಮುಗದೊಂದು ಕೆರೆ, ಎಕ್ಸೆಸ್ಸಾಗಿ 3-4 ರೂಪಾಯಿ ವಾಟರ್ ಟ್ಯಾಕ್ಸ್, ಮೇಂಟೆನೆನ್ಸ್ ಟ್ಯಾಕ್ಸ್ ಲೆವಿ ಮಾಡಿರುವಾಗ, ಒಂದು ಕಡೆ ಬಂದು ಕ್ರಾಪಿಗೆ ಎಷ್ಟು ನೀರು ಬೇಕು ಅಷ್ಟನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ಮನೆ ಮಠ ಬಿಟ್ಟು ರಾತ್ರಿ ಹಗಲು ಕಾಲುವೆ ಮೇಲೆ ನಿಂತುಕೊಂಡರೆ, ನೀರು ಸಿಕ್ಕದೆ ಹೋದರೆ, ನೀವು ಬೆಟರ್‌ಮೆಂಟ್ ಟ್ಯಾಕ್ಸ್, ವಾಟರ್ ಟ್ಯಾಕ್ಸ್, ಮೆಂಟೆನೆನ್ಸ್ ಟ್ಯಾಕ್ಸ್ ಹಾಕಿದರೆ ಹೇಗೆ? ಅವನು ಬೆಳೆ ಬೆಳೆಯುವುದಕ್ಕೆ ಸಾಕಷ್ಟು ಸೌಲಭ್ಯಗಳನ್ನು ಏರ್ಪಾಡು ಮಾಡಿ ಕೊಟ್ಟಿದ್ದೀರಾ ಇಲ್ಲವೇ ಎನ್ನತಕ್ಕಂಥದ್ದನ್ನು ನೀವು ಯೋಚನೆ ಮಾಡಬೇಕು. ಸಂಬಂಧಪಟ್ಟ ಇಲಾಖೆಯವರು, ಯಾವ ಡಿಪಾರ್ಟ್‌ಮೆಂಟಿಗೆ ಈ ಏರ್ಪಾಡುಗಳನ್ನು ವಹಿಸಿದ್ದೀರೋ ಅವರು ಅದನ್ನು ನೋಡುತ್ತಾ ಇದ್ದಾರೆಯೇ ಎಂಬುದನ್ನು ಯೋಚನೆ ಮಾಡಬೇಕು. ಹೀಗೆ ನೀವು ಒಂದು ಟ್ಯಾಕ್ಸನ್ನು ಹಾಕಿ ಸೌಲಭ್ಯಗಳನ್ನು ಒದಗಿಸಿ ಕೊಡದೆ ಹೋದರೆ, ಟ್ಯಾಕ್ಸನ್ನು ಹಾಕುವ ಉದ್ದೇಶವಾದರೂ ಏನು, ಭಾವನೆಗಳಾದರೂ ಏನು ! ಇದರಿಂದ ದೇಶದ ಅಭಿವೃದ್ಧಿ, ದೇಶದ ರೈತನ ಪುರೋಭಿವೃದ್ಧಿ, ಆಯಿತೇ ಎಂದು ಪ್ರಶ್ನೆ ಮಾಡುತ್ತೇನೆ.

ಹೀಗೆ ಯಾವ ಒಂದು ಟ್ಯಾಕ್ಸನ್ನು ಹಾಕಿದರೂ ಕೂಡ, ಅದಕ್ಕೆ ಸರಿಯಾದಂಥ ಸೌಲಭ್ಯಗಳನ್ನು ಕೊಡತಕ್ಕಂಥ ಏರ್ಪಾಡನ್ನು ಮೊದಲು ಮಾಡಬೇಕು.

ಶ್ರೀ ಟಿ. ಮರಿಯಪ್ಪ.—ಹೊಸದಾಗಿ ಇರಿಗೇಷನ್ ಟ್ಯಾಂಕುಗಳನ್ನು ರೆಸ್ಟೋರ್ ಮಾಡಿದರೆ ಮಾತ್ರ ಬೆಟರ್‌ಮೆಂಟ್ ಲೆವಿ ಹಾಕುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಬೆಟರ್ ಮೆಂಟ್ ಲೆವಿ, ಮೆಂಟೆನೆನ್ಸ್ ಟ್ಯಾಕ್ಸ್ ಏನು ಹಾಕುತ್ತೀರೋ, ಅದಕ್ಕೆ ಸಂಬಂಧಪಟ್ಟ ಹಾಗೆಯೇ ಆಗುತ್ತದೆ. ಅರ್ಥಬೇರೆ ಇರಬಹುದು. ಸರಿಯಾದ ರೀತಿಯಲ್ಲಿ ನೀರನ್ನು ಒದಗಿಸಿಕೊಡತಕ್ಕದು ಎಂದು ಕೇಳಿದೆ.

ಶ್ರೀ ಟಿ. ಮರಿಯಪ್ಪ.—ಹೊಸಕೆರೆ ಕಟ್ಟುವುದಕ್ಕೆ ಅಥವಾ ಹಳೆಯ ಕೆರೆ ರೆಸ್ಟೋರ್ ಮಾಡುವುದಕ್ಕೋಸ್ಕರ ಕಂಟ್ರಿಬ್ಯೂಷನ್ ಕುಣಿಗಲ್ ಕೆರೆ ಗವರ್ನಮೆಂಟಿನವರು, ತೆಗೆದುಕೊಂಡರು, ಎಕರೇಜ್ ಸೆಸ್ ಹಾಕಿದರು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಮೇಂಟೆನೆನ್ಸ್ ಮಾಡುತ್ತಾ ಇದ್ದರೆ, ನೀರು ಸಲೀಸಾಗಿ ಹೋಗುತ್ತದೆ. ಚಾನಲ್ ಮೇಂಟೇನ್ ಮಾಡಿ, ನೀರು ಕೊಟ್ಟರೆ ತಾನೆ ಮೆಂಟೆನೆನ್ಸ್ ಚಾರ್ಜ್ ಹಾಕುವುದು ? ಬರಿಯ ಮೆಂಟೆನೆನ್ಸ್ ಚಾರ್ಜ್ ವಸೂಲು ಮಾಡಿಬಿಟ್ಟು ಲಕ್ಷಾಂತರ ರೂಪಾಯಿ ವಸೂಲು ಮಾಡುವಾಗ ಬೆಳೆ ಬೆಳೆಯುವುದಕ್ಕೆ ಬೇಕಾದ ಅನುಕೂಲತೆಗಳನ್ನು ನೋಡಿಕೊಳ್ಳದೆ ಹೋದರೆ ಅರ್ಥವಿಲ್ಲ. ಯಾವ ಟ್ಯಾಕ್ಸೇ ಆಗಲಿ, ಬೆಟರ್‌ಮೆಂಟ್ ಟ್ಯಾಕ್ಸ್ ಸಂಬಂಧದಲ್ಲಿ ಈ ವಿಷಯದಲ್ಲಿ ಬಂದಿದ್ದು, ಅದನ್ನು ಪ್ರಸ್ತಾಪ ಮಾಡಿದ್ದೇನೆ. ಸರ್‌ಚಾರ್ಜ್ ವಿಷಯದಲ್ಲಿ ಅಷ್ಟು ಹಗುರವಾಗಿ ಯೋಚನೆ ಮಾಡತಕ್ಕದ್ದಲ್ಲ. ಸರ್ವೆ ಸೆಟಲ್‌ಮೆಂಟ್ ನಾವು ತೆಗೆದುಕೊಂಡಿರುವಾಗ ಆ ವಿಷಯದ ಕಡೆಗೆ ಗಮನ ಕೊಡುವುದು ಅಗತ್ಯವಿಲ್ಲವೆಂದು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

ಈ ಸಾರಿಯ ಬಜೆಟ್ಟಿನಲ್ಲಿ, ಸ್ವಾಮಿ, ನಾನು ಮೊದಲನೆಯದಾಗಿ ವಿದ್ಯಾಭ್ಯಾಸವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ವಿದ್ಯಾಭ್ಯಾಸಕ್ಕೆ 13 ಕೋಟಿ ಚಿಲ್ಲರೆ ಹಣವನ್ನು ಒದಗಿಸಿದೆ. ಇಷ್ಟು ಹೇರಳವಾಗಿ ಒದಗಿಸಿರುವಾಗ, ಪ್ರೈಮರಿ ಎಜ್ಯುಕೇಷನ್ನಿಗೋಸ್ಕರವಾಗಿ ಆರೂವರೆ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ; ಸೆಕೆಂಡರಿ ಎಜುಕೇಷನ್ನಿಗೋಸ್ಕರವಾಗಿ 140 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಒಂದು ವಿಷಯದ ಮೇಲೆ ಮಾನ್ಯ ಸಭೆಯ ಅನೇಕ ಸದಸ್ಯರು ಮಾತನಾಡಿದ್ದಾರೆ. 1,200 ರೂಪಾಯಿಗಳಿಗೆ ಕಡಮೆ ಉತ್ಪತ್ತಿ ಇರತಕ್ಕಂಥವರಿಗೆ ಹೈಸ್ಕೂಲಿನವರೆಗೆ ಫ್ರೀ ಎಜ್ಯುಕೇಷನ್ ಕೊಡಬೇಕೆಂದು ಮಾಡಿರತಕ್ಕುದು ಸ್ತೋತ್ರಾರ್ಹವಾದ ವಿಷಯ. ಅದನ್ನು ಹೊಗಳಿದ್ದಾರೆ ; ನಾನೂ ಹೊಗಳುತ್ತೇನೆ. ಆದರೆ ಹಾಗೆ ಹೊಗಳುವಾಗ ತಮಗೆ ಒಂದು ಮಾತು ಹೇಳಬೇಕು ಎಂದಿದ್ದೇನೆ. ಇತ್ತೀಚಿನ ದಿವಸ 1,200 ರೂಪಾಯಿಗಳ ಕೆಳಗೆ ವರಮಾನ ಇರತಕ್ಕಂಥವನ್ನು ಅವನ ಮಗುವನ್ನು ಪಾಠಶಾಲೆಗೆ ಕಳುಹಿಸಿ ಕೊಟ್ಟರೆ, ಫ್ರೀ ಎಜ್ಯುಕೇಷನ್ ಕೊಟ್ಟರೂ ಕೂಡ, ಎಜುಕೇಷನ್ ಒದಗುತ್ತಾ ಇದೆಯೋ ಎಂಬುದನ್ನು ಬಹಳ ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ಸ್ಕೂಲಿಗೆ ಹುಡುಗನನ್ನು ಕಳುಹಿಸಿಕೊಡುವುದರಿಂದಲೇ, ಅವನಿಗೆ 3-4 ರೂಪಾಯಿ ಫೀಸ್ ಕಡಮೆಯಾಗುವುದರಿಂದಲೇ, ಅವನ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಸಿಕ್ಕುತ್ತಾ ಇದೆಯೆ ? ಇಷ್ಟು ಹಣವನ್ನು ನಾವು ಖರ್ಚು ಮಾಡುತ್ತಾ ಇದ್ದೇವೆ. ಆರೂವರೆ ಕೋಟಿ ರೂಪಾಯಿಗಳನ್ನು ಪ್ರೈಮರಿ ಎಜುಕೇಷನ್ನಿಗೋಸ್ಕರ ಖರ್ಚು ಮಾಡುತ್ತಿದ್ದೇವೆ. ನಮಗೆ ಬರುತ್ತಿದ್ದ ಕ್ವಾಲಿಟಿ ಏನಿತ್ತೋ ಅದು ಬರುತ್ತಾ ಇದೆಯೇ, ಏನು ವಿದ್ಯಾಭ್ಯಾಸ ನಮಗೆ ದೊರಕುತ್ತಿದೆಂಬುದನ್ನು ಹೇಳಬೇಕೆಂದು ನಮ್ಮ ವಿದ್ಯಾಖಾತೆಯ ಮಂತ್ರಿಗಳನ್ನು ತೀವ್ರವಾಗಿ ಪ್ರಶ್ನೆ ಮಾಡಬೇಕು. ಸ್ವಾಮಿ, ಇವೊತ್ತಿನ ದಿವಸ ಹಳ್ಳಿಯಲ್ಲಿ ಮಕ್ಕಳನ್ನು ಕಳುಹಿಸತಕ್ಕವರೂ ಕೂಡ, ಸ್ಕೂಲಿನ ಉಪಾಧ್ಯಾಯರು ಅಥವಾ ಮತ್ತೆ ಇನ್ನಾರ ನೆರವನ್ನು ತೆಗೆದುಕೊಳ್ಳದೆ ಹೋದರೆ ಆಗುವುದೇ ಇಲ್ಲ. ಯಾರು ಅನುಕೂಲಸ್ಥರಾಗಿರುತ್ತಾರೋ, ತಿಳಿವಳಿಕಸ್ಥರಾಗಿರುತ್ತಾರೋ ಅವರು ಅವರ ಮಕ್ಕಳಿಗೆ ಪ್ರೈವೇಟ್ ಟ್ಯೂಷನ್ ಇಟ್ಟುಕೊಳ್ಳದೆ ಇಲ್ಲವೇ ಇಲ್ಲ. ಹಳ್ಳಿಯವರು ತಮ್ಮ ಮಕ್ಕಳಿಗೆ ಪ್ರತ್ಯೇಕವಾಗಿ ಪಾಠಹೇಳುವ ಯೋಚನೆ ಮಾಡದೆ ಹೋದರೆ ಅವರ ಮಕ್ಕಳು ವಿದ್ಯಾವಂತರಾಗಿ ಹೈಸ್ಕೂಲಿಗೆ ಬರುವುದಕ್ಕೆ ಸಾಧ್ಯವಿಲ್ಲ. ಮುಂದಕ್ಕೆ ತಳ್ಳಿದರೆ ಹೈಸ್ಕೂಲಿಗೆ ಬರಬಹುದು. ಹೈಸ್ಕೂಲಿನ ಏನಾಗುತ್ತದೆ? ಹೈಸ್ಕೂಲಿನಲ್ಲಿ ಪಾಸ್ ಆಗಿ ಬರಬೇಕಾದರೆ ಬ್ರಹ್ಮಲೋಕಕ್ಕಾದರೂ ಹೋಗಬಹುದು, ಪಾಪ, ಹುಡುಗನ ಕಷ್ಟ ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಹೇಳಿದ್ದು ಏನಾದರೂ ಅರ್ಥವಾದರೆ ತಾನೆ, ಮುಂದಕ್ಕೆ ಹೋಗುವುದು ? ಹೀಗಿದೆ ನಮ್ಮ ವಿದ್ಯಾಭ್ಯಾಸದ ಕ್ವಾಲಿಟಿ. ಈ ಬಜೆಟ್ಟನ್ನು ತಾವು ಈ ಸಭೆಯ ಮುಂದೆ ಮಂಡಿಸುವಾಗ ನನಗೆ ಅನ್ನಿಸಿತು. "ಅಪ್ಪ ಇದು ಫ್ರೀ ಎಜುಕೇಷನ್" ಅಲ್ಲ ಎಂದು. ಈ ಎಜುಕೇಷನ್ ಕ್ವಾಲಿಟಿ ಇಂಪ್ರೂವ್ ಮಾಡಿದರೆ ನಮಗೆ ಎಷ್ಟೋ ಹಣ ಉಳಿತಾಯವಾಗುತ್ತದೆ.

ಪ್ರೈಮರಿ ತರಗತಿಯ ಹುಡುಗರಿಂದ ಹಿಡಿದು ಕಾಲೇಜು ಹುಡುಗರವರೆಗೆ, ಅವನ ಪಾಠ ಹೇಳಿಸಬೇಕೆಂದರೆ, ಪ್ರೈಮರಿಯಿಂದ ಕಾಲೇಜು ವಿದ್ಯಾಭ್ಯಾಸದ ಕ್ರಮದಲ್ಲಿ ಎಷ್ಟು ತಿರುಳಿದೆ, ಎಷ್ಟು ಮಟ್ಟಿಗೆ ಅಭಿವೃದ್ಧಿಯಾಗಿದೆ, ಇದರಿಂದ ದೇಶಕ್ಕೇನಾದರೂ ಕ್ಷೇಮವಾಗುತ್ತದೆಯೆ ಎನ್ನುವುದನ್ನು ಯೋಚನೆ ಮಾಡಬೇಕು. 'ಮೆರಿಟ್' ಎನ್ನುವುದನ್ನು ದೇಶದಲ್ಲಿ

(ಶ್ರೀ ಟಿ. ಎಸ್. ಮೂಡಲಗಿರಿಗೌಡ)

ಎಲ್ಲರೂ ಬಹಳ ಸುಲಭವಾಗಿ ಪ್ರಸ್ತಾಪ ಮಾಡುತ್ತಿದ್ದಾರೆ. ದೇಶದಲ್ಲಿ ದಕ್ಷತೆಯಿಂದ ಆಡಳಿತವನ್ನು 'ಮೆರಿಟ್' ಇಲ್ಲದೆ ಹೇಗೆ ನಡೆಸಿಕೊಂಡು ಹೋಗಬೇಕೆಂಬ ಪ್ರಶ್ನೆ ಬರುತ್ತದೆ. ವಿದ್ಯಾಭ್ಯಾಸಕ್ಕಾಗಿ ದೇಶದ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ; ಇದರಲ್ಲಿ ಎಷ್ಟು ಭಾಗಕ್ಕೆ ಸರಿಯಾದ ಪ್ರತಿಫಲ ಸಿಕ್ಕುತ್ತದೆ ಎನ್ನುವುದನ್ನು ನೋಡಬೇಕು. ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕು. ಎನ್.ಜಿ.ಓ.ಗಳಿಗೆ ಬಹಳ ಸಹಾನುಭೂತಿಯಿಂದ ಐದು ರೂಪಾಯಿ ಪರಿಹಾರ ಕೊಟ್ಟಿದ್ದಾರೆ. ಸಹಾನುಭೂತಿಯಿಂದ ಕೊಟ್ಟಿರುವ ಈ ಐದು ರೂಪಾಯಿಗಳಿಂದ ಸರ್ಕಾರಕ್ಕೆ ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿ ಖರ್ಚಾಗುತ್ತದೆ, ಮೂರು ವರ್ಷಗಳಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ಖರ್ಚಾಗುತ್ತದೆ. ಒಂದು ವಿಷಯವನ್ನು ಈ ಸಭೆಯ ಮತ್ತು ದೇಶದ ಗಮನಕ್ಕೆ ತರುತ್ತಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಈ ಐದುರೂಪಾಯಿ ಕೊಟ್ಟು ಬೇಸಿಕ್‌ಪೇ ಅಥವಾ ಅಲೋಯನ್ಸ್ ಹೆಚ್ಚು ಮಾಡುವುದರ ಜೊತೆಗೆ ಪ್ರತಿಯೊಬ್ಬ ನೌಕರನೂ ಎಷ್ಟು ಕೆಲಸ ಮಾಡಿದ್ದಾನೆ, ಎಷ್ಟು ಮಾಡಿಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು. Work load ಗೊತ್ತುಮಾಡಿ ಕೊಡಬೇಕು. ಈಹೊತ್ತು ಎಂಟುಗಂಟೆಗೋ ಒಂಬತ್ತುಗಂಟೆಗೋ ಹೋಗಿ ಹತ್ತು ಹನ್ನೊಂದು ಗಂಟೆಗೆ ಪಾಠಶಾಲೆಯನ್ನು ಮುಗಿಸಿಕೊಂಡು, ಒಂದು ಗಂಟೆ ಮಾತ್ರ ಪಾಠಹೇಳಿ ಆಮೇಲೆ ತಿರುಗಾಡಿಕೊಂಡು ಮನೆಗೆ ಬರುವ ಸ್ಥಿತಿಇದೆ. ಉಪಾಧ್ಯಾಯ ಎಷ್ಟುಮಟ್ಟಿಗೆ ಪಾಠ ಹೇಳುತ್ತಾನೆನ್ನುವುದನ್ನು ನೋಡಬೇಕು. ವಿದ್ಯಾಭ್ಯಾಸದ ಇಲಾಖೆ ಎಷ್ಟು ಮಟ್ಟಿಗೆ ಹೀನಸ್ಥಿತಿಗೆ ಬಂದಿದೆಯೆಂದರೆ, ಸರ್ಕಾರಕ್ಕಾಗಲೀ ಪ್ರಜೆಗಳಿಗಾಗಲೀ ಅದನ್ನು ಸರಿಮಾಡುವುದಕ್ಕಾಗುವುದಿಲ್ಲವೋ ಏನೋ! ಬ್ರಹ್ಮಬಂದರೂ ಅವನಿಂದ ಸಾಧ್ಯವಿಲ್ಲವೋ ಎನ್ನುವ ಸ್ಥಿತಿಗೆ ಬಂದಿದೆ. ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಸರಿಮಾಡದೇ ಹೋದರೆ, ದೇಶ ಬಹಳ ಕೆಳಮಟ್ಟಕ್ಕೆ ಬರಬೇಕಾಗುತ್ತದೆ. ಇದು ಬಹಳ ಮುಖ್ಯವಾದ ವಿಷಯ. ಬಾಕಿ ಇಲಾಖೆಗಳಲ್ಲಿಯೂ ಹಾಗೆಯೇ ಇದೆ. ಯಾರಾದರೂ ಖಾಸಗಿ ಮನುಷ್ಯನ ಹತ್ತಿರ ಒಬ್ಬ ನೌಕರ ಕೆಲಸಕ್ಕಿದ್ದರೆ, ಆ ನೌಕರನು ಎಷ್ಟುಗಂಟೆ ಕೆಲಸಮಾಡುತ್ತಾನೆ, ಎಷ್ಟು ದಕ್ಷತೆಯಿಂದ ಕೆಲಸಮಾಡುತ್ತಾನೆ ಎಂಬುದನ್ನು ಪರಿಶೀಲನೆ ಮಾಡುತ್ತಾನೆ. ಯಜಮಾನನಿಗೆ ತೃಪ್ತಿಕರವಾಗಿ ಕೆಲಸ ಮಾಡದೇಹೋದರೆ ಅವನ ಪರಿಸ್ಥಿತಿ ಏನಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಯಜಮಾನನ ಹಿತದೃಷ್ಟಿಯಿಂದ ತೃಪ್ತಿಕರವಾಗಿ ಕೆಲಸ ಮಾಡಿದ ನೌಕರರು, ಕಾಲಕ್ರಮದಲ್ಲಿ ಪಾಲುದಾರರಾಗಿದ್ದಾರೆ. ಎಷ್ಟೋ ಅಂಗಡಿಗಳಲ್ಲಿ ಗುಮಾಸ್ತರಾಗಿದ್ದವರು ಪಾಲುದಾರರಾಗಿದ್ದಾರೆ. ಯಾವ ಕಾರಣದಿಂದ ಹೀಗಾಗಿದ್ದಾರೆಂದರೆ ಬಂಡವಾಳದಲ್ಲಿ ಹಣವನ್ನು ಹೊಡೆದು ಹೀಗಾಗುವುದಿಲ್ಲ, ನೌಕರ ತಾನು ದುಡಿದು ಯಜಮಾನನ ಬಂಡವಾಳವನ್ನು ಹೆಚ್ಚಿಸಿದ್ದರಿಂದ ಅವನ ಸಂತೋಷಕ್ಕೆ ಪಾತ್ರನಾಗಿ ಮೇಲಕ್ಕೆ ಬಂದಿದ್ದಾನೆ. ನನ್ನ ಬಂಡವಾಳವನ್ನು ಇವನು ದುಡಿಮೆಯಿಂದ ಹೆಚ್ಚಿಸಿದ್ದಾನೆ. ಆದುದರಿಂದ ನನ್ನ ಭಾಗದ ಆದಾಯದಲ್ಲಿ ಒಂದು ಭಾಗವನ್ನು ಇವನಿಗೆ ಸಂತೋಷದಿಂದ ಕೊಡುತ್ತೇನೆ, ಎಂದು ಅವನನ್ನು ತನ್ನ ಪಾರ್ಟ್‌ನರ್ ಆಗಿ ತೆಗೆದುಕೊಳ್ಳುತ್ತಾನೆ. ಇದನ್ನು ಏಕೆ ಹೇಳುತ್ತೇನೆಂದರೆ, ನೌಕರರು ಶ್ರದ್ಧೆಯಿಂದ ದೇಶದ ಕೆಲಸಮಾಡಿದರೆ, ಪ್ರತಿಫಲವನ್ನೂ ಪಡೆಯಬಹುದು. ಅವರು ತುಟ್ಟಿಭತ್ಯ ಅಥವಾ ಮೂಲಸಂಬಳ ಹೆಚ್ಚುಮಾಡುವುದಕ್ಕೆ ನಾನು ಪ್ರೋತ್ಸಾಹ ಕೊಡುವವನು. ಇನ್ನು ಯಾವ ಅನುಕೂಲವನ್ನಾದರೂ ಅವರಿಗೆ ಕೊಡಬಹುದು. ಆದರೆ ಅವರು ದೇಶಾಭಿಮಾನವಿಲ್ಲದೆ ಸ್ವಾಭಿಮಾನವನ್ನಿಟ್ಟುಕೊಂಡು ದೇಶಕ್ಕಾಗಿ ಸರಿಯಾಗಿ ದುಡಿಯದೇ ಹೋದರೆ, ಅವರಿಗೆ ಕೊಟ್ಟದ್ದೆಲ್ಲವೂ ದೇಶಕ್ಕೆ ವ್ಯರ್ಥ ಅಥವಾ ನಷ್ಟವೆಂದು ನನ್ನ ಭಾವನೆ. ಸರ್ಕಾರಿ ಇಲಾಖೆಗಳಲ್ಲಿ ದಕ್ಷತೆಯನ್ನು ಹೇಗೆ ಹೆಚ್ಚಿಸಬೇಕೆಂಬುದನ್ನು ಈ ಹೊತ್ತಲ್ಲ, ನಾಳೆಯಾದರೂ ಕಂಡುಹಿಡಿಯಬೇಕು. ದಕ್ಷತೆಯಿಂದ ಹೆಚ್ಚುಕೆಲಸವನ್ನು ಮಾಡಿದರೆ, ಮುಂದೆ ಏನು ಬಡ್ತಿಯನ್ನು ಕೊಡಬೇಕೆಂಬುದನ್ನು ಯೋಚನೆ ಮಾಡಬಹುದು. ಅಂಡರ್ ಸೆಕ್ರೆಟರಿ, ಸೂಪರಿಂಟೆಂಡೆಂಟರು ಮುಂತಾದ ಮೇಲ್ಪಟ್ಟ ಅಧಿಕಾರಿಗಳಿದ್ದರೆ ಅವರು ತಮ್ಮ ಶಾಖೆಯಲ್ಲಿರುವ ನೌಕರರು ಎಷ್ಟೆಷ್ಟು ಕೆಲಸ ಮಾಡುತ್ತಾರೆಂಬುದನ್ನು ಗೊತ್ತುಮಾಡಿಟ್ಟುಕೊಂಡು ದಕ್ಷತೆಯಿಂದ ಕೆಲಸ ಮಾಡಿದರೆ ಐದು ರೂಪಾಯಿಲ್ಲದಿದ್ದರೆ ಹತ್ತು ರೂಪಾಯಿ ಬಡ್ತಿಕೊಡಬಹುದು. ಯಾವನು ಕೆಲಸ ಮಾಡುತ್ತಾನೋ ಅವನಿಗೆ ಕೊಡಿ, ಮಾಡದೇಯಿರುವವನಿಗೂ ಕೊಡಬೇಕೆಂದರೆ, ಇದರಲ್ಲಿ ಅರ್ಥವಿಲ್ಲ. ನನ್ನ ಮನೆಯಲ್ಲಿ ನಾಲ್ಕು ಜನ ಅಣ್ಣ ತಮ್ಮಂದಿರಿದ್ದಾರೆ, ನಾನು ವ್ಯವಸಾಯ ಕೆಲಸ ಮಾಡುತ್ತೇನೆ, ನನ್ನ ತಮ್ಮ ಗೆಜೆಟೆಡ್ ಆಫೀಸರ ಕೆಲಸ ಮಾಡುತ್ತಿದ್ದಾನೆ, ಇನ್ನೊಬ್ಬ ವ್ಯಾಪಾರ ಮಾಡುತ್ತಾನೆ. ವ್ಯವಸಾಯಗಾರ ಎಷ್ಟು ಗಂಟೆ ಕೆಲಸ ಮಾಡುತ್ತಾನೆ, ಅವನೇನಾದರೂ ಉದಾಸೀನ ಮಾಡಿದರೆ, ಅವನ ಪರಿಸ್ಥಿತಿ ಒಂದು ವರ್ಷದಲ್ಲಿ ಯಾವ ಮಟ್ಟಕ್ಕೆ ಬರುತ್ತದೆ ಎಂಬುದನ್ನು ನೋಡಬೇಕು; ವ್ಯಾಪಾರ ಮಾಡುವ ತಮ್ಮ ಎಷ್ಟು ಮಟ್ಟಿಗೆ ಕೆಲಸ ಮಾಡಬೇಕು, ಅಲಕ್ಷ್ಯ ಮಾಡಿದರೆ ಏನಾಗುತ್ತದೆ, ಮುಂತಾದ ಎಲ್ಲವನ್ನೂ ಯೋಚನೆ ಮಾಡಬೇಕು. ಹಾಗಿಲ್ಲದೆ ದೇಶವನ್ನು ಸೂರೆ ಮಾಡಿ ಯಾರದೋ ದಾಕ್ಷಿಣ್ಯ ಸಂಪಾದನೆ ಮಾಡಲು ಪ್ರಯತ್ನಪಡುವುದು ತಪ್ಪು. ಯಾವ ಪಕ್ಷಕ್ಕೇ ಸೇರಿರಲಿ, ನಾವು ಖರ್ಚು ಮಾಡುವುದು ನಮ್ಮ ದೇಶದ, ಸಾರ್ವಜನಿಕರಿಗೆ ಸೇರಿದ ನಿಧಿಯಿಂದ. ಆದುದರಿಂದ ಸರ್ವರೂ ಇದನ್ನು ಯೋಚನೆ ಮಾಡಬೇಕು. ದಕ್ಷತೆಯನ್ನು ಹೆಚ್ಚಿಸಲು ಏನಾದರೂ ಒಂದು ಉಪಾಯವನ್ನು ಕಂಡುಹಿಡಿಯಬೇಕು. ಇಲ್ಲದಿದ್ದರೆ, ಸುಮ್ಮನೆ ಈ ಹೊತ್ತು ಐದು ರೂಪಾಯಿ, ನಾಳೆ ಹತ್ತು, ಮುಂದೆ ಇಪ್ಪತ್ತು ಹೀಗೆ ಕೊಡುತ್ತಿರಬೇಕು. ಇದರಿಂದ ದೇಶದ ಪರಿಸ್ಥಿತಿಯನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆಂಬುದನ್ನು ಯೋಚನೆ ಮಾಡಬೇಕು. ಈ ಹೊತ್ತು ದೇಶದಲ್ಲಿ ರೈತನ ಸ್ಥಿತಿಯನ್ನು ಪ್ರತಿಹಳ್ಳಿಯಲ್ಲಿಯೂ ಹೋಗಿ ನೋಡಿಕೊಂಡು ಬರಲಿ, ಆಗ ಅವನ ಸ್ಥಿತಿ ಗೊತ್ತಾಗುತ್ತದೆ. ಅಲ್ಲಿ ಕಬ್ಬಿಣ ಸಿಮೆಂಟ್ ಹಾಕಿ ಕಟ್ಟಿದ ಮನೆಗಳು ಎಷ್ಟಿವೆ? ಎಲ್ಲವೂ ಮಣ್ಣಿನ ಮನೆಗಳು. ದೇಶದಲ್ಲಿರುವ ಸಿಮೆಂಟ್ ಕಾರ್ಖಾನೆ ನಮ್ಮ ರೆವಿನ್ಯೂ ಬಂಡವಾಳ ಹಾಕಿ ಮಾಡಿರುವುದು, ಕಬ್ಬಿಣದ ಕಾರ್ಖಾನೆ ನಮ್ಮ ದೇಶದ ಹಣದಲ್ಲಿ ಬಂಡವಾಳ ಹಾಕಿ ಮಾಡಿರುವುದು. ಇಷ್ಟಾದರೂ ಹಳ್ಳಿಯ ರೈತ ಒಂದು ಕಿಟಕಿ ಕಂಬಿಯನ್ನು ತರಬೇಕಾದರೆ ಬೆಂಗಳೂರು ಪೇಟೆಯಲ್ಲಿ ಹನ್ನೆರಡು ಬೀದಿ ತಿರುಗಬೇಕು, ಯಾರು ಯಾರಿಗೋ ಸಲಾಮು ಹಾಕಬೇಕು. ಇಷ್ಟು ಮಾಡಿದರೂ ಒಂದು ತುಂಡು ಕಬ್ಬಿಣವನ್ನು

ತರುವುದಕ್ಕೂ ಸಾಧ್ಯವಿಲ್ಲ, ರೈತನ ಪರಿಸ್ಥಿತಿ ಹೀಗಿದೆ. ಬೇರೆಯವರಿಗೆ ಹೇಗೆ ಸಿಕ್ಕುತ್ತದೆಂದರೆ, ಯಾವ ಮಾರ್ಗದಲ್ಲಿ ಹೋದರೆ ಸಿಕ್ಕುತ್ತದೆಂಬುದು ಅವರಿಗೆ ಗೊತ್ತು, ಒಂದಕ್ಕೆ ಎರಡು ಬೆಲೆ ಕೊಡುವ ಚೈತನ್ಯ ವಿದೆ, ಅವರಿಗೆ. ಆದರೆ ರೈತನಿಗೆ ಆ ಶಕ್ತಿ ಇಲ್ಲ. ಒಂದು ರೂಪಾಯಿಗೆ ಒಂದು ಸೇರು ಒಂದೂವರೆ ಸೇರು ಅಕ್ಕಿ ಆಗಿದೆ, ಎರಡು ಎರಡೂವರೆ ಸೇರು ರಾಗಿ ಆಗಿದೆ, ನಿಶ್ಚಯ. ಆದರೂ ರೈತನಲ್ಲಿ ಹಣವೆಲ್ಲಿದೆ ?

ಸ್ವಾಮಿ, ಇವೊತ್ತಿನ ದಿವಸ ಫಾರೆಸ್ಟಿನಿಂದ ಮರ ತರಬೇಕಾದರೆ, ಕಬ್ಬಿಣ ಪಟ್ಟಿಗಳನ್ನು ತರಬೇಕಾದರೆ, ಅವುಗಳ ಬೆಲೆ ಒಂದು ಸಾವಿರ ರೂಪಾಯಿ ಆಗಿದೆ. ಹಿಂದಿನ ಕಾಲದಲ್ಲಿ ಇಷ್ಟು ಹಣ ಕೊಟ್ಟಿದ್ದರೆ ಒಂದು ಒಳ್ಳೆಯ ಮೋಟಾರು ಕಾರು ಸಿಕ್ಕುತ್ತಿತ್ತು. ಇವೊತ್ತಿನ ದಿವಸ ರೈತನು ಒಂದು ಜತೆ ಎತ್ತು ಕೊಂಡುಕೊಳ್ಳಲು ಯಾವುದಾದರೊಂದು ಸೊಸೈಟಿಯಿಂದ ಹಣಸಾಲಾ ತರಬೇಕಾಗುತ್ತದೆ. ಸಾಲ ತೆಗೆದುಕೊಳ್ಳದೆ ಅವನಿಗೆ ವಿಧಿಯಿಲ್ಲ, ಈ ರೀತಿ ರೈತನ ಮೇಲೆ ಸಾಲದ ಭಾರ ದಿನ ದಿನಕ್ಕೆ ಹೆಚ್ಚಾಗುತ್ತಾ ಇದೆ. ಇವೊತ್ತಿನ ದಿವಸ ರೈತನು ತೆಂಗಿನಚಿಪ್ಪು ಹಿಡಿದುಕೊಂಡು ತಿರುಪೆ ಬೇಡುವ ಪರಿಸ್ಥಿತಿ ಉಂಟಾಗಿದೆ. ಒಂದು ವರ್ಷಕ್ಕೆ ರೈತನಿಗೆ ಎಷ್ಟು ಉತ್ಪತ್ತಿ ಬರುತ್ತದೆ, ಯಾವ ತೊಂದರೆಯಿಲ್ಲದೆ ಒಂದು ವರ್ಷದವರೆಗೆ ತನ್ನ ಸಂಸಾರದ ಜೀವನ ಸಾಗಿಸತಕ್ಕಂಥ ಪರಿಸ್ಥಿತಿ ಇದೆಯೇ ಎಂಬುದನ್ನು ನಾವು ವಿಚಾರ ಮಾಡ ಬೇಕಾಗಿದೆ. ಈ ವಿಷಯವನ್ನು ಮುಖ್ಯವಾಗಿ ವಿರೋಧ ಪಕ್ಷದ ಸದಸ್ಯರಿಗೆ ಹೇಳುತ್ತಿದ್ದೇನೆ. ಈ ಬಗ್ಗೆ ನೀವೂ ಒಪ್ಪಿಕೊಂಡರೆ ಸರಕಾರವೂ ಸಹ ಒಪ್ಪಿಕೊಳ್ಳು ತ್ತದೆ. ಇಂದು ಇಂಥ ಪರಿಸ್ಥಿತಿ ಇದೆ. ನಾನ್ ಗೆಜೆಟೆಡ್ ಆಫೀಷಿಯಲ್ಸಗೆ ಕೊಟ್ಟಿರತಕ್ಕಂಥಾದಕ್ಕೆ ಪ್ರತಿಬಂಧಕವಾಗಿ ವಾದ ಮಾಡುತ್ತಿದ್ದೇನೆ ಎಂದು ಅಲ್ಲ, ರೈತನ ಮಟ್ಟ ಹೆಚ್ಚಿಸುವುದಕ್ಕೆ ಏನು ಮಾಡುತ್ತೀರಿ, ಹೇಗೆ ಮಾಡುತ್ತೀರಿ ಎಂದು ಕೇಳು ತ್ತೇನೆ. ಸಾರ್ವಜನಿಕರಿಗೆ ಏನಾದರೂ ಒಂದು ಸೌಲಭ್ಯ ವನ್ನು ಒದಗಿಸಿಕೊಟ್ಟಿದ್ದಾರೆಯೇ ? ರೈತರ ಪರಿಸ್ಥಿತಿ ಏನಾಗಿದೆ ಎಂದರೆ ಇಂದು ಮಾರ್ಚಿ 17ನೆಯ ತಾರೀಖಿನ ದಿನ ಕೊಡಬೇಕಾದ ಸಾಲ ವಾಪಸ್ ಕೊಡದೇ ಹೋದರೆ, ಅವನ ಮನೆ ಜಪ್ತಿ ಮಾಡಿ, ಮನೆಯಲ್ಲಿಯ ಸಾಮಾನುಗಳನ್ನು ದೋಚಿಕೊಂಡು ಹೋಗಲಾಗುವುದು. ಇದು ರೈತರಿಗೆ ಮಾಡಲಾಗುವ ಸಹಾಯವೇ ? ರೈತನು ಹೆಚ್ಚು ಬೆಳೆದಿಲ್ಲ ಎಂದು ಹೇಳುವುದು ಸರಿಯಲ್ಲ. ರೈತನು ಹೆಚ್ಚು ಬೆಳೆಯು ತ್ತಿದ್ದರೂ ಸಹ ಅವನಿಗೆ ಸರಕಾರದಿಂದ ದೊರೆಯ ಬೇಕಾದ ಯಾವ ಸೌಲಭ್ಯಗಳೂ ಸಿಕ್ಕುವುದಿಲ್ಲ. ಇದನ್ನು ಹೇಳುವ ಕಾಲದಲ್ಲಿ ನಮ್ಮ ಮನಸ್ಸು ಬಹಳ ನೋಯುತ್ತಿದೆ. ಉಳುಮೆ ಮಾಡಲು ಕುಳ ಸಿಕ್ಕುವ ದಿಲ್ಲ, ಮನೆ ಕಟ್ಟಲು ಕಂಬಿ ಸಿಕ್ಕುವುದಿಲ್ಲ, ವ್ಯವಸಾಯಕ್ಕೆ ಯಾವುದಾದರೊಂದು ಸೌಲಭ್ಯ ಬೇಕಾದರೆ ಇನ್ನೊಬ್ಬರ ಸಹಾಯ ಪಡೆದು ದೊರಕಿಸಿ ಕೊಳ್ಳಬೇಕಾಗುತ್ತದೆ. ಇನ್ನೊಬ್ಬರ ಸಹಾಯವಿಲ್ಲದೆ ಸಿಕ್ಕುವದಿಲ್ಲ. ಈ ಬಗ್ಗೆ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಹೇಳಿರುವದನ್ನು ಓದಿ ತೋರಿಸುತ್ತೇನೆ.

"ಇದು ನಮ್ಮ ಸಾಧನ ಸಂಪತ್ತುಗಳ ಮೇಲೆ ಭಾರಿ ಹೊರೆಯನ್ನು ಹೊರಿಸುವುದಾಗಿದೆಯೆಂಬುದ ರಲ್ಲಿ ಯಾವ ಸಂಶಯವೂ ಇಲ್ಲ. ನಾವು ಲಾಭದಾಯಕ ವಲ್ಲದ ಕಾಮಗಾರಿಗಳ ಮೇಲೆ ಹೆಚ್ಚು ಹಣವನ್ನು ವಿನಿಯೋಗಿಸಿದ್ದೇವೆ. ಅದರಿಂದ ಪರೋಕ್ಷವಾದ ಫಲಗಳು ಮಾತ್ರ ಬರುತ್ತಿವೆ. ಲಾಭದಾಯಕವಾದ ಕಾಮಗಾರಿಗಳಿಂದ ಪ್ರತಿಫಲಗಳು ಬರಲು ಇನ್ನೂ ಸಾಕಾದಷ್ಟು ದೀರ್ಘಕಾಲ ಬೇಕು. ಆದಕಾರಣ, ಭಾರತ ಸರಕಾರದವರು ಸದ್ಯಕ್ಕಿರುವ ಎಲ್ಲ ಸಾಲಗಳ ಮರು ಪಾವತಿಗಳ ಷರತ್ತುಗಳನ್ನು ಸಡಲಿಸಿ ಸಲೀಸು ಗೊಳಿಸುವ ವಿಷಯವನ್ನು ಪುನಃ ಪರಿಶೀಲಿಸುವ ರೆಂದು" ಆಶಿಸುತ್ತೇವೆ ನಮ್ಮ ಸಾಧನ ಸಂಪತ್ತನ್ನು ಬೆಳೆಯಿಸಿಕೊಳ್ಳತಕ್ಕಂಥ ಹಂಗಾಮಿ ಯೋಜನೆ ಇದಾಗಿವೆ. ಈಗ ದೊರೆತಷ್ಟು ಜೋಬಿಗೆ ಹಾಕಿ ಕೊಂಡು ಖರ್ಚು ಮಾಡಿದರೆ ಒಳ್ಳೆಯದು. ಜಾಗ್ರತೆ ಖರ್ಚು ಮಾಡಬೇಕು ಎಂಬ ಪರಿಸ್ಥಿತಿಯಿದೆ. ಆದರೂ ಸಹ ಖರ್ಚು ಮಾಡ ತಕ್ಕಂಥ ಹಣವನ್ನು ಸೂಕ್ಷ್ಮವಾಗಿ ವಿಚಾರಮಾಡಿ, ದೇಶದಲ್ಲಿ ಖರ್ಚು ಮಾಡಿದ ಹಣಕ್ಕೆ ಯೋಗ್ಯ ಪ್ರತಿಫಲ ಬಾರದೇ ಹೋದರೆ ಅಂಥ ಹಣ ನಿರರ್ಥಕವಾಗುತ್ತದೆ. ಆದುದರಿಂದ ಈ ಬಗ್ಗೆ ಸರಿ ಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸೂಚಿಸ ಬಯಸುತ್ತೇನೆ.

ಇನ್ನು ವಿದ್ಯಾ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಡಿ.ಪಿ.ಐ. ಅವರಿಗೆ ಹಳ್ಳಿಗಳಿಗೆ ತಾಲ್ಲೂಕ ಹೆಡ್‌ಕ್ವಾರ್ಟರುಗಳಿಗೆ ಹೋಗಿ ನೋಡಲು ಸಮಯ ದೊರೆಯುವುದಿಲ್ಲ. ದೇಶದಲ್ಲಿ ವಿದ್ಯಮಾನಗಳು ಏನು ನಡೆಯುತ್ತಾ ಇವೆ ಎಂಬು ದನ್ನು ನಿರೀಕ್ಷಿಸ ತಕ್ಕದ್ದು ಡೈರೆಕ್ಟರ್ ಕರ್ತವ್ಯವಾಗಿ ರುವುದಿಲ್ಲವೇ ! ವಿದ್ಯಾ ಸೌಲಭ್ಯಗಳ ಕಾರ್ಯ ಹೇಗೆ ಕಾರ್ಯಗತವಾಗುತ್ತಿದೆ. ಎನ್ನುವುದನ್ನು ನೋಡು ವುದಕ್ಕೆ ಅವರಿಗೆ ಕಾಲ ಸಿಕ್ಕದೇ ಹೋದರೆ ನಾವು ಏನು ಮಾಡಬೇಕು ? ಇನ್‌ಸ್ಪೆಕ್ಟರರು ಬಂದು ನೋಡುತ್ತಾರೆ. ಆದರೆ ಅವರಿಗೆ ಸರಿಪಡಿಸುವ ಸಾಮರ್ಥ್ಯವಿಲ್ಲ. ಇನ್‌ಸ್ಪೆಕ್ಟರ ಮೇಲೆ ಮಾಡಬಾರ ತಂಥಾ ಆರೋಪ ಮಾಡಿ ತಂತೀಕೊಟ್ಟರೂ ಸಹ ಏನೂ ಮಾಡುತ್ತಿಲ್ಲ. ಸತ್ಯಾಂಶವನ್ನು ಕಂಡು ಹಿಡಿದು ಯಾರು ತಪ್ಪು ಮಾಡಿರುತ್ತಾರೆಯೋ ಅವರಿಗೆ ಶಿಕ್ಷೆ ವಿಧಿಸುವುದು ನ್ಯಾಯ, ಉಪಾಧ್ಯಾಯರ ತಪ್ಪು ಇದ್ದರೆ ಅವರನ್ನು ದಂಡಿಸಬಹುದು. ನೇರವಾಗಿ ಮೇಲಿನ ಅಧಿಕಾರಿಗಳಿಗೆ ತಿಳಿಸಿದರೂ ಸಹ ಏನೂ ಉಪಯೋಗವಾಗುತ್ತಿಲ್ಲ, ಇದರಿಂದ ಏನಾಗಿದೆ ಎಂದರೆ ವಿದ್ಯಾಭ್ಯಾಸದ ಮಟ್ಟವು ದಿನೇ ದಿನೇ ಕೆಡುತ್ತಾ ಹೋಗುತ್ತಿದೆ. ಹೆಚ್ಚಾಗಿ ಕಮಿಟಿಗಳು ನೇಮಕ ವಾಗಿರುವುದರಿಂದ ಅವರಿಗೆ ಯಾವಾಗಲೂ ಕಮಿಟಿಗಳ ಕೆಲಸವೇ ಇರುತ್ತದೆ. ಯಾವಾಗಲೂ ಕಮಿ ಟಿಯ ಕೆಲಸವಿದೆ ಎಂದು ಹೇಳುತ್ತಾರೆ. ಡಿ.ಪಿ.ಐ. ಡಿ.ಡಿ.ಪಿ.ಐ. ಇವರಿಗೆ ಕಮಿಟಿಗಳನ್ನು ಬಿಟ್ಟರೆ ಬೇರೆ, ಕೆಲಸವೇ ಇಲ್ಲ, ನಾವು ಡಿ.ಓ.ಇ. ರವರಿಗೆ ಬರೆದರೂ ಏನೂ ವಿಚಾರಣೆಯಾಗುತ್ತಿಲ್ಲ. ಜನರು ಬರೆದಂಥ ಕಾಗದಗಳು ಯಾವಾಗ ಅವರ ಕೈಗೆ ಬರುತ್ತವೆಯೋ ಯಾವಾಗ ಕೆಲಸಗಳು ನಡೆಯುತ್ತವೆಯೋ ತಿಳಿಯದ ಹಾಗೆ ಆಗಿದೆ.

5-30 P.M.

ಡಿ.ಡಿ.ಪಿ.ಐ. ಆಫೀಸನ್ನು ನೋಡಿದ್ದೇನೆ. ಕೇಸ್ ವರ್ಕರ್‌ಗೆ ಒಂದು ಪೇಪರ್ ಹೋದರೆ ಅದನ್ನು understand ಮಾಡಿಕೊಳ್ಳತಕ್ಕ ಸಾಮರ್ಥ್ಯ ಇಲ್ಲ. ಇವೊತ್ತಿನ ದಿವಸ ಸೆಕ್ರೆಟೇರಿಯಟ್‌ನಲ್ಲೇ ಆಗಲೀ ಏನಾಗಿದೆ ಎಂದರೆ ಸೌಲಭ್ಯವನ್ನು ಒದಗಿಸತಕ್ಕ ಯೋಚನೆಗಿಂತಲೂ ಅದಕ್ಕೆ ವ್ಯತಿರಿಕ್ತವಾದ ವಿಷಯ ವನ್ನು ಕಲ್ಪನೆ ಮಾಡಿಕೊಂಡು ಪೇಪರನ್ನು ಹಿಂದಕ್ಕೆ ಕಳುಹಿಸುವುದು ಹೇಗೆ ಎನ್ನುವದೇ ಭಾವನೆ.

ಶ್ರೀ ಟಿ. ಮರಿಯಪ್ಪ.—ಅದು ಬುದ್ಧಿವಂತಿಕೆ!

ಶ್ರೀ ಟಿ. ಎನ್. ಮುಡಲಗಿರಿಗೌಡ.—ನಿಜ. ಅದು ಪ್ರಜಾ ಪ್ರಭುತ್ವದಲ್ಲಿ ಇರಬೇಕಾದ ಬುದ್ಧಿವಂತಿಕೆ. ಹಿಂದೆ ಇದ್ದಂಥಾ ಸರ್ಕಾರದಲ್ಲಿ ಅದನ್ನು ಹೊಗಳಬೇಕೆಂದು ಅಲ್ಲ—ಕಡವೆ ಜನರು ಇದ್ದರು. ಅಗ ಏನಾಗುತ್ತಿತ್ತು ಎಂದರೆ, ಬಂದು ಎಲ್ಲಾದರೂ ಕುತ್ತಿಗೆ ಹಿಡಿದುಕೊಂಡಾರು ಎಂಬ ಭಯ ಇತ್ತು. ನಮ್ಮ ಪೇಪರ್ ಎಲ್ಲಿಗೆ ಬಂತು ಎಂದು ನನ್ನಂಥ ಈ ಸಭೆಯ ಸದಸ್ಯನಿಗೇ ಹುಡುಕಿಕೊಡುವುದು ಒಂದು ದೊಡ್ಡ ಕೆಲಸ. ಯಾವುದು ಪೇಪರ್, ನಂಬರ್ ತಂದಿದ್ದೀರಾ ಎಂದು ಪ್ರಶ್ನೆ ಕೇಳುತ್ತಾರೆ. ಸರಿಯಾದ ನಂಬರ್ ಕೊಟ್ಟಿದ್ದರೂ ಕೂಡ ಅದು ಅಲ್ಲರೀ ಎಂದು ಹೇಳುತ್ತಾರೆ. ಇರಲಿ. ಅಂತೂ ವಿದ್ಯಾಭ್ಯಾಸ ಇಲಾಖೆಯನ್ನು ಬಹಳ ಬಹಳ ಇಂಪ್ರೂವ್ ಮಾಡಬೇಕಾಗಿದೆ.

ಹೈಸ್ಕೂಲು ವಿಷಯವನ್ನು ತೆಗೆದುಕೊಳ್ಳಿ. ಶ್ರೀಮಾನ್ ಮಲ್ಲಾರಾಧ್ಯರಿಗೆ ಎಲ್ಲ ವಿಷಯವೂ ಗೊತ್ತಿದೆ. ಅವರು ಆ ಇಲಾಖೆಯಲ್ಲಿ ಇದ್ದವರು. ಅವರಲ್ಲಿ ನನಗೆ ಸಂಪೂರ್ಣ ಗೌರವವಿದೆ. 13 ಕೋಟಿ ರೂಪಾಯಿ ಖರ್ಚು ಮಾಡುತ್ತಾ ಇದ್ದೇವೆ. ಪ್ರೈಮರಿ ವಿದ್ಯಾಭ್ಯಾಸದಿಂದ ಕಾಲೇಜು ವಿದ್ಯಾಭ್ಯಾಸದವರೆಗೂ ಇವೊತ್ತಿನ ಪರಿಸ್ಥಿತಿ ಅಧೋಗತಿಗೆ ಹೋಗುತ್ತಾ ಇದೆ. ಸರ್ಕಾರ ಇದನ್ನು ತೀವ್ರವಾಗಿ ಆಲೋಚನೆ ಮಾಡುತ್ತಾ ಇದೆಯೇ? ಯಾವ ರೀತಿ ಅಭಿವೃದ್ಧಿ ಪಡಿಸಬೇಕು, ಎಲ್ಲಿ ಲೋಪದೋಷವಿದೆ ಎಂಬುದನ್ನು ತಿಳಿದು ಕೊಂಡಿದ್ದಾರೆಯೇ ಎಂಬುದನ್ನು ಅವರ ಗಮನಕ್ಕೆ ತರುತ್ತಾ ಇದ್ದೇನೆ. ಅಷ್ಟೆ. ಶ್ರೀ ಮಲ್ಲಾರಾಧ್ಯರು ಸ್ಥಳೀಯ ಸಂಸ್ಥೆಗಳಲ್ಲಿರತಕ್ಕ ಹೈಸ್ಕೂಲುಗಳನ್ನು ಮೊದಲು ಸರ್ಕಾರಕ್ಕೆ ತೆಗೆದುಕೊಳ್ಳಿ ಎಂದು ಹೇಳಿದರು. ಜಿಲ್ಲಾ ಬೋರ್ಡು ಹೈಸ್ಕೂಲುಗಳು ಎಂದರೆ ಅವಕ್ಕೆ 4 ಜನ ಯಜಮಾನರುಗಳು, ಒಬ್ಬರು ಊರಿನ ಕಮಿಟಿಯವರು, ಡಿ.ಸಿ. ಅವರು, ಡಿ.ಪಿ.ಐ. ಅವರು ಆ ಮೇಲೆ ಸರ್ಕಾರ. ಹೀಗೆ ಯಾರನ್ನು ಕೇಳಬೇಕು? ಏನು ಮಾಡಬೇಕು? ಒಬ್ಬ ಮೇಷ್ಟರು 6 ತಿಂಗಳು ಇರುವುದಿಲ್ಲ. ಕಳುಹಿಸುವವರು ಯಾರು ಎಂಬುದು ಗೊತ್ತಿಲ್ಲ. ಇದಕ್ಕೆ ರೂಲ್ಸ್ ಬೇರೆ. ಅದು ಡಿ.ಸಿ. ಅವರಿಗೂ ಅರ್ಥವಾಗಿಲ್ಲ. ಡಿ.ಪಿ.ಐ. ಅವರಿಗೂ ಅರ್ಥವಾಗಿಲ್ಲ. ಅವರು ಒಂದು ಬರೆದರೆ ಇವರು ಒಂದು ಬರೆಯುತ್ತಾರೆ. ಹೀಗೆ ದುಡ್ಡು ಖರ್ಚು ಆಗುತ್ತಾ ಇದೆ. ಹೀಗಾದರೆ ವಿದ್ಯಾರ್ಥಿಗಳ ಪರಿಸ್ಥಿತಿ ಏನು ಎಂಬುದನ್ನು ಯಾರು ನೋಡತಕ್ಕವರು. ಈ ವರ್ಷದ ವಿದ್ಯಾಭ್ಯಾಸಕ್ಕೆ ತೊಂದರೆಯಾದರೆ ಅವನ ಜೀವನ ಹಾಳಾಗುವುದಿಲ್ಲವೇ?

ಕಾಲೇಜಿನ ವಿಷಯವನ್ನು ತೆಗೆದುಕೊಂಡರೆ ಅದು ಅಟಾನಮಸ್ ಬಾಡಿ, ಒಪ್ಪಿಕೊಳ್ಳುತ್ತೇನೆ, ನಾವೇ ಮಾಡಿದ್ದು. ಸ್ವಾಮಿ, ಮುಂದಿನ ವರ್ಷ ತುಮಕೂರು ಕಾಲೇಜಿನಲ್ಲಿ ಸೀಟು ಕೊಡುವುದಿಲ್ಲ ಎಂದರೆ, ಜಾಗ ಇಲ್ಲ ಎಂದರೆ, ಸರ್ಕಾರದ ಪರಿಸ್ಥಿತಿ ಇಕ್ಕಟ್ಟಿಗೆ ಬರುತ್ತದೆ ಎಂದು ಇವೊತ್ತಿನ ದಿವಸ ಸೂಚನೆ ಕೊಡುತ್ತೇನೆ ಏಕೆಂದರೆ 600 ಜನ ವಿದ್ಯಾರ್ಥಿಗಳು ಇರಬೇಕಾದ ಕಡೆ 1,700 ಜನ ಇದ್ದಾರೆ. 400 ಜನ ಹೆಣ್ಣು ಮಕ್ಕಳು ಇದ್ದಾರೆ. ಊರಿನ ಮಧ್ಯದಲ್ಲಿ compact ಆಗಿರತಕ್ಕ ಒಂದು ಕೋಣೆಯಲ್ಲಿ ಕೂಡಿ ಹಾಕಿದ ಹಾಗೆ ಕೂಡಿಹಾಕಿ ಗೇಟಿನಲ್ಲಿ ಬರುವಾಗ ಒಬ್ಬರನ್ನೊಬ್ಬರು ತಳ್ಳಿಕೊಂಡು ಬರಬೇಕಾದ ಪರಿಸ್ಥಿತಿ ಇದೆ. ಕಾಲೇಜು ನಡೆಸುವುದಕ್ಕೆ ಇದು ಲಾಯಕ್ಕಾಗಿದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕಾದದ್ದು ವಿಶ್ವವಿದ್ಯಾನಿಲಯದ ಕರ್ತವ್ಯ. ಇಷ್ಟು ignore ಮಾಡುವುದು ಅವರಿಗೆ ಗೌರವವಲ್ಲ. ಕೆಟ್ಟ ಪರಿಣಾಮವಾಗುತ್ತದೆ ಎಂಬುದನ್ನು ಅವರು ಒಪ್ಪಿಕೊಳ್ಳಬೇಕು. ಆದುದರಿಂದ ವಿದ್ಯಾಭ್ಯಾಸದ ವಿಷಯದಲ್ಲಿ ಶ್ರೀ ಮರಿಯಪ್ಪನವರಿಗೆ ಹೇಳುತ್ತೇನೆ, ಅವರ ಜೀವಮಾನದಲ್ಲಿ ಮಾಡದೇ ಇರತಕ್ಕ ಒಂದು ತಪ್ಪನ್ನು ಅವರು ಮಾಡಿದ್ದಾರೆ. ಅದೇನೆಂದರೆ ಶ್ರೀ ಕೆ. ಹನುಮಂತಯ್ಯನವರು ಒಂದು ಯೋಜನೆಯನ್ನು ತಂದರು. ಅದು ಸರಿಯೋ, ತಪ್ಪೋ, ಅದೇನಾದರೂ ಆಗಲೀ, ಇವೊತ್ತಿನ ದಿವಸ ಆ ಯೋಜನೆಯನ್ನು ಇಟ್ಟುಕೊಂಡಿದ್ದರೆ ಎಷ್ಟು ಮಟ್ಟಿಗೆ ಪ್ರತಿಫಲ ದೊರೆಯುತ್ತಿತ್ತು ಎಂಬುದನ್ನು ಮನಗಾಣಬಹುದಾಗಿತ್ತು. ಸ್ಕೂಲುಗಳಿಗೆ ಭೂದಾನ ತೆಗೆದುಕೊಂಡರು. ಪ್ರಾರಂಭದಲ್ಲೇ ಕಂದಾಯ ಕೊಡುವವರು ಯಾರು, ಗೊಬ್ಬರ ಹಾಕುವವರು ಯಾರು, ಎಂದು, ಮದುವೆ ಆಗುವುದಕ್ಕೆ ಮುಂಚೆಯೇ ಮನೆ ಕಟ್ಟಿದ್ದೀರಾ, ಎಲ್ಲಿ ಕಟ್ಟಿದ್ದೀರಿ ಎಂದು ಕೇಳುವಂತೆ ಆಯಿತು. ಆ ಯೋಜನೆ ಪ್ರಕಾರ ಇವೊತ್ತಿನ ದಿವಸ ಕೆಲಸ ಮಾಡಿಕೊಂಡು ಬಂದಿದ್ದರೆ ಮಕ್ಕಳ ಮನಸ್ಸಿನ ಬೆಳವಣಿಗೆ ಎಷ್ಟೋ ಚೆನ್ನಾಗಿ ಆಗುತ್ತಾ ಇತ್ತು. ಇಂಡಿಯಾ ಸರ್ಕಾರದವರು ಎಷ್ಟೋ ಯೋಜನೆಗಳನ್ನು ತಂದಿದ್ದಾರೆ. ಮನಸ್ಸು ಇಲ್ಲದೆ ಇದ್ದರೂ ಆ ಯೋಜನೆಗಳನ್ನು ನಮ್ಮ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆದುದರಿಂದ ಖರ್ಚು ಮಾಡತಕ್ಕ ಹಣಕ್ಕೆ ಪ್ರತಿಫಲ ಇದೆಯೋ ಹೇಗೆ ವ್ಯವಸ್ಥೆ ಮಾಡಬೇಕು ಎಂಬುದನ್ನು ತಾವು ಕುಳಿತು ತೀವ್ರವಾಗಿ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಲೂ ಕೂಡ ಸ್ಕೂಲುಗಳಿಗೆ ಈ ಭೂದಾನದ ಯೋಜನೆಯನ್ನು ಮುಂದುವರಿಸಿದರೆ ವಿದ್ಯಾಭ್ಯಾಸದಲ್ಲಿ ಹುರುಪು ಇರುತ್ತದೆ. ಒಂದು ಗಂಟೆ ಕಾಲ ಆ ಜಮೀನಿಗೆ ಹುಡುಗರನ್ನು ಕರೆದು ಕೊಂಡು ಹೋಗಿ ಕೆಲಸ ಮಾಡಲಿ. 5 ರೂಪಾಯಿ ಬರಲಿ, 10 ರೂಪಾಯಿ ಬರಲಿ ಉತ್ಪನ್ನ ಮುಖ್ಯವಲ್ಲ. ಅದರ ಮೇಲೆ mind apply ಮಾಡತಕ್ಕ ಯೋಜನೆ ಯೇನಿದೆ ಅದೇ ಇವೊತ್ತಿನ ದಿವಸ ನೀವು ಹೇಳತಕ್ಕ ಬೇಸಿಕ್ ಎಜ್ಯುಕೇಷನ್, ಮಲ್ಟಿಪರ್‌ಪಸ್ ಹೈಸ್ಕೂಲ ನಲ್ಲಿ ನೀವು ಕಲಿಸುವುದು ಅದೇ. ಆದುದರಿಂದ ಆ ಯೋಜನೆಯನ್ನು ಏಕದಂ ನಿಲ್ಲಿಸಿದ್ದು ಸರಿಯಲ್ಲ. ಅದನ್ನು ತಾವು ಪುನಃ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಫ್ರೀ ಎಜ್ಯುಕೇಷನ್ ಕೊಡುವುದಕ್ಕೆ ನನ್ನ ಅಭ್ಯಂತರ ವಿಲ್ಲ. ಆದರೆ ಅಟೆಂಡೆನ್ಸ್‌ಗೋಸ್ಕರ ಸ್ಕೂಲಿಗೆ ಮಗನನ್ನು ಕಳುಹಿಸಿ ಟ್ಯೂಷನ್ ಹೇಳಿಸಿ ಪಾಸ್ ಮಾಡತಕ್ಕ ಪರಿಸ್ಥಿತಿ ಬಂದರೆ ಪ್ರಯೋಜನವಿಲ್ಲ. ಸ್ಕೂಲಿಗೆ ಕಳುಹಿಸಿದಮೇಲೆ ಟ್ಯೂಟರ್ ಇಟ್ಟುಕೊಂಡು ವಿದ್ಯಾಭ್ಯಾಸ ಮಾಡಿಸಬೇಕು ಎಂದರೆ ಅದು ಸರಿ ಇಲ್ಲ. ಮದ್ರಾಸ್ ಸರ್ಕಾರದಲ್ಲಿ ಪ್ರೈಮರಿ ವಿದ್ಯಾಭ್ಯಾಸ, ಸೆಕೆಂಡರಿ ವಿದ್ಯಾಭ್ಯಾಸ, ಮತ್ತು ಕಾಲೇಜು ವಿದ್ಯಾಭ್ಯಾಸ ಎಫಿಷಿಯೆಂಟ್ ಆಗುವುದಕ್ಕೆ ಕಾರಣವೇನು? ಇದನ್ನು ಯೋಚನೆಮಾಡಬೇಕು ಎಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇಂಡಸ್ಟ್ರೀಸ್ ವಿಷಯದಲ್ಲಿ ಈಗಾಗಲೇ ಸ್ವಲ್ಪ ಪ್ರಸ್ತಾಪಮಾಡಿದ್ದೇನೆ. ನಾನು ಶ್ರೀ ಮರಿಯಪ್ಪನವರಿಗೆ ಹೇಳುವುದು ಇಷ್ಟೇ, ವಿಶೇಷವಾದ ಹಣವನ್ನು ನಮ್ಮ ಸ್ಟೇಟ್ ರೆವಿನ್ಯೂನಿಂದ ಹಾಕಿ ಇಂಡಸ್ಟ್ರಿಯನ್ನು ಡೆವಲಪ್ ಮಾಡಿದ್ದೀರಾ; ದೇಶವನ್ನು ಕಟ್ಟತಕ್ಕ ಹಣವನ್ನು ತೆಗೆದುಕೊಂಡು ಹೋಗಿ ಇಂಡಸ್ಟ್ರೀಸ್‌ಗೆ ಹಾಕಿ ಇಂಡಸ್ಟ್ರಿಯನ್ನು ಬೆಳೆಸಿದ್ದೀರಿ, ಹೀಗೆ ನಮ್ಮ ದೇಶದ ಹಣವನ್ನೆಲ್ಲಾ ಹಾಕಿ ಇಂಡಸ್ಟ್ರಿಯನ್ನು ಬಿಟ್ಟ

ಅಪ್ ಮಾಡಿರುವಾಗ ತುಮಕೂರು ಡಿವಿಜನ್ ಎಗ್ಸಿಕ್ಯುಟೀವ್ ಇಂಜಿನಿಯರ ಆಫೀಸಿನಲ್ಲಿ ಒಂದು ಮೂಟೆ ಸಿಮೆಂಟ್‌ಬೇಕೆಂದರೆ ಇಲ್ಲ. ಜನವರಿ, ಫೆಬ್ರವರಿ ತಿಂಗಳು ಬಂತು. ಕೊಟ್ಟಿರತಕ್ಕ ಹಣವನ್ನು ಖರ್ಚುಮಾಡಬೇಕು, ಪ್ರೋಗ್ರೆಸ್ ಕೊಡಬೇಕು ಎಂದು ಒತ್ತಾಯ ಮಾಡಿದರೆ ನಾಲ್ಕು ಮೂಟೆ ಸಿಮೆಂಟ್ ಹಾಕುವ ಕಡೆ ಒಂದು ಮೂಟೆ ಸಿಮೆಂಟ್ ಕೊಟ್ಟರೆ ಏನು ಪ್ರೋಗ್ರೆಸ್ ಇರುತ್ತದೆ? ಒಂದು ಡಿಪಾರ್ಟ್‌ಮೆಂಟಿಗೆ ಒಂದು ಮೂಟೆ ಸಿಮೆಂಟ್ ಎಂದರೆ ಇಲ್ಲ. ಒಬ್ಬ ರೈತನಿಗೆ ವ್ಯವಸಾಯಕ್ಕೆ ಬೇಕಾದ ಕೆಲಸವನ್ನು ಮಾಡುವುದಕ್ಕೆ ಒಂದು ಮೂಟೆ ಸಿಮೆಂಟ್ ಸಿಕ್ಕದೆ ಹೋದರೆ ಇಷ್ಟೊಂದು ಹಣವನ್ನು ಇಂಡಸ್ಟ್ರಿಗೆ ಹಾಕಿ ಏನು ಪ್ರಯೋಜನ? ಆದುದರಿಂದ ನಮ್ಮ ಸ್ಟೇಟಿಗೆ ಪ್ರಯಾರಿಟಿ ಬರಬೇಕು. ಕಬ್ಬಿಣದ ವಿಷಯದಲ್ಲಿ ಹೇಳುವುದಾದರೆ, ಕಂಟ್ರೋಲರು ಸೂರ್ಯಚಂದ್ರರಲ್ಲ, ಅಲ್ಲಿ ಬಿಗಿಯಾಗಿ ಕುಳಿತುಕೊಂಡು ಡಿಮ್ಯಾಂಡ್ ಇಷ್ಟಿದೆ ಇಷ್ಟು ಕೊಡಬೇಕು ಎಂದು ಹೇಳಬೇಕು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಡಿಸ್ಟ್ರಿಕ್ಟ್ ಬ್ಯಾಂಕುಗಳಿವೆ. ಸೆಂಟ್ರಲ್ ಬ್ಯಾಂಕಿಗೂ ಮತ್ತು ಈ ಡಿಸ್ಟ್ರಿಕ್ಟ್ ಬ್ಯಾಂಕುಗಳಿಗೂ ವಿಶೇಷ ಹಣವನ್ನು ಕೊಟ್ಟಿದ್ದೀರಿ. ಡಿಸ್ಟ್ರಿಕ್ಟ್ ಬ್ಯಾಂಕುಗಳಿಗೆ ಈ ಪರ್ಮಿಟ್ಟುಗಳನ್ನು ಕೊಡಿ. ಒಂದು ಜಿಲ್ಲೆಯಲ್ಲಿ ಡೀಲ್‌ಮಾಡುವುದಕ್ಕೆ ಯಾವುದಕ್ಕೆ ಯೋಗ್ಯತೆ ಇದೆಯೋ ಆ ಸೊಸೈಟಿಗಳಿಗೆ ಅವು ಹಂಚಿಕೊಡಲಿ. ತಪ್ಪು ಇರುವುದನ್ನು ಸರಿಪಡಿಸಿ ಸರಿಯಾದ ರೀತಿಗೆ ತರಬೇಕಾದರೆ ಕಂಟ್ರೋಲರು ಈಗ ಕಲ್ಕತ್ತದಲ್ಲಿರುವುದರಿಂದ ಕಷ್ಟವಾಗುತ್ತದೆ. ನಮಗೆ ಬೇಕಾದ ಸೌಲಭ್ಯ ಹೇಗೆಬೇಕೋ ಹಾಗೆ ನೀವು ಕ್ರಿಯೇಟ್‌ಮಾಡಿ ರೈತನಿಗೆ ಬೆಳೆದುಕೊಡಿ ಎಂದರೂ ಬೆಳೆಯಲಿಲ್ಲ. ಗ್ರೋಮೋರ್‌ಫುಡ್ ಆಗಲಿಲ್ಲ ಎಂದರೆ ಹೇಗೆ? ಅವನಿಗೆ ಕೊಡಬೇಕಾದ ಎಲ್ಲಾ ಸೌಲಭ್ಯಗಳನ್ನೂ ಒದಗಿಸಿಕೊಟ್ಟು ಅವನ ಮೇಲೆ ಭಾರ ಹಾಕಿದರೆ ಆಗ ಸರಿ. ವರ್ತಕರು ಆಹಾರವನ್ನು ಸ್ಟೋರ್‌ಮಾಡಿ ಫುಡ್ ಪ್ರೈಸಸ್ ಹೆಚ್ಚಾಗಿದೆ ಎನ್ನುತ್ತಾರೆ. ಅದು ಹೇಗೆ ಎನ್ನುವ ನಿಜಾಂಶವನ್ನು ಕಂಡುಹಿಡಿಯುವುದಕ್ಕೆ ಹೋಗದೆ ಇದ್ದರೂ ಕೂಡ ಅದು ವರ್ತಕನಿಂದಾಗಲೀ ರೈತನಿಂದಾಗಲೀ ಆಗಿಲ್ಲ. ಧಾರಣೆ ತಾನಾಗಿಯೇ ಹೆಚ್ಚಾಗುತ್ತಿದೆ. ಶ್ರೀ ಮಲ್ಲಾರಾಧ್ಯರು ಹೇಳಿದಂತೆ ಇವೊತ್ತಿನ ದಿವಸ ಒಂದು ಟನ್ ಕಬ್ಬಿಣಕ್ಕೆ 250 ರೂಪಾಯಿ ಇದ್ದದ್ದು 650 ರೂಪಾಯಿ ಆಗಿದೆ. ಅದನ್ನು ಜಾಸ್ತಿಮಾಡಿರುವವರು ಯಾರು? ನಮ್ಮಲ್ಲಿರತಕ್ಕ ಓರನ್ನು ಜಪಾನ್ ದೇಶದವರು ತರಿಸಿಕೊಂಡು ಕಡಮೆ ಧಾರಣೆಯಲ್ಲಿ ಸ್ಟೀಲ್‌ಮಾಡುತ್ತಾರೆ ಎಂದು ತಿಳಿದಿದ್ದೇನೆ. ನಮ್ಮ ಓರನ್ನು ತೆಗೆದುಕೊಂಡು ನಮ್ಮ ಐರನ್ ಫ್ಯಾಕ್ಟರಿಯಲ್ಲಿ ಒಂದು ಟನ್ ಕಬ್ಬಿಣಕ್ಕೆ 250 ರೂಪಾಯಿ ಇದ್ದದ್ದನ್ನು 650 ರೂಪಾಯಿ ಮಾಡಿದ್ದೀರಿ. ಫುಡ್‌ಪ್ರೈಸಸ್ ಜಾಸ್ತಿಯಾಗುತ್ತದೆ ಎಂದು ಹೇಳಿದರೆ ಅದರಲ್ಲಿ ಅರ್ಥವಿದೆಯೆ? ಬೆಲೆ 4 ಆಣೆ ಇರುವಕಡೆ 4 ರೂಪಾಯಿ ಆಗಿದೆ.

ಶ್ರೀ ಟಿ. ಮರಿಯಪ್ಪ.—ಶ್ರೀ ಎಂ. ಸಿ. ನರಸಿಂಹನ್ ಅವರು ಇಂಡೆಕ್ಸ್ ನೋಡುವಾಗ ಫುಡ್‌ಕ್ರಾಪ್ಸ್ ಪರ್ಸೆಂಟೇಜ್ ಜಾಸ್ತಿಯಿದೆ; ಇಂಡಸ್ಟ್ರಿಯಲ್ ಪ್ರಾಡಕ್ಟ್ಸ್ ಪರ್ಸೆಂಟೇಜ್ ಕಡಮೆ ಇದೆ ಎಂದು ಹೇಳಿದರು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಫುಡ್ ಪ್ರೈಸಸ್ ಪರ್ಸೆಂಟೇಜ್ ಜಾಸ್ತಿ ಇದೆ ಎನ್ನುವುದು ಅರ್ಥವಿಲ್ಲದ ಮಾತು ಎಂದು ನಾನು ಹೇಳುತ್ತಿದ್ದೇನೆ. ಅನಿವಾರ್ಯವಾಗಿ ಸ್ಕೇರ್ಸಿಟಿಯನ್ನು ಕ್ರಿಯೇಟ್ ಮಾಡಿದ ಸಂದರ್ಭದಲ್ಲಿ ಜಾಸ್ತಿಯಿದೆ ಎನ್ನತಕ್ಕದ್ದು ಸರಿ. ಸಾಮಾನ್ಯವಾದ ಕಾಲದಲ್ಲಿ ಸ್ಕೇರ್ಸಿಟಿ ಇಲ್ಲದೆ ಇರತಕ್ಕ ಕಾಲದಲ್ಲಿ ಫುಡ ಗ್ರೈನ್ಸ್ ಪ್ರೈಸಸ್ ಜಾಸ್ತಿ ಇವೆ, ಬೇರೆ ಪ್ರೈಸಸ್ ಕಡಮೆಯಿದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ ಎಂದು ಖಂಡಿತವಾಗಿಯೂ ಹೇಳುತ್ತೇನೆ.

ಇನ್ನು ಮೆಡಿಸನ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇದು ನನ್ನ ಮನಸ್ಸಿಗೆ ಬಹಳ ನೋವು ಆದಂಥ ವಿಷಯ. ಅದಕ್ಕೋಸ್ಕರ ನಾನು ಅದನ್ನು ಹೇಳುತ್ತೇನೆ. ಹಳೆಯ ಮೈಸೂರು ಪ್ರದೇಶದಲ್ಲಿ ಸಾಕಾದಷ್ಟು ಆಸ್ಪತ್ರೆಗಳನ್ನು ತೆಗೆದಿದ್ದಾರೆ. ಆದರೆ ಸ್ಯಾಂಕ್ಷನ್ ಆದ ಕೆಲವು ಆಸ್ಪತ್ರೆಗಳನ್ನು ತೆಗೆಯುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಎಂದು ದೂರುಗಳು ಬಂದಿವೆ. ಸ್ಯಾಂಕ್ಷನ ಆದ ಆಸ್ಪತ್ರೆಗಳನ್ನು "ಹಾಗೆಯೇ ಇರಲಿ; ಆಮೇಲೆ ತೆರೆಯಬಹುದು" ಎಂದು ತಾವು ಸ್ಟೇ ಆರ್ಡರ್ ಕೊಡುವುದು ಸರಿಯಲ್ಲ. ತಾವು ಎಲ್ಲಿ ಸೌಲಭ್ಯಗಳು ಕಡಮೆಯಿವೆಯೋ ಅಲ್ಲಿಗೆ ಒದಗಿಸಿಕೊಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಅವರಿಗೆ ಸೌಲಭ್ಯವನ್ನು ಒದಗಿಸಿಕೊಡುವಾಗ ಇತರರಿಗೆ ಕೊಡುವುದನ್ನು ತಪ್ಪಿಸುವುದಕ್ಕೆ ಅಥವಾ ಕಡಮೆ ಮಾಡುವುದಕ್ಕೆ ಪ್ರಯತ್ನಮಾಡಬಾರದು, ಎಂದು ನಾನು ವಿನಯಪೂರ್ವಕವಾಗಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈ ಬಾಬಿಗೆ ಹಣವನ್ನು ಒದಗಿಸುವುದರಲ್ಲಿ ಏನೂ ಕಡಮೆ ಒದಗಿಸಿಲ್ಲ. ಮೂರು ಕೋಟಿ ಚಿಲ್ಲರೆ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದ್ದಾರೆ. ಆದರೆ ನಮ್ಮ ಪರಿಸ್ಥಿತಿ ಹೇಗಿದೆ ಎಂಬುದನ್ನು ಸ್ವಲ್ಪ ಯೋಚನೆಮಾಡಬೇಕು. ತುಮಕೂರಿನ ಆಸ್ಪತ್ರೆಯನ್ನೇ ತೆಗೆದುಕೊಳ್ಳಿ, 50 ಪೇಷಂಟ್ಸ್ ಹಾಕುವ ಕಡೆ 150 ಪೇಷೆಂಟ್ಸ್‌ಗಳನ್ನು ಹಾಕಿದ್ದಾರೆ. ಅವರು ಸಹಾನುಭೂತಿ ತೋರಿಸಿ ಬರತಕ್ಕ ರೋಗಿಗಳನ್ನು ನೋಡಿ ಆಚೆ ಕಳುಹಿಸುವುದು ಹೇಗೆ ಎಂದು ಹಾಗೆ ಹಾಕಿದ್ದಾರೆ. ನೀವು 50 ಬೆಡ್ಸ್‌ಗೆ ಅನುಕೂಲವಿದ್ದರೆ 75ಕ್ಕೆ ಅವಕಾಶಕೊಡಿ. ಟೆಕ್ನಿಕಲ್ಲಾಗಿ ಸಕ್ರೆಟರಿ 75ಕ್ಕೆ ಎಲ್ಲಿ ಸಾಧ್ಯವೆಂದರೆ ಅದಕ್ಕೆ ಒಪ್ಪಿಕೊಂಡು ಸುಮ್ಮನಿರುವುದು ಸೂಕ್ತವಲ್ಲ. 50ಕ್ಕೆ ನಿಗದಿ ಮಾಡಿರುವಕಡೆ 50 ಹಾಕದೆ 75ಕ್ಕಾದರೂ ಅವಕಾಶ ಕೊಡಿ; ವರ್ಷೇ ವರ್ಷೇ ಸ್ವಲ್ಪ ಸ್ವಲ್ಪವಾಗಿ ಅಡ್ಜಸ್ಟ್ ಮಾಡಿ, ಒಂದೇ ವರ್ಷ ಆಗುವುದಿಲ್ಲ. ಮೊನ್ನೆತಾನೆ ಭೂಕಂಪವಾದ ಅಗದೀರ್ ನಗರದಲ್ಲಿ ಹೂತುಹೋಗಿರುವ ಜನರನ್ನು ಉಳಿಸಬೇಕೆಂದು ಪ್ರಯತ್ನಪಡುತ್ತಿರುವಾಗ ನಮ್ಮಲ್ಲಿ ಕಾಯಿಲೆ ಇರುವ ಮನುಷ್ಯನನ್ನಾದರೂ ಉಳಿಸಿಕೊಳ್ಳಲು ತೀವ್ರವಾಗಿ ಪ್ರಯತ್ನಿಸಬೇಕು.

ಆಮೇಲೆ ಔಷಧಿಗಳ ವಿಷಯ ಎಷ್ಟೋ ಸಾರಿ ಪ್ರಸ್ತಾಪಮಾಡಿದ್ದೇವೆ. ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ ದೊಡ್ಡ ದೊಡ್ಡ ಕಡೆಗೆ ಬೇಕಾದಷ್ಟು ಸರಬರಾಯಿ ಮಾಡುವಂತೆ ಬೇರೆ ಕಡೆಗಳಿಗೂ ಆವಶ್ಯಕವಾದಷ್ಟನ್ನು ಸರಬರಾಯಿ ಮಾಡಬೇಕು.

ನರ್ಸುಗಳ ವಿಚಾರವನ್ನು ನೋಡಿದರೆ ಯಾವ ಆಸ್ಪತ್ರೆಯಲ್ಲೂ ಡಾಕ್ಟರುಗಳಂತೆ ನರ್ಸುಗಳು ಬಹಳ ದಕ್ಷರಾಗಿಲ್ಲ. ರೋಗಿಗಳನ್ನು ಮುಖ್ಯವಾಗಿ ನೋಡಿಕೊಳ್ಳುವವರು ನರ್ಸುಗಳು, ಅವರು ದಕ್ಷರಾಗಿಲ್ಲದಿದ್ದರೆ ಇತರರು ಎಷ್ಟೇ ಕೆಲಸಮಾಡಿದರೂ, ಎಷ್ಟೇ ಔಷಧಿ ಒದಗಿಸಿದರೂ ರೋಗಿಗೆ ಬೇಕಾದ ಸೌಲಭ್ಯ ಸಿಕ್ಕದಹಾಗಾಗುವುದಿಲ್ಲ. ಅವರ ಸಂಖ್ಯೆಯೂ ಕಡಮೆ, ಅವರಿಗೆ ಸರಿಯಾದ ಶಿಕ್ಷಣ, ತರಪೇತು ಕೊಡಬೇಕು. ಕಾಂಪೌಂಡರುಗಳು ಮತ್ತು ನರ್ಸುಗಳಿಗೆ ಸರಿಯಾದ ಸಂಬಳಸಾರಿಗೆ ಕೊಡದೆ ನಾಲ್ಕನೆಯ ಗ್ರೇಡ್

(ಶ್ರೀ ಟಿ. ಎನ್. ಮೂಡಲಗಿರಿಗೌಡ)

ಕೊಟ್ಟಿದ್ದಾರೆ. ನರ್ಸುಗಳಿಗೆ ಈಚೆಗೆ ಜಾಸ್ತಿ ಮಾಡಿದರೂ ಕಾಂಪೌಂಡರುಗಳ ಸಂಬಳಸಾರಿಗೆ ಬಹಳ ಕಡಮೆ ಮಟ್ಟದಲ್ಲೇ ಇದೆ. ನಮ್ಮಲ್ಲೂ 3 ಅಥವಾ 6 ತಿಂಗಳು ಶಿಕ್ಷಣ ಕೊಟ್ಟಿರಬಹುದು. ಆದರೆ ಮಿಷನ್ ಆಸ್ಪತ್ರೆ ಮತ್ತು ನಮ್ಮ ಆಸ್ಪತ್ರೆ ನೋಡಿದರೆ ನಮ್ಮಲ್ಲಿ ದಕ್ಷರಾದ ನರ್ಸುಗಳ ಸಂಖ್ಯೆ ಕಡಮೆಯಾಗಿದೆ. ಅವರು ಸರಿಯಾದ ರೀತಿಯಲ್ಲಿ ಕ್ರಮವಾಗಿ ದಕ್ಷತೆಯಿಂದ ಕೆಲಸಕಾರ್ಯಗಳನ್ನು ಮಾಡದಿದ್ದರೆ ಪರಿಸ್ಥಿತಿ ಉತ್ತಮವಾಗುವುದಿಲ್ಲವೆಂಬುದನ್ನು ಗಮನಿಸಿ ತಕ್ಕ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಷಯ ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ತರಬೇಕಾಗಿರುವುದು ಸ್ಪೆಷಲಿಸ್ಟ್‌ಗಳ ವಿಚಾರ. ದೇಶದಲ್ಲಿ ಎಷ್ಟು ಜನರಲ್ ಆಸ್ಪತ್ರೆಗಳಿವೆ, ಸ್ಪೆಷಲಿಸ್ಟ್‌ಗಳು ಎಷ್ಟು ಜನರಿದ್ದಾರೆ, ಎಷ್ಟು ಜನ ಬೇಕಾಗಿದೆ, ಹೊರದೇಶಗಳಿಗೆ ತರಪೇತಿಗಾಗಿ ಎಷ್ಟು ಮಂದಿಯನ್ನು ಕಳುಹಿಸಲಾಗಿದೆ, ಅವರು ಯಾವಾಗ ಬರಬಹುದು ಎಂಬುದನ್ನು ಪರಿಶೀಲಿಸಿ ಕೊರತೆಯಿರುವ ಕಡೆ ಭರ್ತಿಮಾಡಲು ಒಂದು ಯೋಜನೆ ಹಾಕಿಕೊಂಡು ಹೆಚ್ಚು ಸ್ಪೆಷಲಿಸ್ಟ್ ಡಾಕ್ಟರುಗಳನ್ನು ತಯಾರಿಸಲು ಪ್ರಯತ್ನಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಆಮೇಲೆ ಇರಿಗೇಷನ್ ವಿಷಯದಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದೆ. ಮಂತ್ರಿಗಳ ಕೆಲಸಕಾರ್ಯದ ಬಗ್ಗೆ ಏನೂ ಹೇಳುವಹಾಗಿಲ್ಲ. ಆದರೆ ಜೋರಾಗಿ ಹೋದರೆ ಮುಗ್ಗರಿಸುವುದು ಜಾಸ್ತಿಯಾಗುತ್ತದೆ; ಹಾಗಾಗಬಾರದು. ಎಂಟು ಚಿಲ್ಲರೆ ಕೋಟಿ ರೂಪಾಯಿಗಳ ಖರ್ಚು ಪ್ಲಾನ್‌ನಲ್ಲಿ ನಮೂದಾಗಿದೆ. ವೇಸ್ಟೇಜ್ ಇಲ್ಲಬೇಕು. ಸಕಾಲದಲ್ಲಿ ಕೆಲಸವಾಗಬೇಕು. ನಾವು ಹಾಕುವ ಹಣಕ್ಕೆ ಸರಿಯಾದ ಉತ್ಪತ್ತಿ ಬರಬೇಕು. ಇಂಡಿಯಾ ಸರ್ಕಾರ 12 ಕೋಟಿ ರೂಪಾಯಿಗಳಷ್ಟು ನಮ್ಮ ತೆರಿಗೆಗಳನ್ನೆಲ್ಲಾ ಸೆಂಟ್ರಲೈಜ್‌ಮಾಡಿಕೊಂಡಿರುವುದರಿಂದ ನವಗೆ ಹೆಚ್ಚಾಗಿ ಕೊಡಬೇಕೆಂದು ಒತ್ತಾಯ ಮಾಡಬೇಕು. ನಮ್ಮ ಸಂಸ್ಥಾನದ ವಿಚಿತ್ರ ಪರಿಸ್ಥಿತಿ ಹೀಗಿದೆ, ಸ್ಟೇಟ್ಸ್ ರೀ-ಆರ್ಗನೈಜೇಷನ್ ಆದಮೇಲೆ ಕೊರತೆಯಿರುವ ಅನೇಕ ಭಾಗಗಳು ನಮಗೆ ಸೇರಿ ನಮ್ಮ ಖರ್ಚು ಹೆಚ್ಚಿದೆಯೆಂದು ಇಂಡಿಯಾ ಸರ್ಕಾರಕ್ಕೆ ಮನಮುಟ್ಟುವಂತೆ ವಿಶದೀಕರಿಸಿ ಎಲೆಕ್ಷನ್ ಕರಣವಾದಾಗ ಭರವಸೆಕೊಟ್ಟಿರುವಂತೆ ನಮಗೆ ಆವಶ್ಯಕವಾದಷ್ಟು ಸಹಾಯವನ್ನು ದೊರಕಿಸಿಕೊಳ್ಳ

6 P.M.

ಬೇಕು. ಮಹಾರಾಷ್ಟ್ರ ಗುಜರಾತ್ ಸ್ಟೇಟ್ ನಿರ್ಮಾಣ ಮಾಡುವಾಗ ಗುಜರಾತಿಗೆ ಎಂಟು ಕೋಟಿ ಹಣವನ್ನು ಹತ್ತು ವರ್ಷಗಳ ಕಾಲ ಕೊಡುತ್ತೇವೆಂದು ಹೇಳಿದ್ದಾರೆ. ಗುಜರಾತ್ ಸ್ಟೇಟಿಗಿಂತ ಇದು ಅತಿಶಯವಾದ ಸ್ಟೇಟು ಆದುದರಿಂದ ನಮಗೆ ಕೊಟ್ಟ ಹಣವನ್ನು ವಾಪಸು ಕೊಡಬೇಕೆಂದು ಕೇಳುವುದರಲ್ಲಿ ಅರ್ಥವಿಲ್ಲ.

ಅಧ್ಯಕ್ಷರು.—ಬೊಂಬಾಯಿ ನವರು 50 ಕೋಟಿ ರೂಪಾಯಿ ಗುಜರಾತಿಗೆ ಕೊಡುತ್ತಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಬೊಂಬಾಯಿ ಸರ್ಕಾರಕ್ಕೆ ಇಂಡಿಯಾ ಗವರ್ನ್‌ಮೆಂಟಿನವರು ಕೊಡುತ್ತಾರೆ. ಅದನ್ನು ಬೊಂಬಾಯಿ ಗವರ್ನ್‌ಮೆಂಟ್‌ನವರು ಗುಜರಾತಿಗೆ ಕೊಡುತ್ತಾರೆ.

ಅಧ್ಯಕ್ಷರು.—ಇಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಅದು ಹೇಗಾದರೂ ಆಗಲಿ. ನಮ್ಮ ಸ್ಟೇಟ್ ಇಡಿಯ ಭಾರತದಲ್ಲಿ ಐದು ಪ್ರಾಂತ್ಯಗಳ ಭಾಗಗಳು ಸೇರಿ ಆಗಿರುವ ಕಾಂಪ್ಲಿಕೇಟೆಡ್ ಸ್ಟೇಟ್. ಹಣಕಾಸಿನ ವಿಷಯದಲ್ಲಿ, ಅಭಿವೃದ್ಧಿಯ ವಿಷಯದಲ್ಲಿ, ಟ್ಯಾಕ್ಸೇಷನ್ ವಿಷಯದಲ್ಲಿ, ಒಂದೊಂದು ಭಾಗಕ್ಕೆ ಇಷ್ಟು ಅಂತರವಿರುವ ಸ್ಟೇಟ್, ಇನ್ನಾವ ಸ್ಟೇಟೂ ಇಲ್ಲ. ಈ ಸ್ಟೇಟನ್ನು ಕಟ್ಟುವಾಗ ಇಂಡಿಯಾ ಸರ್ಕಾರದವರು ಉದಾರವಾಗಿ ಹಣ ಒದಗಿಸಬೇಕು. ನಮ್ಮ ಅಧ್ಯಕ್ಷರು ಇರತಕ್ಕಂಥಾದ್ದು ಕ್ಷಾಮ ಪ್ರದೇಶದಲ್ಲಿ. ಇಂಡಿಯಾ ಸರ್ಕಾರದವರು ಕೊಟ್ಟಂಥ ಹಣವನ್ನು ಬಿಜಾಪುರ ಜಿಲ್ಲೆಗೆ ಹಾಕಿ, ಅದರಿಂದ ರಿಟರ್ನ್ ಬರಬೇಕೆಂದರೆ ಹೇಗೆ ?

ಅಧ್ಯಕ್ಷರು.—ಚೀಫ್‌ಮಿನಿಸ್ಟರೂ ಅಲ್ಲಿಯವರೇ !

ಶ್ರೀ ಟಿ. ಎನ್. ಮೂಡಲಗಿರಿಗೌಡ.—ನಾನು ಈ ಸಭೆಯ ಮೂಲಕ ಇಂಡಿಯಾ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟು. ರಿಆರ್ಗನೈಸೇಷನ್ ಕಾಲದಲ್ಲಿ ಇಂಡಿಯಾ ಸರ್ಕಾರದವರು ನಮಗೆ ಭರವಸೆ ಕೊಟ್ಟಿದ್ದರು. ಆ ಭರವಸೆಯಂತೆ ಹೆಚ್ಚು ಹಣವನ್ನೊದಗಿಸಿ, ರಾಜ್ಯವನ್ನು ಕಟ್ಟುವುದಕ್ಕೆ ಸಹಾಯ ಮಾಡಬೇಕು ಇಲ್ಲಿ ಕ್ಷಾಮ ಪೀಡಿತ ಪ್ರದೇಶಗಳಿರುವುದರಿಂದ, ಕೊಟ್ಟ ಹಣಕ್ಕೆ ರಿಟರ್ನ್ ಬರಬೇಕೆಂದರೆ ಕಷ್ಟ. ಇಂಡಿಯಾ ಸರ್ಕಾರದವರಿಗೆ ಹಣ ಕೊಟ್ಟಿದ್ದಕ್ಕೆ ಥ್ಯಾಂಕ್ ಕೊಡಬೇಕು, ಮಾಡುತ್ತೇವೆ. ಅವರು ಕೊಟ್ಟಿರುವುದರಲ್ಲಿ ಎಷ್ಟು ಕೋಟಿ ಹಣವನ್ನು ಇನ್‌ವೆಸ್ಟ್ ಮಾಡಬೇಕು, ಎಷ್ಟನ್ನು ಖರ್ಚುಮಾಡಬೇಕು. ಅದರಲ್ಲಿ ರಿಟರ್ನ್ ಬರುತ್ತದೆಯೇ ಎನ್ನುವುದನ್ನು ತಾವು ಯೋಚನೆ ಮಾಡಬೇಕು.

SRI T. MARIAPPA.—Before the next Finance Commission we must make out a case for larger income, for larger grant.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ವೆಸ್ಟ್ ಕೋಸ್ಟಿನ ನಮ್ಮ ಸೌತ್ ಕೆನರ ನಾರ್ತ್‌ಕೆನರ ಡಿಸ್ಟ್ರಿಕ್ಟುಗಳಲ್ಲಿ ಒಂದೊಂದು ಸೇತುವೆ ಹಾಕುವುದಕ್ಕೆ, ಒಂದು ಲಕ್ಷ, ಒಂದು ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ಹೀಗಿರುವಾಗ ಆ ಹಣದಿಂದ ರಿಟರ್ನ್ ಬರಬೇಕೆಂದರೆ ಹೇಗೆ? ನಾವು ಪ್ಲಾನ್ ಅಮೌಂಟಿನಿಂದಲೇ ಅದಕ್ಕೆ ಹಾಕಿದ್ದೇವೆ. ಹಾಕುವಾಗ ಇರ್ರಿಗೇಷನ್ನಿಗೆ ಹಾಕಿದ್ದೇವೆಂದು ಹೇಳುವಹಾಗಿಲ್ಲ. ನಿವ ಗೆ ರಿಟರ್ನ್ ಬರುವುದು ಹೇಗೆ? ವರ್ಷ ವರ್ಷವೂ ಪರ್ಸೆಂಟೇಜ್ ಬಡ್ಡಿಯನ್ನೇ ಕೊಡಬೇಕು, ಇನ್‌ಸ್ಟಾಲ್‌ಮೆಂಟನ್ನೂ ಕೊಡಬೇಕು, ಇವುಗಳನ್ನು ಕೊಡುವುದಕ್ಕೆ ಚೈತನ್ಯವಿದೆಯೇ ? ಚೈತನ್ಯ ಬಾರದೆ ಹೋದರೆ ಐದು ವರ್ಷದಲ್ಲಿ ಏನಾಗುತ್ತದೆ ? ಆನ್ಯುಯಲ್ ಬಜೆಟ್ಟಿನ ಮೇಲೆ ಆಗುವ ಪರಿಣಾಮವೇನು, ಆನ್ಯುಯಲ್ ಬಜೆಟ್ ನಿರಿದೂಗಿಸುವುದಕ್ಕೆ ಸಾಧ್ಯವೆ? ದಿನಚರಿಗೆ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಏಕೆಂದರೆ ನೀವು ಇವೊತ್ತಿನ ದಿವಸ ಫೈನಾನ್ಸ್ ಮಿನಿಸ್ಟರಾಗಿದ್ದೀರಿ. ಮುಂದಿನ ವರ್ಷ ಮತ್ತು ಮೂರು-ನಾಲ್ಕು-ಐದು ವರ್ಷಗಳಲ್ಲಿ, ನಮ್ಮ ಪರಿಸ್ಥಿತಿ ಏನು ಎನ್ನತಕ್ಕಂಥಾದ್ದನ್ನು ಯೋಚನೆ ಇಟ್ಟುಕೊಂಡು ನೀವು ಹಣಕಾಸಿನ ಮತ್ತು ದೇಶದ ಪರಿಸ್ಥಿತಿ ತೆಗೆದುಕೊಳ್ಳಬೇಕು. ನೀವು ಒಂದು ಪಕ್ಷ ಕೂಗಿಸುವುದಕ್ಕೆ ನಿಶ್ಶಕ್ತರಾದರೆ, ನಮ್ಮ ಮಕ್ಕಳು ಅನುಭವಿಸಬೇಕು. ಈ ಟ್ಯಾಕ್ಸುಗಳನ್ನು ಯಾರು ಕೊಡಬೇಕು ಮತ್ತು ಎಲ್ಲಿಂದ ಕೊಡಬೇಕು, ಮತ್ತು ಹೇಗೆ ನಿರಿದೂಗಿಸ

ಬೇಕು? ನಾವು ಇಂಡಿಯಾ ಸರ್ಕಾರದವರಿಗೆ ಹಣವನ್ನು ವಾಪಸ್ಸು ಕೊಡುವುದಕ್ಕೆ ನಮಗೆ ರಿಟರ್ನ್ ಬರುವುದಿಲ್ಲ, ಆದುದರಿಂದ ಚೈತನ್ಯ ಬರುವುದಿಲ್ಲ. ಎಲ್ಲಿಯವರೆಗೆ ಇನ್‌ಫ್ಲೇಷನ್ ಇಟ್ಟುಕೊಂಡು, ಯೋಜನೆ ಮೇಲೆ ಹಣ ಒದಗಿಸುತ್ತೇವೆಯೋ, ಅಲ್ಲಿಯವರೆಗೆ ಮೀಸೆತಿರುಗಿಸ ಬಹುದು ಅಲ್ಲಿಂದ ಆಚೆಗೆ ಮೀಸೆತಿರುಗಿಸುವುದು ಬಹಳ ಕಷ್ಟವಾಗುತ್ತದೆ ಇಷ್ಟು ಅಭಿಪ್ರಾಯವನ್ನು ಜಾ ಪಕದಲ್ಲಿಟ್ಟು ಕೊಂಡಿರಬೇಕು.

ಶ್ರೀ ಜಿ. ವೆಂಕಟೇಗೌಡರು.—ದೇಶದಲ್ಲಿ ವೆಹಿಕಲ್ ಟ್ಯಾಕ್ಸಿನಿಂದ ಬರತಕ್ಕ ವರಮಾನ ರಸ್ತೆಗಳ ಮೇಲೆಯೇ ಖರ್ಚಾಗುತ್ತಿದೆಯೇ ಎಂಬ ವಿಷಯ ಹೇಳಿದರು. ತಮ್ಮಲ್ಲಿ ನಾನು ವಿನಯ ಪೂರ್ವಕವಾಗಿ ಕೇಳಿಕೊಳ್ಳುವುದಿಷ್ಟು. ಒಂದು ರೋಡಿನಲ್ಲಿ ಒಂದು ಮೈಲಿಗೆ ಮದ್ರಾಸ್ ಸರ್ಕಾರದವರು ಏನು ಖರ್ಚುಮಾಡುತ್ತಾರೆ, ಬೊಂಬಾಯಿ ಸರ್ಕಾರದವರು ಏನು ಖರ್ಚು ಮಾಡುತ್ತಾರೆ, ಇಂಡಿಯಾ ಸರ್ಕಾರದವರು ಏನು ಖರ್ಚುಮಾಡುತ್ತಾರೆನ್ನುವುದನ್ನು ಲೆಕ್ಕ ಹಾಕಿಕೊಂಡು ನೋಡಿ, ನಿವು ಎಷ್ಟು ಖರ್ಚುಮಾಡುತ್ತೀರೆನ್ನುವುದನ್ನು ತಾವೇ ನೋಡಿ ಹೇಳಿರಿ. ನೀವು ಅವರಿಗಿಂತಲೂ ಹೆಚ್ಚಿಗೆ ಖರ್ಚುಮಾಡುತ್ತಿದ್ದೀರಾ? ಇಲ್ಲಿಂದ ಬಳ್ಳಾರಿಗೆ ಹಾಕತಕ್ಕಂಥ ರೋಡನ್ನಾಗಲಿ, ಶಿವಮೊಗ್ಗಕ್ಕೆ ಹಾಕತಕ್ಕಂಥ ರೋಡನ್ನಾಗಲಿ, ಮೈಸೂರಿಗೆ ಹಾಕತಕ್ಕಂಥ ರೋಡನ್ನಾಗಲಿ ತೆಗೆದು ಕೊಂಡರೆ ಅಲ್ಲಿಂದ ಬರತಕ್ಕ ಟ್ಯಾಕ್ಸುಗಳನ್ನು ನೀವು ಚೆನ್ನಾಗಿ ಖರ್ಚುಮಾಡುತ್ತಿದ್ದೀರಿ. ಅಲ್ಲಿ 100–200-300 ರೂಪಾಯಿ ಒಂದು ಮೈಲಿಗೆ ಬಂದರೆ 500-750-1200 ಹೀಗೆ ಕೊಡುತ್ತೀರಿ. ಆದರೆ ಹಳ್ಳಿ ರಸ್ತೆಗಳಲ್ಲಿ ಒಂದೊಂದು ಮೊಳ ಗುಂಡಿ ಇದೆಯೆಂದರೆ, ಗ್ರ್ಯಾಂಟ್ ಇಲ್ಲ ಎಂದು ಹೇಳಿದರು. ಫೈನಾನ್ಸ್ ಮಿನಿಸ್ಟರಿಗೆ ಒಂದು ವಿಷಯವನ್ನು ಕೇಳುತ್ತೇನೆ. 630 ಲಕ್ಷರೂಪಾಯಿ ಖರ್ಚುಮಾಡುವಾಗ, ಬಜೆಟ್ ಹೇಗೆ ಖರ್ಚು ಪ್ರಿಪೇರ್ ಮಾಡಿದಿರಿ ಎಂದು. ಈ ಬಜೆಟ್ಟಿನಲ್ಲಿ ಫಿಗರ್ಸ್ ಬೇರೆ ಬೇರೆಯಾಗಿ, ಪ್ರತ್ಯೇಕವಾಗಿ, ರಸ್ತೆಗಳ ಎಕ್ಸ್ ಪೆಂಡಿಚರಿಗೆ, ಮತ್ತೊಂದಕ್ಕೆ ಮಗದೊಂದಕ್ಕೆ ಮಾಡಿರುವುದು ಬಹಳ ತೃಪ್ತಿಕರವಾಗಿದೆ. ಅವುಗಳನ್ನೆಲ್ಲಾ ತಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟ್ ಚೆನ್ನಾಗಿ ಇಟ್ಟುಕೊಂಡಿರಬೇಕು, ಯಾವ ಪ್ಲಾನಿಗೋಸ್ಕರ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಎಷ್ಟು ಹಣವನ್ನು ಖರ್ಚುಮಾಡಿದ್ದಾರೆಂಬುದನ್ನು ಚೆಕ್ ಮಾಡಬೇಕು.

Sri T. MARIAPPA.—Heads of Departments are directed to watch both the expenditure and revenue.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇವೊತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ, ಡಿಸ್ಟ್ರಿಕ್ಟ್ ಲೆವೆಲ್ಲಿನಲ್ಲಿ, ತಾಲ್ಲೂಕು ಲೆವೆಲ್ಲಿನಲ್ಲಿರಿ, ಮೆಂಬರುಗಳು ಬಂದರೂ, ಹಣ ಅಲ್ಲಿಯೇ ಉಳಿದಿರುತ್ತದೆ. ಡಿಸ್ಟ್ರಿಕ್ಟ್ ಮಟ್ಟದಲ್ಲಿ ಈ ಸದಸ್ಯರಿಗೆ ಎಷ್ಟು ಹಣ ಖರ್ಚಾಗಿದೆ. ಎಷ್ಟು ಖರ್ಚಾಗುತ್ತಿದೆ ಎನ್ನುವ ಮಾಹಿತಿಬೇಕು. ಇನ್ನೊಂದು ವಿಷಾದಕರ ವಿಷಯವೆಂದರೆ, ಎಲ್ಲವನ್ನೂ ನಾವು ಸೆಕ್ರೆಟೇರಿಯಟ್‌ಗೆ ಬಂದು ಇಲ್ಲಿಯ ಗುಮಾಸ್ತರಿಂದ ತಿಳಿದುಕೊಳ್ಳಬೇಕಾಗಿದೆ. ಇದಕ್ಕೆ ಗ್ರ್ಯಾಂಟ್ ಬಂತೆ, ಅದಕ್ಕೆ ಗ್ರ್ಯಾಂಟ್ ಬಂತೆ ಎಂದು ಕೇಳಬೇಕಾಗಿದೆ. ಯಾವ ಯಾವ ಡಿಸ್ಟ್ರಿಕ್ಟಿಗೆ ಎಷ್ಟೆಷ್ಟು ಹಣವನ್ನೊದಗಿಸಿದ್ದೀರೆಂಬ ಬಗ್ಗೆ ಅಂಕಿ ಅಂಶಗಳನ್ನು ಈ ಸಭೆಯ ಸದಸ್ಯರಿಗೆ ಒದಗಿಸಬೇಕೆಂದು ವಿನಂತಿ.

ಶ್ರೀ ಟಿ. ಮರಿಯಪ್ಪ.—ಪ್ರತಿ ತಿಂಗಳಲ್ಲಿಯೂ ಸರಿಯಾಗಿ ಹಣ ಖರ್ಚಾಗಬೇಕೆಂದು ಸೂಚನೆಕೊಟ್ಟಿದ್ದೇವೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಖರ್ಚು ಮಾಡದೇ ಹೋದರೆ, ತಕ್ಕ ಸೂಚನೆ ಕೊಡಬೇಕು.

ಇಷ್ಟು ಹೇಳಿ, ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೆ, ನಾನು ಎರಡು-ಮೂರು ಮಾತುಗಳನ್ನಾಡಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಮೊದಲು ತಮಗೆ ವಂದನೆಗಳನ್ನರ್ಪಿಸುತ್ತೇನೆ.

ನಮ್ಮ ಹಣಕಾಸಿನ ಸಚಿವರು ಮರಳಿನಲ್ಲಿ ಎಣ್ಣೆ ತೆಗೆಯುವ ಶಕ್ತಿಯುಳ್ಳವರು. ಹಿಂದಿನ ವರ್ಷಗಳ ಬಡ್ಜೆಟ್‌ಗಳಿಗೂ ಇಂದಿನ ವರ್ಷದ ಬಡ್ಜೆಟ್ಟಿಗೂ ಬಹಳ ವ್ಯತ್ಯಾಸವಿದೆ. ಇದನ್ನು ಹಗಲೂ ರಾತ್ರಿ ಓದಿದರೂ ನಮಗೆ ತಲೆಗೇ ಹಿಡಿಯುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ಈ ಸಾರಿ ಬಹಳ clarity ಇದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ನಿಮ್ಮ ಫೈನಾನ್ಸ್ ಸೆಕ್ರೆಟೆರಿಯವರು ಬಹಳ ಚಮತ್ಕಾರವಾಗಿ ಮಾಡಿದ್ದಾರೆ. ತಾವು ಕೊಟ್ಟಿರುವ ಬಡ್ಜೆಟ್ಟಿನಲ್ಲಿರುವ ಅಂಕಿ ಅಂಶಗಳ ಆಧಾರದ ಮೇಲೆ ಮಾತನಾಡುತ್ತೇನೆ ಇದಕ್ಕಾಗಿ ಬೆಳಗಿನಿಂದ ಕಾದು, ಇಷ್ಟು ಹೊತ್ತಾಗಿದೆ. ಕಾಂಗ್ರೆಸ್ ಸರ್ಕಾರ ಬರುವುದಕ್ಕಿಂತ ಮುಂಚೆ ನಮ್ಮ ದೇಶದ ಉತ್ಪತ್ತಿ ಮೂರು ಕೋಟಿ, ಅಥವಾ ಐದು ಕೋಟಿ ರೂಪಾಯಿ ಇತ್ತು. ಆಗ ರೂಪಾಯಿಗೆ ಹನ್ನೆರಡು, ಹದಿನೈದು ಸೇರು ದವಸ ಬರುತ್ತಿತ್ತು. ಈಗ ರೂಪಾಯಿಗೆ ಒಂದು ಸೇರಾಗಿದೆ. ಈ ಹಣದುಬ್ಬರಕ್ಕೆ ಕಾರಣವೇನು ಪರಿಸ್ಥಿತಿಗೆ ಕಾರಣವೇನು ಎಂಬುದು ಸರ್ವರೂ ಯೋಚಿಸಬೇಕಾದ ವಿಚಾರ. 'ಹೊಟ್ಟೆಗೇ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು' ಎಂದು ಹೇಳುವ ಹಾಗೆ, 139 ಕೋಟಿ ರೂಪಾಯಿ ಸಾಲವಾಗಿದೆ, ಈಗಾಗಲೇ ಮತ್ತೆ ಐದು ಕೋಟಿ ರೂಪಾಯಿ ಸಾಲ ಎತ್ತುತ್ತೇವೆಂದು ಹೇಳಿದ್ದಾರೆ. ಇದಲ್ಲದೆ ಜಮೀನ್ ಕಂದಾಯದ ಮೇಲೆ ಸರ್‌ಚಾರ್ಜ್ ಹಾಕುತ್ತೇವೆಂದು ಬೇರೆ ಹೇಳಿದ್ದಾರೆ. ಈಗ ಮಿತವ್ಯಯ ಹೇಗೆ ಮಾಡುವುದು, resources ಹೇಗೆ ಸರಿಮಾಡುವುದು ಎಂದು ಯೋಚಿಸಿ ಕಾರ್ಯಗತ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಮ್ಮ ಸರ್ಕಾರದ ನೀತಿ ಹೇಗಿದೆಯೆಂದರೆ, "ಬಾಗಿಲನಲ್ಲಿ ಹೋಗುವುದನ್ನು ಬಿಟ್ಟು ಬಾದಳದಲ್ಲಿ ಹೊಗುವುದನ್ನು ತಡಿ ಎಂದು ಹೇಳುವ ಹಾಗಿದೆ. ಇವರು ಹೋಗುತ್ತಿರುವ ದಾರಿ ಸರಿಯೆ ಎಂಬುದನ್ನು ವಿಮರ್ಶೆ ಮಾಡೋಣ. ನಮ್ಮ ಕಾಂಗ್ರೆಸ್ ಮಿತ್ರರಿಗೆ ಕಂಡದ್ದನ್ನು ಕಂಡಹಾಗೆ ಹೇಳಿದರೆ ಕೆಂಡದಂಥಕೋಪ ಬರುತ್ತದೆ, ಆದರೂ ನಾನು ಕಂಡದ್ದನ್ನು ಹೇಳುತ್ತೇನೆ, ರಾಜ್ಯದಲ್ಲಿ ಅನೇಕ ಕಡೆ ಒಬ್ಬೊಬ್ಬ ರೈತನು ಎರಡು-ಮೂರು ಎಕರೆಯಿಂದ ಹಿಡಿದು ಹತ್ತು-ಇಪ್ಪತ್ತು ಎಕರೆಗಳವರೆಗೆ ಜಮೀನನ್ನು ಬಗರ್ ಹುಕುಂನಿಂದ ಆಕ್ರಮಿಸಿಕೊಂಡು ಅದರಲ್ಲಿ unauthorised cultivation ಮಾಡುತ್ತಿದ್ದಾನೆ, ಇದನ್ನು ಸರಿಪಡಿಸಿದರೆ ಇದರಿಂದ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ಬರುತ್ತದೆ. ಹೀಗಿರುವಾಗ ಏಕೆ ಸಾಲ ಎತ್ತಬೇಕು? ನಾನು ಇದೇ ಇಲಾಖೆಯಲ್ಲಿದ್ದು ಕೆಲಸ ಮಾಡಿರುವವನು; ಆದರೆ ಈ ಮಂತ್ರಿಗಳು ಧಾಯರುಗಳಾಗಿದ್ದು

(ಶ್ರೀ ಜಿ. ಎನ್. ಪುಟ್ಟಣ್ಣ)

ನಂತರ ಜೈಲಿನಿಂದ ಏಕ್‌ದಮ್ ಮಂತ್ರಿಗಳಾದವರು. ಇವೆಲ್ಲ ಇವರಿಗೆ ತಿಳಿಯುವುದಿಲ್ಲ. ನನಗೆ ಗೊತ್ತಿರುವ ಹಾಗೆ ಐದು ಎಕರೆ ಜಮೀನು ಇರುವವನು ಇಪ್ಪತ್ತೈದು ಎಕರೆಯನ್ನು ಎನ್‌ಕ್ರೋಚ್ ಮಾಡಿದ್ದಾನೆ. ಇಂಥವನ್ನೆಲ್ಲಾ ಕಂಡುಹಿಡಿದು ಇವಕ್ಕೆ back assessment ಹಾಕಿ ವಸೂಲುಮಾಡಿದರೆ ಕೋಟ್ಯಂತರ ರೂಪಾಯಿ ಸರ್ಕಾರಕ್ಕೆ ಬರುತ್ತದೆ. ಯಾವ ಜಮೀನಿಗೂ ಬಂದಿಲ್ಲ. ಬೌಂಡರಿ ಮಾರ್ಕ್ ಹಾಕದೇ ಇದ್ದರೆ 50 ರೂಪಾಯಿ ಜುಲ್ಮಾನೆ ವಿಧಿಸಬಹುದು, ಅಕಸ್ಮಾತ್ ರೆವಿನ್ಯೂ ಇನ್‌ಸ್ಪೆಕ್ಟರೋ ಶಾನುಭೋಗರೋ ತಕರಾರು ತಃಖ್ತೆ ಹಾಕಿದರೆ ಅವರನ್ನೇ ತುಳಿಯುತ್ತಾರೆ. Interference of Ministers in local administration ಹೆಚ್ಚಾಗಿದೆ ಎಂದು ಹೇಳಿದರೆ ಅವರು ಕೋಪಮಾಡಿಕೊಳ್ಳಬಾರದು. ಅಕ್ರಮವಾಗಿ ಅಕ್ರಮಿಸಿಕೊಂಡು ಸಾಗುಮಾಡುತ್ತಿರುವ ಜಮೀನಿನಲ್ಲಿ ಬಾಳೆ, ಏಲಕ್ಕಿ ಮುಂತಾದ ಬೆಲೆ ಬಾಳುವ ಬೆಳೆಗಳನ್ನು ಬೆಳೆಯುತ್ತಿದ್ದಾರೆ, ಮೊನ್ನೆ ಶ್ರೀಮಾನ್ ಬೋರಣ್ಣಗೌಡರು ಹಾಕಿದ ಪ್ರಶ್ನೆಗೆ ರೆವಿನ್ಯೂ ಮಂತ್ರಿಗಳು ಕೊಟ್ಟ ಉತ್ತರ ತೃಪ್ತಿಕರವಾಗಿಲ್ಲ. Encroachment, removal of boundary marks ಇವೆಲ್ಲವನ್ನೂ ಪತ್ತೆಹಚ್ಚಿ ಸರಿಯಾದ ಕ್ರಮ ತೆಗೆದುಕೊಂಡರೆ ನಾಲ್ಕೈದು ಕೋಟಿ ರೂಪಾಯಿ ವರಮಾನ ಬರುತ್ತದೆ.

ರೆವಿನ್ಯೂ ಇಲಾಖೆಯಲ್ಲಿ ಕಂದಾಯ ವಸೂಲಿ ಕ್ರಮ ಬಹಳ cumbersome process, ಇಂಥ ತೊಡಕಾದ ಕ್ರಮ ಇಂಡಿಯಾದೇಶದ ಇನ್ನಾವ ಭಾಗದಲ್ಲಿಯೂ ಇಲ್ಲ. 1888ರಲ್ಲಿ ಜಾರಿಗೆಬಂದ ಲ್ಯಾಂಡ್ ರೆವಿನ್ಯೂ ಕೋಡ್ ಈಗಲೂ ಹಾಗೆಯೇ ಇದೆ. ಕಂದಾಯಕ್ಕಾಗಿ ನೋಟೀಸ್ ಕೊಡಬೇಕು. ಫೆಬ್ರವರಿ, ಮಾರ್ಚಿ, ಏಪ್ರಿಲ್ ತಿಂಗಳು ಮುಗಿದರೂ ಕಂದಾಯ ವಸೂಲಾಗಿರುವುದಿಲ್ಲ, ಮದರಾಸಿನಲ್ಲಿದ್ದಾಗ ಹೇಗಿತ್ತೆಂದು ಸಿರಸಿ, ಕುಂದಾಪುರ ಆ ಪ್ರಾಂತದವರನ್ನು ಕೇಳಲಿ, ಮೈಸೂರು ರಾಜ್ಯದಲ್ಲಿ ಬೇಕಾದಷ್ಟು ಕಂದಾಯ ಬಾಕಿಇದೆ, ಅದೇ ಮದರಾಸಿನಲ್ಲಿ ಮಾರ್ಚಿ ತಿಂಗಳಿನಲ್ಲೇ ಬಾಕಿ ಇರುವುದಿಲ್ಲ. ಅನೇಕರು ಕಂದಾಯ ಕೊಡುವುದಕ್ಕೆ ಬದಲು ಆ ಹಣವನ್ನು ಬೇರೆ ವ್ಯವಹಾರಕ್ಕೆ ಉಪಯೋಗ ಮಾಡಿದರೆ ಸೇಕಡ 25ರಷ್ಟು ಬಡ್ಡಿ ಬರುತ್ತದೆಂದು ಆ ರೀತಿ ಸಂಪಾದನೆಮಾಡುತ್ತಿದ್ದಾರೆ. ಆದುದರಿಂದ ರೆವಿನ್ಯೂ ಕೋಡ್ ಮತ್ತು ರೂಲ್ಸನ್ನು ಬೇಗ ಬದಲಾವಣೆ ಮಾಡಬೇಕು. ಈ ವಿಷಯವನ್ನು ಈಗಾಗಲೇ ರೆವಿನ್ಯೂ ಮಂತ್ರಿಗಳಿಗೆ ಹೇಳಿದ್ದೇನೆ, ಯಾವಾಗ ಮಾಡುತ್ತಾರೋ ಗೊತ್ತಿಲ್ಲ.

ರೈತನ ಹಿಡುವಳಿಯಲ್ಲಿರುವ ಜಮೀನು ಪಡಕ್ಕೆ ಬರುತ್ತದೆ, ರೆವಿನ್ಯೂ ಇನ್‌ಸ್ಪೆಕ್ಟರು ಪಟೇಲ್ ಶಾನುಭೋಗರು ಹೋಗಿ ಅಂಥವರಿಂದ ಕಂದಾಯವನ್ನು ವಸೂಲು ಮಾಡಿ ತಿನ್ನುತ್ತಾನೆ. ಬೆಳೆಯುವುದನ್ನು ರೈತ ಬೆಳೆಯುತ್ತಿರುತ್ತಾನೆ. ರಿಕಾರ್ಡ್‌ನಲ್ಲಿ ಪಡ ಎಂದು ಬರೆದಿರುತ್ತದೆ. ನಾನು ಇಂಥ ನೂರಾರು ಕೇಸುಗಳನ್ನು ಪತ್ತೆಮಾಡಿದ್ದೇನೆ. ಇದನ್ನು ಹತೋಟಿ ಮಾಡದೇಯಿದ್ದರೆ ದೇಶ ಉಳಿಯುವುದಿಲ್ಲ. ನಾವು ಹೇಳಿದರೆ, ವಿರೋಧ ಪಕ್ಷದವರು ಟೀಕೆ ಮಾಡುತ್ತಾರೆಂದು ಹೇಳುತ್ತಾರೆ, ನಾನು ಹಾಗೆ ವೃಥಾ ಟೀಕೆ ಮಾಡುವುದಿಲ್ಲ. ನಮ್ಮ ದೇಶದ ಎಲ್ಲ ಪ್ರಜೆಗಳಿಗೂ ಒಳ್ಳೆಯದಾಗಬೇಕು, ದೇಶ ಮುಂದೆ ಬರಬೇಕೆಂಬ ಉದ್ದೇಶದಿಂದ ಹೇಳುತ್ತೇನೆ. ಮದರಾಸು ರಾಜ್ಯದಲ್ಲಿ ಮಾರ್ಚಿ ತಿಂಗಳ ಕೊನೆಯಲ್ಲಿ ಕಂದಾಯ ವಸೂಲಿ ಮುಗಿಯುತ್ತದೆ. ಶೇಕಡ ಎಷ್ಟು ವಸೂಲಾಗಿರುತ್ತದೆ ಎಂಬುದನ್ನು ನೋಡಬೇಕು, ನಮ್ಮಲ್ಲಿ ವಸೂಲಿ ಸರಿಯಾಗಿ ಆಗದಿದ್ದರೆ, ಅಮಲ್ದಾರರ ಮೇಲೆ ಡೆಪ್ಯುಟಿ ಕಮೀಷನರೂ ಡಿವಿಜನಲ್ ಕಮೀಷನರೂ ಬೀಳುತ್ತಾರೆ. ಅವರು ತಮ್ಮ ತಲೆ ಕಾದುಕೊಳ್ಳಲು ಶಾನಭೋಗರನ್ನು ಖರ್ದಿಗೆ ಬರೆಯಿರಿ ಎಂದು ಹೇಳಿ ಪಟೇಲರ ಕೈಯಿಂದ ರುಜುಮಾಡಿಸುತ್ತಾರೆ. ಜಮಾಬಂದಿ ಮಾಡಿ ಹೊರಟು ಹೋಗುತ್ತಾರೆ. ಖರ್ದಿಯಲ್ಲಿ ಬರೆದಿರುವ ಹಣ ಬಂದಿರುವುದಿಲ್ಲ, ಒಂದು ವರ್ಷದಮೇಲೆ ಹಣ ದುರುಪಯೋಗ ಮಾಡಿಕೊಂಡಿದ್ದಾರೆಂದು ಪಟೇಲರ ಮೇಲೆ ಕೇಸ್ ಹಾಕುತ್ತಾರೆ, ಇಂಥ ಅಕ್ರಮಗಳಿಗೆ ಅವಕಾಶವಿರಬಾರದು, ಹಣ ಬಂದ ಹೊರತು ಖರ್ದಿಯಲ್ಲಿ ಬರೆಯುವುದಕ್ಕೆ ಅವಕಾಶ ಕೊಡಬಾರದು.

ಟೂರು ಹೋದಾಗ ಪ್ರತಿಯೊಬ್ಬ ಆಫೀಸರು ಬಂದಿರಬೇಕು. ಒಂದು ಡಿಸ್ಟ್ರಿಕ್ಟ್ ಮೀಟಿಂಗ್ ಮಾಡಿರಬೇಕು. ಹಿಂದೆ ಆ ರೀತಿ ಆಫೀಸರ್ಸ್ ಮೀಟಿಂಗ್‌ಮಾಡಿ ಕೋ-ಆರ್ಡಿನೇಷನ್ ಮಾಡುತ್ತಿದ್ದರು. ನಿಮ್ಮ ತೊಂದರೆ ಏನು, ಏನೇನು ರೂಲ್ಸ್ ಬದಲಾವಣೆ ಮಾಡಬೇಕು ಎಂದು ಮಂತ್ರಿಗಳು ತಿಳಿದುಕೊಂಡು ಬರುತ್ತಿದ್ದರು. ಈಗ ಮಂತ್ರಿಗಳು ಟ್ರಾವಲಸ್ ಬಂಗಲೆಗೆ ಬರುತ್ತಾರೆ. ಆಗ ಮಂಡಲ ಕಾಂಗ್ರೆಸ್‌ನವರು ಮತ್ತು ಡಿಸ್ಟ್ರಿಕ್ಟ್ ಕಾಂಗ್ರೆಸ್‌ನವರೂ ಅಲ್ಲಿಗೆ ಬರುತ್ತಾರೆ. ಅವರನ್ನು ಭೇಟಿಮಾಡುತ್ತೀರಿ. ಬೇರೆಯವರಿಗೆ ಅವಕಾಶವಿರುವುದಿಲ್ಲ. ಹಾಗೆ ಮಾಡಬೇಡಿ. ಬೇಕಾದರೆ ನಿಮ್ಮ ಮಂಡಲ ಕಾಂಗ್ರೆಸ್ ಮೀಟಿಂಗನ್ನು ಬೇರೆಮಾಡಿ. ಇದನ್ನು ಸರಿಪಡಿಸಿಕೊಳ್ಳಿ. ಸರ್ಕಾರದಮೇಲೆ ಗುರುತರವಾದ ಜವಾಬ್ದಾರಿ ಇದೆ. ಅದನ್ನು ಮೊದಲು ನಿರ್ವಹಿಸಿ, ಆಮೇಲೆ ಪಾರ್ಟಿ ವಿಚಾರ ಕಟ್ಟಿಕೊಳ್ಳಿ.

ಶ್ರೀ ಟಿ ಮರಿಯಪ್ಪ.—ಯಾವಾಗಲೂ ಅದನ್ನೇ ಮೊದಲು ಮಾಡುವುದು.

ಶ್ರೀ ಜಿ. ಎನ್. ಪುಟ್ಟಣ್ಣ.—ರಾಜ್ಯಭಾರದ ಕೆಲಸವನ್ನು ಮೊದಲು ಮಾಡಿ ಆಮೇಲೆ ನಿಮ್ಮ ಕೆಲಸ ಮಾಡಿ. ಬಡರೈತ ನಿಮ್ಮ ಹತ್ತಿರ ಅವನ ಕಷ್ಟಸುಖಗಳನ್ನು ಹೇಳಿಕೊಳ್ಳಲು ಬಂದರೆ ಅವನಿಗೆ ಇಂಟರ್‌ವ್ಯೂ ಕೊಡುತ್ತಾ ಇಲ್ಲ. ಬಹಳ ತಪ್ಪು ಆಗುತ್ತಾ ಇದೆ. ಕಾಂಗ್ರೆಸ್ಸಿನವರು ಎಲ್ಲರೂ ಆ ರೀತಿ ಮಾಡುತ್ತಾರೆಂದು ನಾನು ಹೇಳುತ್ತಾ ಇಲ್ಲ. ಕಾಂಗ್ರೆಸ್ಸಿನಲ್ಲಿ ಸತ್ಪುರುಷರೂ ಇದ್ದಾರೆ.

ಶ್ರೀ ಟಿ. ಮರಿಯಪ್ಪ.—ಶ್ರೀ ಬಸವೇಗೌಡರು ಇದ್ದಾರೆ ಅವರನ್ನು ಕೇಳಿ, ನಾನು ಎಲ್ಲರನ್ನೂ ಕರೆಸಿಕೊಂಡು ಮಾತನಾಡಿದ್ದೇನೆ.

ಶ್ರೀ ಜಿ. ಎನ್. ಪುಟ್ಟಣ್ಣ.—ನಿಮ್ಮ ವಿಚಾರವನ್ನು ನಾನು ಹೇಳುತ್ತಾ ಇಲ್ಲ, ನಡೆಯತಕ್ಕ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ಮಂಡಲ ಕಾಂಗ್ರೆಸ್ಸಿಗೆ ಸರಕಾರೀ ಕೆಲಸ ಮುಗಿದ ಮೇಲೆ ಹೋಗಬಹುದು ಇದನ್ನೇ ಮಾಡಿ ಎಂದು ನಾನು ಹೇಳುವುದಿಲ್ಲ.

ಇನ್ನು ಎರಡನೆಯದಾಗಿ ಎಲ್. ಆರ್. ಪೋಡ್ ಮಾಡಿದ್ದೀರಿ. ಅದರಲ್ಲಿ ಯಾವ ಒಂದು ಪಾಲಿಸಿಯನ್ನೂ ಅನುಸರಿಸಿಲ್ಲ. 1888ನೆಯ ಇಸವಿಯಲ್ಲಿ ತೀರ್ಥಹಳ್ಳಿಯ ಭೀಮನಕಟ್ಟೆ ಮಠಕ್ಕೆ ರೆಕಾರ್ಡ್‌ಆಗಿ ರೈತರ ಜಮೀನನ್ನು ಮಠಕ್ಕೆ ಸೇರಿಸಿಕೊಟ್ಟರು. ಅದು ಇವೊತ್ತಿನವರೆಗೂ ಪೋಡ್ ಆಗಿಲ್ಲ. ನಾನು ಅಮಲ್ದಾರ್ ಆಗಿದ್ದಾಗ ನನಗೆಕೂಡ ಬಂದಿತ್ತು. ಜಮೀನು ಕೊಟ್ಟು 10ವರ್ಷಗಳಾದರೂ ಆ L.R. ಆಗುವುದಿಲ್ಲ. ಸರ್ವೆ ಡಿಪಾರ್ಟ್‌ಮೆಂಟ್ ಹೊಲಸು

ಆಗಿರುವಷ್ಟು ಇನ್ನು ಎಲ್ಲೂ ಆಗಿಲ್ಲ. ಎಲ್.ಆರ್. ಫೋಡ್ ಮಾಡಿದರೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಉತ್ಪತ್ತಿ ಖಂಡಿತಾ ಬರುತ್ತದೆ. ಸರ್ವೆ ಆಫೀಸಿನವರು ಈ ಕೆಲಸ ಮಾಡುವುದಕ್ಕೆ ಏನು ತೊಂದರೆ ಇದೆ? ಈಗ ಅಮಲ್ದಾರ್ ಎಂದರೆ Less than an ordinary clerk ಎಂದು ತಿಳಿದು ಕೊಂಡಿದ್ದಾರೆ. ಅವರಿಗೆ ಪವರೇ ಇಲ್ಲ. ನಾನು ಅಮಲ್ದಾರ್ ಆಗಿದ್ದಾಗ ಇದ್ದ ಪವರ್ಸ್‌ಅನ್ನೂ ಈಗ ಅಮಲ್ದಾರರಿಗೆ ಇರುವ ಪವರ್ಸ್ನೂ ನೋಡಿ ಕೊಂಡರೆ ಆಗ ಒಬ್ಬ ಅಮಲ್ದಾರನಿಗೆ ಇದ್ದ ಪವರ್ಸ್ ಈಗ ಮಂತ್ರಿಗಳಿಗೆ ಇಲ್ಲ.

ಒಬ್ಬ ಸದಸ್ಯರು.—ಪವರ್ಸ್ ಏನೂ ಕಡಮೆ ಇಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಆದರೆ ಮಂತ್ರಿಗಳ ಇಂಟರ್‌ಫಿಯರೆನ್ಸ್ ಜಾಸ್ತಿ.

ಶ್ರೀ ಟಿ. ಮರಿಯಪ್ಪ.—ನಿಮ್ಮ ಕಾಲದಲ್ಲಿ ಸಣ್ಣ ವಿಷಯಕ್ಕೂ ಗೌರ್ನಮೆಂಟಿಗೆ ಬರಬೇಕಾಗಿತ್ತು. We have delegated large part of the powers.

Sri G. N. PUTTANNA.—I do not agree. ಇಂಟರ್‌ಫಿಯರೆನ್ಸ್ ಜಾಸ್ತಿ. ನೀವು ಹೇಳಿದ ಹಾಗೆ ಕೇಳದಿದ್ದರೆ ಬಲಿ ಹಾಕುತ್ತೀರಿ. ನಿಮಗೆ ಎಷ್ಟು ಇಕ್ಸ್‌ಪೈನ್‌ಸೆಸ್‌ಕೊಡಲಿ, including Heads of the Departments. ನೀವು ಹೇಳಿದ ಹಾಗೆ ಕೇಳದೆ ಇದ್ದರೆ ಧಾರ್ವಾಡಕ್ಕೋ, ಇನ್ನು ಎಲ್ಲಿಗೋ ಟ್ರಾನ್ಸ್‌ಫರ್ ಮಾಡುತ್ತೀರಿ. ಅವನಿಗೆ ತೊಂದರೆಯಾಗುತ್ತದೆ. ಆ ವಿಷಯವನ್ನು ಹಿಂದೆ ಒಂದು ಸಾರಿ ಈ ಹೌಸ್‌ನಲ್ಲಿ ತಂದಿದ್ದೆ. ದಯವಿಟ್ಟು ಹಾಗೆ ಮಾಡಬೇಡಿ. ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿಯೂ, ಅಮಲ್ದಾರರಿಗೆ ಒಂದು ಟೆಲಿಫೋನ್‌ಕೊಡುವ ವ್ಯವಸ್ಥೆಯನ್ನು ದಯವಿಟ್ಟು ಮಾಡಿ. ಇಲ್ಲದೆ ಇದ್ದರೆ ಅಸಿಸ್ಟೆಂಟ್ ಕಮೀಷನರು ಏನಾದರೂ ಹೇಳಿ ಕಳುಹಿಸಿದರು ಎಂದರೆ ಹೋಗಬೇಕು. ಲ್ಯಾಂಡ್ ರೆಕಾರ್ಡ್ಸ್ ಸ್ಪೆಷಲ್ ಪ್ರೋಸೆಸ್ ಸರ್ವರ್ಸ್ ಎಂದು ಒಂದು ಹೋಬಳಿಗೆ ಇಬ್ಬರನ್ನು ಕೊಟ್ಟಿದ್ದೀರಿ. ಅವರು ಒಂದೊಂದು ತಾಲ್ಲೂಕಿಗೆ 4-8 ಜನ ಎಕ್ಸ್‌ಟ್ರಾ ಇರುತ್ತಾರೆ. ಈ ತರದ ಕಂಬರ್‌ಸಮ್ ಪ್ರೋಸೆಸ್ ಯಾವ ದೇಶದಲ್ಲಿಯೂ ಇಲ್ಲ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಅದನ್ನು ರೈತನ ತಲೆಯ ಮೇಲೆ ಮತ್ತು ನಮ್ಮ ತಲೆಯ ಮೇಲೆ ಹಾಕಿ ಟ್ಯಾಕ್ಸ್ ಹಾಕಿ ನಮ್ಮನ್ನು ಏತಕ್ಕೆ ಹಾಳುಮಾಡುತ್ತೀರಿ? ಪ್ರಿಂಟಿಂಗಿಗೆ ಎಷ್ಟಾಗುತ್ತದೆ? ಪೇಪರಿಗೆ ಎಷ್ಟಾಗುತ್ತದೆ, ಇಷ್ಟಾಗಿ The owner of the land does not pay land revenue.

ಫಾರೆಸ್ಟ್ ಮಿನಿಸ್ಟರು ದೈವವಶಾತ್ ಇವೊತ್ತು ಈ ಸಭೆಯಲ್ಲಿದ್ದಾರೆ. ಸೌತ್ ಕೆನರಾದಲ್ಲಿ ಬೇಕಾದಷ್ಟು ಗಂಧದ ಎಣ್ಣೆಯನ್ನು ತೆಗೆಯುತ್ತಾರೆ. ನಮ್ಮ ದೇಶದ ಮಲೆನಾಡು ಪ್ರಾಂತದಿಂದ ಸ್ಯಾಂಡಲ್ ಹೋಗುತ್ತದೆ. ಆ ಸ್ಯಾಂಡಲ್ ತೆಗೆದು ಚೂರುಮಾಡಿ ಅದಕ್ಕೆ ಸಗಣಿ ಬಗ್ಗಡ ಹಚ್ಚುತ್ತಾರೆ. ಹುಲ್ಲುಹಾಕಿ ಮೆಣಸಿನಕಾಯಿ ಮೂಟೆ ಸಗಣಿ ಜೊತೆಗೆ ಸೇರಿಸಿದರೆ ಗಂಧದ ವಾಸನೆ ಬರುವುದಿಲ್ಲ. ಈ ರೀತಿ ಗಂಧದ ಮರವನ್ನು ಸಾಗಿಸುವುದು ವಿಪರೀತವಾಗಿದೆ. ಇದು ಸುಳ್ಳು ಎಂದು ಹೇಳಿದೆ ನಾನು ಅದನ್ನು ಕಾಣೆ ಎಂದು ಫಾರೆಸ್ಟ್ ಆಫೀಸರುಗಳು ಹೇಳುತ್ತಾರೆ. ಇದನ್ನು ಬೇಕಾದರೆ ನಾನು ಹಿಡಿದುಕೊಡುತ್ತೇನೆ. ಸ್ಯಾಂಡಲ್ ವುಡ್‌ಅನ್ನು ಫಾರೆಸ್ಟ್‌ನಿಂದ ಕಟ್‌ಮಾಡಿಕೊಂಡು ಸ್ಮಗಲ್ ಮಾಡುತ್ತಾರೆ. ಅದನ್ನು ದಾಂಡೇಲಿಯಲ್ಲಿ ಪರೀಕ್ಷೆಮಾಡಿ ನೋಡಿ, ನಮ್ಮ ದೇಶದ ಸಂಪತ್ತು ವಿಪರೀತ ಸ್ಮಗಲ್ ಆಗುತ್ತಿದೆ. ಅದನ್ನು ನಿಲ್ಲಿಸುವುದು ನಿಮ್ಮ ಕರ್ತವ್ಯ. ನಾನು ಒಬ್ಬರ ಮೇಲೆ ಆರೋಪಣೆ ಮಾಡುವುದಿಲ್ಲ. ಬಂದೋಬಸ್ತು ಮಾಡಬೇಕು ಎಂದು ನಾನು ಹೇಳುವುದು. ಹಾರ್ಡ್‌ವುಡ್ ಕಡಮೆ ರೇಟಿಗೆ ಕೊಟ್ಟಿದ್ದಾರೆ. ಈಗ ಆಲದಮರ ಒಂದು ಘನ ಅಡಿಗೆ 5-6 ರೂಪಾಯಿ ಬೆಲೆ ಬಾಳುತ್ತಿತ್ತು, ಸೊಗಸಾದ ಮನೆಗಳಿಗೆ ಉಪಯೋಗಿಸುವ ಜಂಗಲ್ ವುಡ್ಡನ್ನು $1\frac{1}{4}$-$2\frac{1}{2}$ ರೂಪಾಯಿಗೆ ಕೊಟ್ಟಿದ್ದಾರೆ. ಅವರು ಲಕ್ಷಾಂತರ ರೂಪಾಯಿ ಸಂಪಾದನೆಮಾಡಿ ನಮಗೆ ಕ್ಷೌರ ಆಗುತ್ತಿದೆ. ಕೂಡಲೆ ಕಂಟ್ರೋಲ್ ಮಾಡಿ.

ಇನ್ನು ಸೇಲ್ಸ್ ಟ್ಯಾಕ್ಸ್ ವಿಷಯ 1951ನೆಯ ಇಸವಿಯಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಆಫೀಸರು 612 ಕೇಸ್‌ಗಳನ್ನು ಫೈಲ್‌ನಿಂದ ವಜಾ ಮಾಡಿದ್ದಾರೆ. ಅದರಪೈಕಿ 40-50 ಕೇಸುಗಳು under-assessment ಆಗಿವೆ. ಇದಕ್ಕೆ ರಿಪೋರ್ಟ್ ಆಗಿ ಸೇಲ್ಸ್‌ಟ್ಯಾಕ್ಸ್ ಕಮೀಷನರ್ ಅವನಿಗೆ ಸಿವಿಯರ್ ಪನಿಷ್‌ಮೆಂಟ್ ಕೊಡಬೇಕು ಎಂದು ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಿದರೆ, "ಅಂಥವರು ಅನೇಕರು ಇದ್ದಾರೆ, let all other cases be put up" ಎಂದು ವಾಪಸ್ ಆಯಿತು. ಇನ್ನೊಬ್ಬ ಅಸಿಸ್ಟೆಂಟ್ ಕಮೀಷನರಿಗೆ ಪನಿಷ್‌ಮೆಂಟ್ ಮಾಡಬೇಕು ಎಂದು ಇದ್ದದ್ದು ವಾಪಸ್ ಆಯಿತು. ಕಮೀಷನರು ಬರೆದ ರಿಪೋರ್ಟ್‌ಅನ್ನು ತನಿಖೆಮಾಡದೆ ಸರ್ಕಾರ ಅಂಥವರಿಗೆ ಪ್ರಮೋಷನ್ ಕೊಟ್ಟರೆ ಹೇಗೆ? ಮರಿಯಪ್ಪನವರಿಗೇ ಒಂದು ತರಹ, ಪುಟ್ಟಣ್ಣನವರಿಗೇ ಒಂದು ತರಹ ಮಾಡಿದರೆ, ಬಡವರಿಗೇ ಒಂದು ತರಹ ಆದರೆ ಇದರಲ್ಲಿ ಸತ್ಯವಿದೆಯೇ? ಇದಕ್ಕೆಲ್ಲಾ ಯಾರು ಜವಾಬ್ದಾರರೋ ಗೊತ್ತಿಲ್ಲ. ಚಿತ್ರದುರ್ಗ ಕೇಸಿನಲ್ಲಿ ಹೀಗೆ ಆಗಿದೆ ಎಂದು ಇನ್ನೊಬ್ಬ ಒಬ್ಬ ಸೇಲ್ಸ್‌ಟ್ಯಾಕ್ಸ್ ಆಫೀಸರ್ ಕಂಡುಹಿಡಿದು ನೋಟೀಸ್ ಕೊಟ್ಟತಕ್ಷಣ ಬಡಪಾಯಿ ಯಾವನನ್ನೋ ಚಾರ್ಜ್‌ಮಾಡಿ ಅವರನ್ನು ಸಸ್‌ಪೆನ್‌ಷನ್‌ನಲ್ಲಿ ಇಟ್ಟಿದ್ದಾರೆ. ಆ ರೀತಿ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆಯೇ? ಶ್ರೀ ಮರಿಯಪ್ಪನವರಿಗೆ 30 ಲಕ್ಷ ಟರ್ನ್‌ಓವರ್ ಆಗುತ್ತದೆ ಎಂದು ಇಟ್ಟುಕೊಳ್ಳೋಣ. ಅವರು ನಾಳೆದಿವಸ ಅಕೌಂಟ್ ಕೊಡುವುದಿಲ್ಲ. ಇನ್ನೊಬ್ಬರು 5 ಲಕ್ಷ ಟರ್ನ್‌ಓವರ್ ಆಗಿರುತ್ತದೆ ಅವರು ಅಕೌಂಟ್ಸ್ ಪ್ರೊಡ್ಯೂಸ್ ಮಾಡಿರುತ್ತಾರೆ. ನಿಮಗೂ ಸೇಲ್ಸ್ ಟ್ಯಾಕ್ಸ್ ಆಫೀಸರಿಗೂ ವಿಶ್ವಾಸ ಇದ್ದರೆ "In spite of registered notices, he has not produced accounts. I assess to the best of my judgement his turn over at one lakh of rupees of which Rs. 50,000 are assessable" ಎಂದು ಹೇಳುತ್ತಾನೆ. 30 ಲಕ್ಷ ಟರ್ನ್‌ಓವರ್ ಆಗಿರುವುದನ್ನು ಆ ರೀತಿ ಹಷ್‌ಅಪ್ ಮಾಡಿರುತ್ತಾನೆ. ಇಂಥಾ ನಿದರ್ಶನಗಳು ಎಷ್ಟೋ ಇವೆ. ಇದರಿಂದಾಗಿ ಮೈಸೂರುದೇಶದ ಮರ್ಚೆಂಟ್ಸ್ ಎಷ್ಟೋ ಉಳಿದುಕೊಂಡರು. ಹಾಗೆಯೇ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್‌ನಲ್ಲೂ ನಡೆಯುತ್ತಿದೆ.

6-30 P.M.

ಈಗ ರೈತನ ಮನೆ ಹಾಳಾಗುತ್ತಾ ಇದೆ. ಸಿಕ್ಕ ಸಿಕ್ಕಹಾಗೆ ತೆರಿಗೆ ಹಾಕುತ್ತಾ ಇದ್ದಾರೆ. ಎಷ್ಟೋ ಕೇಸುಗಳಲ್ಲಿ ಟ್ಯಾಕ್ಸನ್ನು ಅರ್ಧ ಎಕರೆ ಕಬ್ಬುಹಾಕಿದವರ ಮೇಲೂ ಸಹ ವಿಧಿಸಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಅರ್ಧ ಎಕರೆಯ ಮೇಲೆ ಹಾಕಿದ ನಿದರ್ಶನ ಕೊಡಿ. ಅದು ಡೆಪ್ಯೂಟಿ ಕಮೀಷನರಿಗೆ ಹೋಗುತ್ತದೆ. They will look in to the matter. ನೀವು ಯಾವುದೋ ಮೂರುವರ್ಷದ ಹಿಂದಿನಮಾತು ಹೇಳುತ್ತಾ ಇದ್ದೀರಿ.

ಶ್ರೀ ಜಿ. ಎನ್. ಪುಟ್ಟಣ್ಣ.—ಮೂರುವರ್ಷದ್ದಲ್ಲ, ಆರು ತಿಂಗಳ ಮಾತು, ಸ್ವಾಮಿ. ತುಮಕೂರು ತಾಲ್ಲೂಕು, ಬುಗಡನಹಳ್ಳಿ ಗ್ರಾಮದ ನರಸೇಗೌಡ ಎಂಬವನಿಗೆ ನೋಟೀಸ್ ಕೊಟ್ಟರು.

Sri T. MARIAPPA.—Please send particulars to me...

Sri G. N. PUTTANNA.—I need not send. You are the Government. You can call for it. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಇನ್‌ಸ್ಪೆಕ್ಟರು ನೋಟೀಸ್ ಕೊಟ್ಟರು. ರೆವಿನ್ಯೂ ಇನ್‌ಸ್ಪೆಕ್ಟರು, ಮೂರು ವರ್ಷ ಆಯಿತು ಅವನು ಸತ್ತುಹೋಗಿದ್ದಾನೆ ಎಂದು ಉತ್ತರ ಬರೆದರು. 'Some how see that he is served' ಎಂದು ಪುನಃ ಆರ್ಡರ್ ಹೋಯಿತು 500 ರೂಪಾಯಿ ಟ್ಯಾಕ್ಸ್ ಹಾಕಿದರು. ಅಪೀಲ್ ಹಾಕಿದ್ದೆ. ಈ ರೀತಿ ಆಗುತ್ತಾ ಇದೆ.

ಶ್ರೀ ಟಿ. ಮರಿಯಪ್ಪ.—ಯಾವುದೋ ಒಂದು solitary caseನ್ನು generalise ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಈ ರೀತಿ ತಾವು defend ಮಾಡಿದರೆ ತೂಕಡಿಸುವವರಿಗೆ ಹಾಸಿಗೆ ಹಾಸಿಕೊಟ್ಟಹಾಗಾಗುತ್ತದೆ.

Sri T. MARIAPPA.—If there is any long list, please give it. If not it will demoralise if you simply accuse.

Sri G. N. PUTTANNA.—I will give you specific instances. ವಿರೋಧ ಪಕ್ಷದವರು ಸುಳ್ಳು ಹೇಳುತ್ತೀರಿ ಎನ್ನುತ್ತೀರಿ. ನಾವು ಹೇಳುವುದು ಸರಿಯಲ್ಲ ಎಂದರೆ ನೀವೇ ತಿಳಿದುಕೊಳ್ಳಿ.

ಶ್ರೀ ಟಿ. ಮರಿಯಪ್ಪ.—ಇನ್‌ಕಂಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಎಂದರೆ ನಿಷ್ಠೂರದ ಡಿಪಾರ್ಟ್‌ಮೆಂಟ್. 40 ಲಕ್ಷರೂಪಾಯಿ ಲಾಭ ಮಾಡುವವರೂ 2 ಲಕ್ಷರೂಪಾಯಿ ಎನ್ನುತ್ತಾರೆ. ಆದುದರಿಂದ Under great difficulties they have to work.

Sri G. N. PUTTANNA.—I told you definitely. ಯಾವ ಯಾವ ಸೇಲ್ಸ್‌ಟ್ಯಾಕ್ಸ್ ಆಫೀಸರು ರೈಲ್ವೆ ಗೂಡ್ಸ್ ಷೆಡ್ಡುಗಳಲ್ಲಿ ಚೆಕಿಂಗ್ ಮಾಡಿದ್ದಾರೆ, ಕೇಳಿ? ಬೊಂಬಾಯಿನಿಂದ ಬೆಂಗಳೂರಿಗೆ ಬರುತ್ತಾರೆ. ಕಾರಿನಲ್ಲಿ ಡೈಮಂಡ್ ಇಟ್ಟುಕೊಂಡು ಬರುತ್ತಾರೆ. ಒಂದೊಂದು ಡೈಮಂಡು ಎಷ್ಟೋ ಸಾವಿರ ರೂಪಾಯಿ ಬೆಲೆ ಬಾಳುತ್ತದೆ. ನೀವು ಟ್ಯಾಕ್ಸ್ ಹಾಕಿದ್ದೀರಾ?

ಶ್ರೀ ಟಿ. ಮರಿಯಪ್ಪ.—ಇದನ್ನೆಲ್ಲಾ ಹಿಡಿಯ ಬೇಕಾದರೆ ಆ ಆಫೀಸರುಗಳು life ಸಹ ಅಷ್ಟೇ ಅಪಾಯದಿಂದ ಕೂಡಿರುತ್ತವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ತಾವು ಈ ರೀತಿ ಹೇಳುತ್ತಾಹೋದರೆ, ಖಂಡಿತವಾಗಿಯೂ ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ. ಕಂಡದ್ದು ಕಂಡಹಾಗೆ ಹೇಳಿದರೆ ಕೆಂಡದಂಥ ಕೋಪ ಅನ್ನುವ ಹಾಗೆ ಆಗಿದೆ.

ಶ್ರೀ ಟಿ. ಮರಿಯಪ್ಪ.—ನರಸೇಗೌಡನ ಕೇಸು ಏನಾಯಿತು ?

ಶ್ರೀ ಜಿ. ಎನ್. ಪುಟ್ಟಣ್ಣ.—ರಿಮ್ಯಾಂಡ್ ಆಯಿತು, ಕೇಸು ವಿಚಾರಣೆಯಲ್ಲಿದೆ.

Sri T. MARIAPPA.—*Sub judice.* It is much better if he does not speak on that.

ಶ್ರೀ ಜಿ. ಎನ್. ಪುಟ್ಟಣ್ಣ.—ಸ್ವಾಮಿ, ಅವರು ಲಾಯರು ಕೆಲಸ ಬಿಟ್ಟು 20 ವರ್ಷಗಳಾದವು. ಇದು ಎಲ್ಲರಿಗೂ ತಿಳಿದಿರುವ ವಿಷಯ. *Sub judice* ಎಂದರೆ ಏನು ಎಂಬುದು ನನಗೂ ಗೊತ್ತು. ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಆಗಲಿ ಇತರ ಡಿಪಾರ್ಟ್‌ಮೆಂಟಾಗಲಿ, it is not a judicial court. Enquiry ನಡೆಯುತ್ತಾ ಇದೆ.

ಶ್ರೀ ಟಿ. ಮರಿಯಪ್ಪ.—ವರ್ತಕರೇ ಡೈಮಂಡ್ ಸ್ಮಗಲ್ ಮಾಡುತ್ತಾರೆ ಎಂದು ಹೇಳಿದಿರಿ. ಮತ್ತೊಂದು ಸಾರಿ ಸರ್ಕಾರಿ ಆಫೀಸರ್ರು ಸರಿಯಾಗಿ ನೋಡುವುದಿಲ್ಲ ಎಂದು ಹೇಳುತ್ತೀರಿ.

ಶ್ರೀ ಜಿ. ಎನ್. ಪುಟ್ಟಣ್ಣ.—ಆಫೀಸರ್ರು ಸರಿಯಾಗಿ ಕೆಲಸ ಮಾಡಿದರೆ ಆ ರೀತಿ ಆಗುವುದಕ್ಕೆ ಅವಕಾಶವೇ ಇಲ್ಲ. ಸುಮ್ಮನೆ ಅಸೆಂಬ್ಲಿಹಾಲ್‌ನಲ್ಲಿ ಕುಳಿತುಕೊಂಡು ಉತ್ತರ ಕೊಡುವುದರಿಂದ ಪ್ರಯೋಜನವಿಲ್ಲ. ದೇಶದಲ್ಲಿ ಕರಪ್ಷನ್ ಜಾಸ್ತಿಯಾಗುತ್ತಿದೆ. At least "we will consider and note it" ಎಂದಾದರೂ ಹೇಳಿ.

ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಆಗಲಿ, ಅಥವಾ ಬೇರೆ ಯಾವುದಾದರು ಡಿಪಾರ್ಟ್‌ಮೆಂಟ್ ಆಗಲಿ Anti-corruption Department ನವರು ಮಾಡ ತಕ್ಕ ಎನ್‌ಕ್ವೈರಿಯನ್ನು ಆರು ತಿಂಗಳಿನಲ್ಲಿ ಮುಗಿಸಬೇಕು. ಆಕಾಲದಲ್ಲಿ ಆತನನ್ನು ಸಸ್ಪೆಂಡ್ ಮಾಡುತ್ತೀರಿ. ಕೆಲವರಿಗೆ ಸಬ್ಸಿಸ್ಟೆನ್ಸ್ ಅಲೋಯನ್ಸ್ ಕೊಡುತ್ತೀರಿ, ಕೆಲವರಿಗೆ ಕೊಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಈ ಎನ್‌ಕ್ವೈರಿ ಆರು ವರ್ಷಗಳವರೆಗೂ ಪೂರ್ತಿ ಆಗದೇ ನಡೆಯುತ್ತಲೇ ಇದೆ ಎನ್ನುವಂಥ ವಿಷಯವನ್ನು ಸರ್ಕಾರದ ಮುಂದೆ ಹೇಳಬೇಕಾಗಿದೆ. ಅದಕ್ಕೆ ಉದಾಹರಣೆ ಕೊಡುತ್ತೇನೆ.

Recovery of taxes ಬಹಳ ನಿಧಾನವಾಗುತ್ತಾ ಇದೆ.

Agricultural implements ಎಂದರೆ ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳನ್ನು ಹೈರ್ ಪರ್ಚೇಸ್ ಸಿಸ್ಟಂಮೇಲೆ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರು ಕೊಟ್ಟರು. ಅನೇಕ ಜನ ನಮ್ಮ ಕಾಂಗ್ರೆಸ್ ಸ್ನೇಹಿತರು ಅದನ್ನು ತೆಗೆದುಕೊಂಡರು. ಅವರಿಂದ ಬರಬೇಕಾದ ಸಾವಿರಾರು ರೂಪಾಯಿ ಬಾಕಿ ಬಿದ್ದಿದೆ, ವಸೂಲು ಮಾಡುತ್ತಾ ಇಲ್ಲ. I will state that the Government is responsible for that. If you can recover, recover it or write it off. Land Revenue ಕೂಡ ಹಾಗೆಯೇ.

ಶ್ರೀ ಟಿ. ಮರಿಯಪ್ಪ.—ಮುನಿಸಿಪಾಲಿಟಿಗಳಿಂದ ಎಷ್ಟು ಅರಿಯರ್ಸ್ ನಿಂತಿದೆ, ಇಂಡಿವಿಜ್ಯುಯಲ್ಸ್ ನಿಂದ ಎಷ್ಟು ಅರಿಯರ್ಸ್ ನಿಂತಿದೆ ಎಂಬ ಪಟ್ಟಿಕೊಡಿ.

ಶ್ರೀ ಪಿ. ಎನ್. ಪುಟ್ಟಣ್ಣ.—ಏನು ಸಾರ್ಥಕ ? ಪಟ್ಟಿ ಕೊಡಿ ಎಂದು ಕುತ್ತಿಗೆ ಹಿಡಿದು ಕೊಂಡಹಾಗೆ ಮಾಡುತ್ತಾ ಇದ್ದೀರಿ. ಅದನ್ನು ನೀವೇ ಮಾಡುತ್ತ ಇರುವುದು. You take drastic action and recover. What is the use of my giving a 'patti' ? You have got the printing press. You print and distribute it. But what is the final result ? ಪಟ್ಟಿಕೊಡಲಿಲ್ಲ ಎನ್ನುತ್ತೀರಿ. ಒಂದು ಮಾತನ್ನು ಮಾತ್ರ ಒಪ್ಪಿಕೊಳ್ಳಿ. ನಾನು ಯಾವುದೋ ಒಂದು ಉದ್ದೇಶವನ್ನಿಟ್ಟುಕೊಂಡು ಮಾತನಾಡುತ್ತಿಲ್ಲ. I am giving you certain information and you may take that for what it is worth.

ಮತ್ತೊಂದು ರೋಡ್ ಟ್ರಾನ್ಸ್‌ಪೋರ್ಟ್ ಮತ್ತು ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟ್ ವಿಷಯ. ಲಾರಿಗಳಿಗೆ 12 ಅಡಿ ಎತ್ತರದವರೆಗೂ ಲೋಡ್ ಮಾಡಬಹುದು ಎಂದು ಬೊಂಬಾಯಿ ಪ್ರಾಂತದಲ್ಲಿ ಇದೆ. ಮೈಸೂರು ಸ್ಟೇಟಿನಲ್ಲಿ 14-15 ಅಡಿ ಎತ್ತರದವರೆಗೂ ಲೋಡ್ ಮಾಡುತ್ತಾರೆ. ಇದು ಶೋಚನೀಯವಾದ ವಿಷಯ. ಮಧ್ಯರಸ್ತೆಯಲ್ಲಿ ಲಾರಿ ಬಿಡುತ್ತಾರೆ ಇತರ ವಾಹನಗಳಿಗೆ ದಾರಿ ಕೊಡುವುದಿಲ್ಲ. ರವಷ್ಟು ಎಡಕ್ಕೆ ಹೋದರೆ ಮರದ ಕೊಂಬೆ ಹೊಡೆಯುತ್ತದೆ. ಅದನ್ನು ಕತ್ತರಿಸಿ, ರೋಡ್ clear ಮಾಡಿ ಟ್ರಾಫಿಕ್ಕಿಗೆ ಅನುಕೂಲ ಕೊಡಬಹುದು ಮತ್ತು ಕತ್ತರಿಸಿದ ಮರವನ್ನು ಹರಾಜು ಹಾಕಿದರೆ ಲಕ್ಷಾಂತರ ರೂಪಾಯಿ ವರಮಾನ ಬರುತ್ತದೆ. ಬೆಂಗಳೂರು ತುಮಕೂರು ರಸ್ತೆಯಲ್ಲಿ ನಾವು ಕಣ್ಣಾರ ಕಂಡಹಾಗೆ ಈ ಲಾರಿಗಳು ರಸ್ತೆ ಪಕ್ಕಕ್ಕೆ ಸರಿದಾಗ ಎತ್ತು ಗಾಡಿ ಮುಗುಚಿಕೊಂಡು ಎತ್ತುಗಳು ಸತ್ತು ಹೋದದ್ದನ್ನು ನೋಡಿದ್ದೇನೆ. ಚೀಫ್ ಮಿನಿಸ್ಟರಿಗೆ 7-8 ಕಾಗದಗಳನ್ನು ಬರೆದೆ. ಐ. ಜಿ. ಪಿ. ಅವರಿಗೆ ಬರೆದೆ. ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಕೊಂಬೆ ಕತ್ತರಿಸಿ, ರಸ್ತೆ clear ಮಾಡಿಸಿ. ನಿಮಗೇನೋ ನಾನು ಹೇಳುವುದನ್ನು ಕೇಳಿ ನಗು ಬರಬಹುದು. ಒಂದು ಜೊತೆ ಎತ್ತೂ ಗಾಡಿಯೂ ಹೋದರೆ ರೈತ ಉಳಿಯುತ್ತಾನೆಯೆ ? 70-80 ಸಾವಿರ ರೂಪಾಯಿ ಬೆಲೆ ಬಾಳತಕ್ಕ ಸರ್ಕಾರಿ ಬಸ್ಸಿಗೆ ನಷ್ಟವಾಗುತ್ತದೆ. ಇದನ್ನು ಕಣ್ಣುಬಿಟ್ಟು ನೋಡುತ್ತೀರಾ ? ಇಲ್ಲ. Bus came, Bus went ಇಷ್ಟೇ ? ದಯವಿಟ್ಟು ನೋಡಿ. ಹೆಚ್ಚು ಹೇಳಬೇಕಾಗಿಲ್ಲ. 1958 ನೆಯ ಇಸವಿಯಲ್ಲಿ ರೇಟ್ಸ್ ಜಾಸ್ತಿಮಾಡಿದ್ದಿರಿ. ಇವೊತ್ತಿನವರೆಗೂ ಜಾರಿಗೆ ಕೊಡಲಿಲ್ಲ, ಇವೊತ್ತು ಜಾರಿಗೆ ಕೊಟ್ಟಿರಿ. ಸಚಿವರ ಮೇಲೆ ನಮ್ಮ ಆಕ್ಷೇಪಣೆಯಿಲ್ಲ. ಪರಿಣಾಮ ಏನಾಗಿದೆ ಎಂಬುದನ್ನು 9-10 ಜನ ಸಚಿವರು ಇದ್ದೀರಿ, ರವಷ್ಟು ನೋಡಿ. ಎಲ್ಲಾ ಬಸ್ಸುಗಳೂ ಖಾಲಿಬರುತ್ತವೆ. Fare ಜಾಸ್ತಿ ಆದ ಮೇಲೆ ಎಲ್ಲರೂ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಬಸ್ಸಿಗೆ ಬರುತ್ತಾ ಇದ್ದ ಉತ್ಪತ್ತಿ ಹೋಯಿತು.

ಅಧ್ಯಕ್ಷರು.—ರೇಟುಗಳನ್ನು ಯೂನಿಫಾರ್ಮಾಗಿ ಮಾಡಬೇಕೆಂದು ನೀವು ಹೇಳುತ್ತೀರಲ್ಲವೆ ?

ಶ್ರೀ ಪಿ. ಎನ್. ಪುಟ್ಟಣ್ಣ.—ಯೂನಿಫಾರ್ಮ್ ರೇಟು ಮಾಡಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈಗ ಏನಾಗಿದೆ ಎಂದರೆ ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಬಸ್ ರೇಟು ಹೆಚ್ಚಾಗಿದ್ದಿತು. ಆದುದರಿಂದ ಹಳೆಯ ಮೈಸೂರಿನಲ್ಲಿ ರೇಟನ್ನು ಹೆಚ್ಚು ಮಾಡಲಾಗಿದೆ. ರೈತಾಪಿ ಜನರಿಗೆ ಇಷ್ಟು ಹೆಚ್ಚು ರೇಟು ಕೊಡುವುದಕ್ಕಾಗುತ್ತದೆಯೇ ಎಂಬುದನ್ನು ಆಲೋಚನೆ ಮಾಡಿ ನೋಡಬೇಕು. ರೇಟನ್ನು ಹೆಚ್ಚು ಮಾಡಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಈಗ ಉತ್ಪತ್ತಿ ಜಾಸ್ತಿಯಾಗಿದೆಯೇ ಕಡಮೆಯಾಗಿದೆಯೇ ಎನ್ನುವುದನ್ನು ಆಲೋಚಿಸಬೇಕು. ಸಾಮಾನ್ಯವಾಗಿ ಈಗ Administration ನಲ್ಲಿ top heavy expenditure ಇದೆ. ಹೀಗೆ ಖರ್ಚು ಜಾಸ್ತಿಯಾಗಿರುವುದರಿಂದ ನಷ್ಟ ಉಂಟಾಗುತ್ತಿದೆ. ಆಫೀಸರುಗಳು ಹೆಚ್ಚಾಗಿ ಇದ್ದಾರೆ. ಅಧಿಕಾರಿಗಳಿಗೆ ಜಾಸ್ತಿ ಸಂಬಳ ಕೊಡಬೇಕಾಗುತ್ತದೆ. ಕೆಲವು ಕಡೆ ವಿನಾಕಾರಣವಾಗಿ ಚೆಕಿಂಗ್ ಆಫೀಸರುಗಳು ಇದ್ದಾರೆ. ಕಂಡಕ್ಟರ್ಸ್‌ಗಿಂತಲೂ ಚೆಕಿಂಗ್ ಆಫೀಸರುಗಳೇ ಹೆಚ್ಚಾಗಿದ್ದಾರೆ. ಈ ರೀತಿ heavy expenditure ಇಟ್ಟಿರುವುದರ ಮೂಲಕ ದೇಶಕ್ಕೆ ಖರ್ಚು ಜಾಸ್ತಿಯಾಗುತ್ತಿದೆ. ಇನ್ನೊಂದು ವಿಚಾರ. ಮೂರು ತಿಂಗಳುಗಳವರೆಗೆ ಲೋಕಲ್ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಲಾಗುತ್ತಿದೆ. ಮೂರು ತಿಂಗಳು ಆದ ನಂತರ ಪುನಃ ಅವರಿಂದಲೇ ಅಪ್ಲಿಕೇಷನ್ ತೆಗೆದುಕೊಂಡು ಅವರನ್ನೇ ಮತ್ತೆ ಟೆಂಪರರಿಯಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಈ ರೀತಿ ಮಾಡುವ ಅವಶ್ಯಕತೆ ಏನಿದೆ ? ನಾನು ಒಂದು ಮಾತನ್ನು ಹೇಳುತ್ತೇನೆ. ರೇಟು ಜಾಸ್ತಿ ಮಾಡಿರುವುದರಿಂದ ಸರಕಾರಕ್ಕೆ ಉತ್ಪತ್ತಿ ಏನಾದರು ಜಾಸ್ತಿಯಾಗಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ನೋಡಬೇಕು.

ಅಧ್ಯಕ್ಷರು.—15 ಸಾವಿರ ರೂಪಾಯಿ ಉತ್ಪತ್ತಿ ಜಾಸ್ತಿಯಾಗಿದೆ ಎಂದು ಮಾನ್ಯ ಸಚಿವರಾದ ಶ್ರೀ ಕೆ. ಎಫ್. ಪಾಟೀಲ್ ಅವರು ಹೇಳಿದ್ದಾರೆ.

ಶ್ರೀ ಪಿ. ಎನ್. ಪುಟ್ಟಣ್ಣ.—ನಾನು ಹೇಳುತ್ತಿರುವುದರ ಉದ್ದೇಶ, ಸರಕಾರದವರ ಉದ್ದೇಶ ಎರಡೂ ಒಂದೇ ಆಗಿವೆ. ನಾನು ಸುಮ್ಮನೆ ಟೀಕೆ ಮಾಡುವುದಿಲ್ಲ. ನಾನು ಹೇಳುತ್ತಿರುವುದು, whether it is right or wrong ಎಂಬುದನ್ನು ಯೋಚನೆ ಮಾಡಿ ಎಂದು ಹೇಳುತ್ತಿದ್ದೇನೆ.

ಮೊನ್ನೆಯ ದಿವಸ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಶ್ರೀ ಷಂಶುದ್ದೀನವರು ಸೇಲ್ಸ್ ಟ್ಯಾಕ್ಸ ಬಗ್ಗೆ 15-20 ಸಾವಿರ ರೂಪಾಯಿ ಬಾಕಿ ಉಳಿದಿದೆ ಎಂದು ಹೇಳಿದರು. ಕಳೆದ ಹತ್ತು ಹದಿನೈದು ವರ್ಷಗಳಿಂದ ಈ ಬಾಕಿ ಬರತಕ್ಕ ಹಣವನ್ನು ಏಕೆ ವಸೂಲು ಮಾಡಲಿಲ್ಲ ? ಹಣ ವಸೂಲು ಆಗದ ಹಾಗೆ ಇದ್ದರೆ write off ಏಕೆ ಮಾಡಲಿಲ್ಲ ? ಅದೇ ರೀತಿಯಾಗಿ ಎಕ್ಸೈಜ್ ಅರಿಯರ್ಸ್ 2,25,000 ರೂಪಾಯಿ ಇದೆ ಎಂದು ಹೇಳಿದ್ದಾರೆ. ಇದರಿಂದ ಸರಕಾರಕ್ಕೆ ಎಷ್ಟು ಲುಕ್ಸಾನಾಗುತ್ತಿದೆ ? ರೈಟ್ ಆಫ್ ಏತಕ್ಕೆ ಮಾಡಬಾರದಾಗಿತ್ತು ? ಇನ್ನೂ ಒಂದು ಆಶ್ಚರ್ಯದ ಸಂಗತಿ ಯೇನೆಂದರೆ, ಒಮ್ಮೆ ಕೇಳಿದರೆ ಹತ್ತು ಸಾವಿರ ರೂಪಾಯಿ ರೈಟ್ ಆಫ್ ಮಾಡಿದ್ದೇವೆಂದು ಹೇಳುತ್ತಾರೆ. ಅದೇ ವಿಷಯವನ್ನು ಬೇರೆ ರೀತಿಯಿಂದ ಕೇಳಿದರೆ, no remission, write off ಏನೂಮಾಡಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನನ್ನ ಹತ್ತಿರ ಈ ಉತ್ತರಗಳು ಇವೆ, ಬೇಕಾದರೆ ನಿಮಗೆ ತಂದು ತೋರಿಸುತ್ತೇನೆ. ಇಬ್ಬರು ಮಂತ್ರಿಗಳ ಉತ್ತರ ಒಂದಕ್ಕೊಂದು ವಿರೋಧವಿದೆ.

ಇನ್ನು P.W.D. ವಿಚಾರ ಹೇಳುವುದಾದರೆ, ಯಾವ ರೋಡ್ ಸರಿಯಾಗಿದೆ ಎಂದು ನಾನು ಕೇಳುತ್ತೇನೆ, ಯಾವ ರೋಡನ್ನು ತೆಗೆದುಕೊಂಡರೂ ಅದರ ಪರಿಸ್ಥಿತಿ ಚಿಂತಾಜನಕವಾಗಿದೆ. ಮಂತ್ರಿಗಳು ಹೋಗಸಾದ

(ಶ್ರೀ ಜಿ. ಎನ್. ಪುಟ್ಟಣ್ಣ)

ಒಳ್ಳೆಯ ಸ್ಪ್ರಿಂಗ್ಸ್ ಇರುವ ಕಾರಿನಲ್ಲಿ ಕುಳಿತ ಪ್ರವಾಸ ಮಾಡುತ್ತಿರುವುದರಿಂದ ರೋಡ್ಸ್ ಎಷ್ಟು ಕೆಟ್ಟಿವೆ ಎಂಬುದು ಅವರಿಗೆ ಗೊತ್ತಾಗುವುದಿಲ್ಲ, ರಸ್ತೆಗಳ ಸ್ಥಿತಿ ಏನಾಗಿದೆ ಸ್ವಲ್ಪನೋಡಿ, ಹರಿಹರವರೆಗೆ ಇರುವುದು ನ್ಯಾಷನಲ್ ಹೈವೇ ಎಂದು ಹೇಳಲಾಗುತ್ತದೆ. ಈ ರೋಡಿನಲ್ಲಿಯೂ ಸಹ ಟ್ರಾಫಿಕ್ಕಿಗೆ ಸರಿಯಾದ ಅವಕಾಶವಿಲ್ಲ, ಹರಿಹರದ ಆಚೆಗೆರೋಡಿನ ಅಗಲ ಬಹಳ ಕಡಮೆ ಇದೆ. ಕ್ರಾಸ್ ಟ್ರಾಫಿಕ್ಕಿಗೆ ಅನುಕೂಲವೇ ಇಲ್ಲ, ಒಡ್ಡರ ಬಂಡಿ ಹೋಗುವ ರೋಡ್‌ಆಗಿದೆ.

ಶ್ರೀ ಟಿ. ಮರಿಯಪ್ಪ.—ಸ್ವಾಮಿ, over night ನಲ್ಲಿ ಎಲ್ಲಾ ಸುಧಾರಣೆಗಳನ್ನು ಮಾಡಬೇಕೆಂದು ಹೇಳಿದರೆ ಅದು ಹೇಗೆ ಸಾಧ್ಯ? ಎಲ್ಲದಕ್ಕೂ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಬೇಕಾದರೆ ಬೆಂಗಳೂರು ಬಳ್ಳಾರಿ ರೋಡ್ ನೋಡಿ ಅದು ಎರ್ಕ್‌ರೋಡ್ ಆಗಿದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಒಟ್ಟಿನಲ್ಲಿ ನಾನು ಹೇಳುವುದೇನಂದರೆ, ರೋಡ್ ಸ್ಥಿತಿ ಬಹಳ ಕನಿಕರವಾಗಿದೆ. ರೋಡ್‌ಗಳು hopeless condition ನಲ್ಲಿವೆ ಎಂದು ಹೇಳುತ್ತೇನೆ. ಕಂಟ್ರಾಕ್ಟರುಗಳು ದುಡ್ಡು ತೆಗೆದುಕೊಂಡು ಬಿಡುತ್ತಾರೆ ಆದರೆ ಕೆಲಸವನ್ನು ಸರಿಯಾಗಿ ಮಾಡುವುದಿಲ್ಲ. ಇಂಥ ಅನೇಕ ವಿಚಾರಗಳು ನನ್ನಗಮನಕ್ಕೆ ಬಂದಿವೆ, ನನಗೆ ಗೊತ್ತಿವೆ. ಸ್ವಾಮಿ, ಇನ್ನೊಂದು ವಿಷಯ, ಹೊಸ ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾಗಿರುವ integrated area ನೋಡುವುದಕ್ಕೆ ನಾನು ಹೋಗಿದ್ದೆನು, ಹೈದರಾಬಾದ ಪ್ರದೇಶದಲ್ಲಿ ಬಾವಿಗಳನ್ನು ತೆಗೆದಿದ್ದಾರೆ, ಆದರೆ ನೀರನ್ನು ಮೇಲಕ್ಕೆ ತೆಗೆಯುವುದಕ್ಕೆ ಬಾವಿಗಳಿಗೆ ಪುಲ್ಲೀಸ್ ಹಾಕಿರುವುದಿಲ್ಲ, ಹೀಗೆ ಮಾಡಿದರೆ ಜನರು ಏನು ಮಾಡಬೇಕು ? ಪುಲ್ಲೀಸ್ ಇಲ್ಲದ ಬಾವಿಗಳಿಂದ ಏನು ಉಪಯೋಗವಾಗ ತ್ತದೆ ?

ಶ್ರೀ ಟಿ. ಮರಿಯಪ್ಪ.—ವಿಲೀನೀಕರಣವಾದ ಹೊಸ ಪ್ರದೇಶದಲ್ಲಿ ಎಷ್ಟೊಂದು ಕೆಲಸಗಳು ನಡದಿವೆ, ಎಷ್ಟು ರೋಡ್ಸ್, ಬಾವಿಗಳನ್ನು ಮಾಡಲಾಗಿದೆ, ಆ ಪ್ರದೇಶಕ್ಕೆಷ್ಟೇ ಜಾಸ್ತಿ ಹಣವನ್ನು ಖರ್ಚುಮಾಡಲಾಗುತ್ತಿದೆಂದು ನಿಮ್ಮ ವಿರೋಧ ಪಕ್ಷವುಆರೋಪಿಸುತ್ತದಲ್ಲಾ ?

ಶ್ರೀ ಜಿ. ಎನ್. ಪುಟ್ಟಣ್ಣ.—ಸ್ವಾಮಿ,ನಾನು ಒಂದು ಮಾತನ್ನು ಹೇಳುತ್ತೇನೆ, ನಾನು ಬಿಜಾಪುರ ವಗ್ಯೆರೆ ಸ್ಥಳಗಳಿಗೆ ಹೋದಾಗ್ಗೆ ಕಣ್ಣಿನಿಂದ ನೋಡಿದ್ದೇನೆ, ಅಲ್ಲಿಯಬಾವಿಗಳು 60ರಿಂದ 80ಅಡಿ ಆಳವಾಗಿದೆ,ನೀರು ತೆಗೆಯುವುಧು ಎಷ್ಟು ಕಷ್ಟ! ಅಲ್ಲಿಯ ಜನರು ಎಷ್ಟು ಹಿಂದುಳಿದಿದ್ದಾರೆ! ಅವರಿಗೆ ಶಿಕ್ಷಣದ ಸೌಕರ್ಯವಿಲ್ಲ. ಅವರಿಗೆ ಎಂಥ ದ್ರೋಹವಾಗುತ್ತಿದೆ! ನಾನು ಸ್ವತಃ ಅಲ್ಲಿಯ ಡೆಪ್ಯೂಟಿ ಕಮೀಷನರರಿಗೆ ಈ ಕೆಲಸಗಳನ್ನೆಲ್ಲಾ ಮಾಡಿಸಿಕೊಡಬೇಕೆಂದು ಹೇಳಿದ್ದೇನೆ, ಜನರನ್ನು ಭೇಟಿಯಾಗಿ ಅವರಿಗೂ ಹೇಳಿದ್ದೇನೆ, ಎಲ್ಲರಿಗೂ ತಿಳಿಸಿದ್ದೇನೆ.

ಒಬ್ಬ ಸದಸ್ಯರು.—ಒಂದು ಪ್ರೆಸ್ ಕಾನ್ಫರನ್ಸ್ ಮಾಡಬೇಕಾಗಿತ್ತು. ಅಂದರೆ ಚೆನ್ನಾಗಿತ್ತು.

ಶ್ರೀ ಜಿ. ಎನ್. ಪುಟ್ಟಣ್ಣ.—ಪ್ರೆಸ್‌ಕಾನ್ಫರನ್ಸ್ ಮಾಡುವುದಕ್ಕೆ ನಾನೇನೂ ಮಿನಿಸ್ಟರ್ ಆಗಿಲ್ಲವಲ್ಲ.

ಇನ್ನೊಂದು ವಿಚಾರ ಮಾಜಿಮಂತ್ರಿಗಳು ವಿದ್ಯಾವಂತರು, ಬಹಳ ಬುದ್ಧಿವಂತರು, ವರ್ಷ ಎರಡುವರ್ಷ ಮಂತ್ರಿಗಳಾಗಿರುತ್ತಾರೆ. ಕಾರಣಾಂತರದಿಂದ ಆ ಪದವಿಯನ್ನು ಬಿಟ್ಟರೂ ಈ ಸಭೆಯ ಸದಸ್ಯರಾಗಿರುತ್ತಾರೆ, ಅವರು ತಮ್ಮ ಅಗಾಧವಾದ ಅನುಭವದಿಂದ ಎಷ್ಟೋ ಒಳ್ಳೆಯ ಸಲಹೆಗಳನ್ನು ನೀಡಬಹುದು. ಆದರೆ ಅವರು ಇಲ್ಲಿ ಹೆಚ್ಚಾಗಿ ಮಾತನಾಡದೆ ತಮ್ಮ ಪಕ್ಷದ ಸಭೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಾರೆ. ಇದು ಸರಿಯಲ್ಲ. ಅವರು ಈ ಸಭೆಯಲ್ಲೇ ಸಲಹೆಕೊಟ್ಟರೆ ಅವರ ಅನುಭವದಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ.

ಶ್ರೀಮಾನ್ ಲಿಂಗಾರೆಡ್ಡಿಯವರು ಇಲ್ಲಿಲ್ಲ, ಅವರು ತಿಂಗಳಲ್ಲಿ 30 ದಿವಸವೂ ಪ್ರವಾಸಮಾಡಿದರೆ ದೇಶಕ್ಕೆ ನಷ್ಟವಾಗುತ್ತದೆಂದು ಶ್ರೀ ನಾಗೂರ್‌ರವರು ಹೇಳಿದರು. ಒಳ್ಳೆಯ ಕೆಲಸ ಮಾಡಬೇಕೆಂಬ ಅಭಿಲಾಷೆ ಶ್ರೀಲಿಂಗಾರೆಡ್ಡಿಯವರಿಗಿದೆ. ಆದರೆ ಒಂದೇ ದಿವಸ ಕೋಲಾರಕ್ಕೆ ಜಾಗ್ರತೆ ಹೋಗಿ ಅವತ್ತಿನ ದಿವಸವೇ ವಾಪಸು ಬಂದರೆ ಪ್ರಯೋಜನವಿಲ್ಲ. ಇಂಥಾದ್ದನ್ನು ಒಪ್ಪುವುದಕ್ಕಾಗುವುದಿಲ್ಲ. ಅದಕ್ಕೆ ಬದಲಾಗಿ ಒಂದೊಂದು ಡಿಸ್ಟ್ರಿಕ್ಟಿನಲ್ಲೂ ಎಂಟು ಹತ್ತು ದಿವಸಗಳವರೆಗೆ ಕ್ಯಾಂಪ್‌ಮಾಡಿ ತಪಶೀಲಾಗಿ ತನಿಖೆ ಮಾಡುವುದು ಸೂಕ್ತ.

ಎನ್. ಇ. ಎಸ್. ನಲ್ಲಿ ಆಫೀಸರುಗಳಿಗೆ ಮನೆ ಸೌಕರ್ಯ ಮಾಡಿಕೊಡಬೇಕು. ಅಲ್ಲಿ ಸರಿಯಾಗಿ ಕೆಲಸ ಮಾಡಿಸದಿದ್ದರೆ ನೀರಲ್ಲಿ ಬೆರಳಿಟ್ಟು ಚೀಪಿದ ಹಾಗಾಗುತ್ತದೆ. ಈಗಿರುವಂತೆ ಈ ಸ್ಕೀಮು ಸರಿಯಾಗಿಲ್ಲವೆಂದು ಹುಡುಗರೆಲ್ಲಾ ಕೂಗುತ್ತಾರೆ N.E.S. ಎಂದರೆ "ನ್ಯೂ ಅರ್ನಿಂಗ್ ಸ್ಕೀಂ" ಫಾರ್ ಕಾಂಗ್ರೆಸ್‌ಮೆನ್ ಎಂದು ವಿದ್ಯಾರ್ಥಿಗಳೆಲ್ಲ ಹೀಯಾಳಿಸುತ್ತಿದ್ದಾರೆ.

ಒಂದೊಂದು ಕೋರ್ಟಿನ ಬಳಿಯೂ ಪ್ರತಿದಿನ 300–400 ಜನರು ಬಂದು ಬೆಳಗಿನಿಂದಸಾಯಂಕಾಲದವರೆಗೂ ಒದ್ದಾಡುತ್ತಾರೆ. ನಮ್ಮ ದೇಶದಲ್ಲಿರುವ ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟಿಸ್‌ನಲ್ಲಿ ಬಹಳ ಕಷ್ಟವಿದೆ, 10—15 ಮೈಲಿಗಳಿಂದ ರೈತರುಬಸ್ಸಿನಲ್ಲಿ ಛಾರ್ಜುಕೊಟ್ಟು ಕೋರ್ಟುಗಳಿಗೆ ಬರುತ್ತಾರೆ, ಅಡ್ಜರ್ನ್‌ಮೆಂಟ್ ಕೊಡುವುದೇ ಕಷ್ಟ. ಮುನ್ಸೀಫ್ ಮ್ಯಾಜಿಸ್ಟ್ರೇಟ್ ಎರಡು ಗಂಟೆಗೆ ಮುಂಚೆ ಅಡ್ಜರ್ನ್ ಮಾಡಿದರೆ ಹೈಕೋರ್ಟಿನಿಂದ ಅಬ್ಜೆಕ್ಷನ್ ಬರುತ್ತದೆಯೆಂದು ಹೇಳುತ್ತಾರೆ, ಐದು ಗಂಟೆಯವರೆಗೆ ಅಡ್ಜರ್ನ್‌ಮೆಂಟ್‌ಗಾಗಿ ರೈತರು ಕಾಯಬೇಕು, ಹೊತ್ತಾದರೆ ಬಸ್ಸಾಗಲಿ, ರೈಲಾಗಲಿ ಸಿಕ್ಕುವುದಿಲ್ಲ. ಹೀಗಾದರೆ ರೈತರಿಗೆ ಎಷ್ಟುಕಾಲ ಹರಣವಾಗುತ್ತದೆ, ಅವರ ಕೆಲಸಕ್ಕೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಗಮನಿಸಿ ದಯವಿಟ್ಟು ಹೈಕೋರ್ಟಿನವರೂ ನೀವೂ ಎಲ್ಲಾ ಸೇರಿ ಸಮಾಲೋಚಿಸಿ ಸರಿಯಾದ ವ್ಯವಸ್ಥೆಮಾಡಬೇಕು.

Black market ಮಾಡುವವರು ಲಂಚತೆಗೆದುಕೊಳ್ಳುವವರು ನಮಗಿಂತ ಬುದ್ಧಿವಂತರು ಯಾರ ಕೈಗೂ ಸಿಕ್ಕದಂತೆ ತೆಗೆದುಕೊಳ್ಳುತ್ತಾರೆ ಎಂದು ಶ್ರೀ ಚನ್ನಬಸಪ್ಪನವರು ಹೇಳಿದರು. ಅವರು ಚಾಪೆಕೆಳಗೆ ತೂರಿದರೆ ರಂಗೋಲಿ ಕೆಳಗೆ ತೂರುವ ಬುದ್ಧಿ ಸರ್ಕಾರಕ್ಕೆ ಬೇಕು. ಒಳ್ಳೆಯ ಆಫೀಸರುಗಳೂ ಅನೇಕರಿದ್ದಾರೆ, ದೇಶಸೇವೆಗಾಗಿ ದುಡಿಯುವವರಿದ್ದಾರೆ, ತಮಗೆ ಸಂಬಳ ಸರಿಯಾಗಿ ಕೊಡದಿದ್ದರೂ ತಮ್ಮ ಕರ್ತವ್ಯವನ್ನು ನೆರವೇರಿಸುವವರಿದ್ದಾರೆ, ಲಕ್ಷಗಟ್ಟಲೆಲಂಚ ಹೊಡೆದುಕೊಂಡು ಮನೆಗೆ ಹೋಗುವವರೂ ಇದ್ದಾರೆ.ಸರ್ಕಾರದ ಆಡಳಿತದಲ್ಲಿ ಬಹಳನ್ಯೂನತೆಯಿದೆ ಮಂತ್ರಿಗಳ ಮಗ ಅಮಲ್ದಾರನಾಗಿದ್ದರೆ ಆತನನ್ನು ಬೆಂಗಳೂರಿಗೆ ಹತ್ತಿರ ಬೇಕಾದ ಕಡೆಗೆ ಹಾಕುತ್ತಾರೆ. ಅನಾಥರನ್ನು ಗುಲ್‌ಬರ್ಗ [illegible]ಂತಾದ ದೂರ ಪ್ರದೇ

ಶಕ್ಕೆ ಹಾಕುತ್ತಾರೆ. ಹೀಗೆ ನೌಕರರನ್ನು ಬಹುದೂರದ ಸ್ಥಳಗಳಿಗೆ ವರ್ಗಮಾಡುವುದು ಸರಿಯಲ್ಲ. ಇಂದು ಈ ವಿಚಾರದಲ್ಲಿ ನೌಕರರಲ್ಲಿ ಬಹಳ ಅತೃಪ್ತಿಯಿದೆ. ನೂರು ರೂಪಾಯಿಗಳಿಗಿಂತ ಕಡಮೆ ಸಂಬಳವಿರುವ ಬಡನೌಕರರನ್ನು ಬೆಂಗಳೂರಿನಿಂದ ಗುಲ್ಬರ್ಗ ಮುಂತಾದ ದೂರ ಪ್ರದೇಶಗಳಿಗೆ ಹಾಕಿದರೆ ಅವರು ಜೀವನ ಮಾಡುವುದಕ್ಕಾಗುವುದಿಲ್ಲ. ಹಾಗೆ ಮಾಡದೆ ಅವರಜನ್ಮಸ್ಥಳದಪಕ್ಕದ ಡಿಸ್ಟ್ರಿಕ್ಟಿಗೆ ಹಾಕಿ. ದೂರದಸ್ಥಳಗಳಿಗೆ ಹಾಕಿದರೆ ವಿಧಿಯಿಲ್ಲದೆ ಹೋಗಿ ನಾಲ್ಕಾರು ತಿಂಗಳು ಇರುತ್ತಾರೆ, ತನ್ನ ಡಿಸ್ಟ್ರಿಕ್ಟಿನ ಹತ್ತಿರವೇ ಇದ್ದರೆ ಊರಿನಿಂದಲಾದರೂ ಕೆಲವು ಸಾಮಾನುಗಳನ್ನು ತರಿಸಿಕೊಂಡು ಹೇಗೋ ಜೀವನ ಮಾಡುತ್ತಾರೆ, ದೂರ ಹಾಕಿದರೆ ರಜಾ ತೆಗೆದುಕೊಂಡು ಹೋಗುವುದು ಕಷ್ಟ. ಅತೃಪ್ತಿಯುಂಟಾದರೆ ಸರಿಯಾಗಿ ಕೆಲಸ ನಡೆಯುವುದಿಲ್ಲ, ಹಿಂದೆ ಈ ವಿಚಾರದಲ್ಲಿ ಸರ್ಕ್ಯುಲರ್ ಹೊರಡಿಸುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದರು. ನೌಕರರ ಸ್ವಂತತಾಲ್ಲೂಕಿಗೆ ಬೇಡ, ಬೇರೆ ತಾಲ್ಲೂಕಿಗೆ ಹಾಕಿ, ಇನ್‌ಫ್ಲುಯನ್ಸ್ ಇರುವವರಿಗೊಂದು ರೀತಿ ಇಲ್ಲದಿರುವವರಿಗೊಂದು ರೀತಿ ಆಗುತ್ತಿರುವುದರಿಂದ ಬಹಳ ಅತೃಪ್ತಿಯಿದೆ ಇದನ್ನು ಒಂದೇ ರೀತಿಯಲ್ಲಿ ಕ್ರಮವಾಗಿ ಮಾಡಿದರೆ ನಿಮ್ಮ ಕೆಲಸವೂ ಸಲೀಸಾಗಿ ನಡೆಯುತ್ತದೆ. Government itself has transferred some of the officers without consulting Heads of Departments.

7 P.M.

Sri T. MARIAPPA.—You are perfectly justified ; but so far as gazetted officers are concerned, the Government alone can transfer and in the interest of public they transfer them. The Chief Secretary puts up the paper and it is the Chief Minister and the Revenue Minister who will do it after consulting the Departmental Heads.

ಶ್ರೀ ಜಿ. ಎನ್. ಪುಟ್ಟಣ್ಣ.—ಪ್ರೊಸೀಜರ್ ನನಗೆ ಗೊತ್ತಿದೆ. ಗೆಜೆಟೆಡ್ ಆಫೀಸರುಗಳನ್ನು ಟ್ರಾನ್ಸ್‌ಫರ್ ಮಾಡುವಾಗ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸನ್ನು ಕನ್‌ಸಲ್ಟ್ ಮಾಡದೆ ಮಾಡುವುದಿಲ್ಲ. ಆದರೆ ಯಾವಾಗಲೂ ಮಾಡುತ್ತಾ ಇಲ್ಲ. ಸಾಮಾನ್ಯವಾಗಿ ಮೈಸೂರು ದೇಶದಲ್ಲಿ ಏನಾಗಿದೆಯೆಂದರೆ, ಯಾವ ಡಿಪಾರ್ಟ್‌ಮೆಂಟಿನಲ್ಲಿಯೇ ಆಗಲಿ, ಯಾವ ಆಫೀಸಿನಲ್ಲಿಯೇ ಆಗಲಿ, ಎರಡು ಮೂರು ಪಾರ್ಟಿಗಳು ಇರುತ್ತವೆ. ಅವನ ಮೇಲೆ ಇವನ ಮೇಲೆ ಅವನು ದ್ವೇಷ ಸಾಧಿಸುತ್ತಿರುತ್ತಾನೆ. ಆನರಬಲ್ ಮಿನಿಸ್ಟರ್ ಮರಿಯಪ್ಪನವರ ಸಂಬಧೀಕನಿದ್ದರೆ, ಅವನು ಬಂದರೆ ಅವನ ಮಾತಿಗೆ ಪ್ರಾಧಾನ್ಯವಿರುತ್ತದೆ. ಬೇಕಾದರೆ I will give you an example.

Sri T. MARIAPPA.—I refute every word of it. In fact, it is the Chief Secretary who puts up all these papers. We do not interfere at all.

Sri G. N. PUTTANNA.—I will show you definitely Government orders, wherein Departmental Heads have not been consulted. Discipline in service has been spoiled. I will pass it on to you.

ಬ್ಲಾಕ್ ಮಾರ್ಕೆಟಿಂಗ್ ವಿಷಯ ಪ್ರಸ್ತಾಪ ಮಾಡುವುದು ಅಗತ್ಯ.

Sri T. MARIAPPA.—Controlled articles ಇದ್ದರೆ black-marketing ವಿಚಾರ ಮಾತನಾಡಿ. Controlled articles ಇಲ್ಲದೆ ಇದ್ದರೆ, black-market ಆಗುವುದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಟೈರ್ಸ್ ಮತ್ತು ಟ್ಯೂಬ್ಸ್ ತೆಗೆದುಕೊಳ್ಳಿ.

ಅಧ್ಯಕ್ಷರು.—ತೀವ್ರ ಮುಗಿಸಿ.

ಶ್ರೀ ಜಿ. ಎನ್. ಪುಟ್ಟಣ್ಣ.—ನಾನು ಯಾವಾಗಲೂ ಒಬಿಡಿಯಂಟ್; ಮುಗಿಸುತ್ತೇನೆ. ಟೈರ್ಸ್ ಮತ್ತು ಟ್ಯೂಬ್ಸ್ ಕಂಟ್ರೋಲ್‌ಇರುವ ಒಬ್ಬ ಆಫೀಸರಿಗೆ ಮೂರು-ನಾಲ್ಕು ಸಾವಿರ ರೂಪಾಯಿ ಕೊಡುತ್ತಾ ಇದ್ದಾರೆ.ಈಗ ಒಂದು ಲಾರಿಟೈರಿಗೆ 600–800 ರೂಪಾಯಿ ಆಗಿದೆ. ಒಂದು ಕಬ್ಬಿಣದ ಗುಳ ತೆಗೆದುಕೊಳ್ಳಿ ; ಅದಕ್ಕೆ ಒಂದೂಕಾಲು ರೂಪಾಯಿ ಇದೆ. ಇದು ಕಂಟ್ರೋಲ್ ಅಲ್ಲವೋ, ಇದು ಬ್ಲಾಕ್‌ಮಾರ್ಕೆಟ್ ಅಲ್ಲವೋ ? ನಿಜಹೇಳಿದ್ದಕ್ಕೆ ಒಂದು ಅಬದ್ಧ ಹೇಳಬೇಡಿ.

ಶ್ರೀ ಟಿ. ಮರಿಯಪ್ಪ.—ಸೊಸೈಟಿಗಳಲ್ಲಿ agricultural quota ದಲ್ಲಿ ತಾವು ಯಥೇಚ್ಛವಾಗಿ ತೆಗೆದುಕೊಳ್ಳಬಹುದು.

ಶ್ರೀ ಜಿ. ಎನ್. ಪುಟ್ಟಣ್ಣ.—Order ಏನೋ magnanimous ಆಗಿದೆ. ಆದರೆ ಸಿಕ್ಕುವುದಿಲ್ಲ. ಶ್ರೀ ಮೂಡ್ಲಗಿರಿಗೌಡರನ್ನು ಕೇಳಿ, ಸಿಕ್ಕುತ್ತದೆಯೋ ಎಂದು.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ರೈತರಿಗೆ ಸಿಕ್ಕುತ್ತದೆ, ಶ್ರೀ ಪುಟ್ಟಣ್ಣನವರಿಗೆ ಸಿಕ್ಕುವುದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ರೈತರಿಗೇ ಸಿಕ್ಕುವುದಿಲ್ಲ. ನಾನು ನಿಮ್ಮ ಮೇಲೆ ಆರೋಪಣೆಮಾಡಬೇಕೆಂದು ಮಾಡುತ್ತಾ ಇಲ್ಲ. ಪೇಪರಿನಲ್ಲಿಯೂ ಇದೂ ಬಂದಿದೆ. ಬ್ಲಾಕ್‌ಮಾರ್ಕೆಟ್ಟಿಗೇ ಹೋಗಬೇಕು.

ಶ್ರೀ ಟಿ. ಮರಿಯಪ್ಪ.—Additional quota ಬಂದಿದೆ. I think all the Co-operative Societies will get it.

ಶ್ರೀ ಜಿ. ಎನ್. ಪುಟ್ಟಣ್ಣ.—ಎಂದು ಬಂದಿದೆ? ಯಾವ ಸೊಸೈಟಿಗಳವರು ಕೊಡುತ್ತಾರೆ? Why have you allowed free sale ? ಸಿಕ್ಕುತ್ತದೆಂದು ಹೇಳಿದಿರಿ. ಪರ್ಮಿಟ್‌ತೆಗೆದುಕೊಂಡರೆ, ಕಬ್ಬಿಣಕೊಡುವುದಿಲ್ಲ. ಮೂರು ತಿಂಗಳಾದಮೇಲೆ ಸೊಸೈಟಿಗಳು ಫ್ರೀ ಸೇಲಿನಲ್ಲಿ ಬ್ಯಾಂಬು ಬಜಾರಿನವರಿಗೆ ಮಾರುತ್ತಾರೆ. ಇದು ಸತ್ಯ.ದೇವರ ಆಣೆಗೂ ನಿಮ್ಮ ಮೇಲೆ ದ್ವೇಷವಿಲ್ಲ; ಆರೋಪಣೆ ಮಾಡುವುದಿಲ್ಲ.ನಮ್ಮ ದೇಶದ ಸ್ಥಿತಿಹೀಗಾದರೆ, ನಿಮಗೆದೇವರು ಕೊಟ್ಟ ಅಧಿಕಾರ ಮಿಸ್‌ಯೂಸ್ ಮಾಡಿದಹಾಗಾಗುತ್ತದೆ. ನಿಮ್ಮ ಅಧಿಕಾರದರ್ಪ ದೇಶಕಾಗಿ.

ಶ್ರೀ ಮಾಲ ಮರಿಯಪ್ಪ (ಸಹಕಾರಶಾಖೆಯ ಮಂತ್ರಿಗಳು).—ಯಾವ ಕಡೆ ಸಿಕ್ಕಲ್ಲ?

ಶ್ರೀ ಜಿ. ಎನ್. ಪುಟ್ಟಣ್ಣ.—ತುಮಕೂರಿನಲ್ಲಿಯೇ ಕೇಳಿ. ಪಾವಗಡದ ಸೊಸೈಟಿ [illegible] ಪ್ರೆಸಿಡೆಂಟರು 6–8–10 ಮೂಟೆ ಷುಗರ್ ಸ್ಮಗಲ್ ಮಾಡಿದ್ದಾರೆಂದು ಹೇಳಿದಿರಲ್ಲ. ಇಂಥವರನ್ನು ಬಲಿ ಹಾಕಿದರೆ, ನಿಮಗೆ ದೇವರು ಒಳ್ಳೆಯದು ಮಾಡುತ್ತಾನೆ. ನಿಮ್ಮ

(ಶ್ರೀ ಜಿ. ಎನ್. ಪುಟ್ಟಣ್ಣ)

ಸರ್ಕಾರದ ಘನತೆ ಹೆಚ್ಚುತ್ತದೆ. ಆರು ತಿಂಗಳ ರಾಗಾಯಿತು ಸೊಸೈಟಿಯೊಳಗೆ 8-10 ಮೂಟೆ ಸಕ್ಕರೆ ಪ್ರೆಸಿಡೆಂಟರಿಂದ ಸ್ಮಗಲ್ ಆಯಿತು ಎಂದು ಹೇಳಿದಿರಿ. ಇದು ಒಂದು ಎಕ್ಸಾಂಪಲ್ ಸಾಕು. ಇವೊತ್ತಿನವರೆಗೂ action ತೆಗೆದುಕೊಂಡಿಲ್ಲ ಇನ್ನೂ ಎಕ್ಸಾಂಪಲ್‌ಗಳನ್ನು ಕೊಡುತ್ತೇನೆ. ಮನಸ್ಸಿನಲ್ಲಿ ಇಟ್ಟುಕೊಳ್ಳಿ; ಇನ್ನು ಹೆಚ್ಚು ಬೇಡ. ಕಬ್ಬಿಣದ ವಿಷಯವಾಗಿ ಹೇಳುತ್ತೇನೆ. Small-Scale Industries ಮಾಡಿದ್ದೀರಿ; ದೇಶದ ಉತ್ಪತ್ತಿ ಜಾಸ್ತಿ ಮಾಡಿ ಎಂದು ಹೇಳುತ್ತೀರಿ. ಅದಕ್ಕೆ ಕಬ್ಬಿಣಬೇಕು. ಕಾಂಗ್ರೆಸ್ಸಿನವರು ಅದನ್ನು ದುರುಪಯೋಗಪಡಿಸಿಕೊಂಡು ಇತರರಿಗೆ ಕೊಡಬೇಡಿ ಎಂದು ಹೇಳುತ್ತಾರೆ. ತುಮಕೂರಿನಲ್ಲಿ ಸಾಮಾನುಗಳನ್ನು ಸಪ್ಲೈಮಾಡ ತಕ್ಕಂಥ ಎರಡು Small-Scale Industries ಇವೆ; ಒಂದು ಶಿವ ಇಂಡಸ್ಟ್ರೀಸ್ ಎಂದು, ಇನ್ನೊಂದು ಪರಶುರಾಮ ಇಂಡಸ್ಟ್ರೀಸ್ ಎಂದು. ಪರಶುರಾಮ ಇಂಡಸ್ಟ್ರೀಸ್ ಗೌಂಡರ್ ಸಮಾಜದ ಒಬ್ಬರದು. ಫಸ್ಟ್ ಕ್ಲಾಸ್ ಕೆಲಸಮಾಡುತ್ತಾನೆ. ಆತ ಒಂದು ನಾಲ್ಕು ಎಚ್.ಪಿ. ಮೋಟಾರಿಗೆ ಪವರ್ ಕೊಡಿ ಎಂದು ಎರಡು ವರ್ಷಗಳಿಂದ ಕೇಳುತ್ತಿದ್ದರೂ, ಇದುವರೆಗೂ ಕೊಟ್ಟಿಲ್ಲ ಇಂಡಸ್ಟ್ರೀಸ್ ಸೂಪರಿಂಡೆಂಟರೂ ರೆಕಮೆಂಡ್ ಮಾಡಿದ್ದಾರೆ. ಅವನಿಗೆ ಕಬ್ಬಿಣವನ್ನು ಕೊಟ್ಟಿಲ್ಲ. ಅವನು ಬೆಂಗಳೂರಿಗೆ ಬರಬೇಕು, ಬ್ಯಾಂಬೂ ಬಜಾರಿನಲ್ಲಿ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಕೊಳ್ಳಬೇಕು. ಆ ಬ್ಲಾಕ್‌ಮಾರ್ಕೆಟ್ ಪ್ರೈಸ್ ಯಾರ ತಲೆಮೇಲೆ ಬೀಳುತ್ತದೆ, ಆಲೋಚನೆಮಾಡಿ. ಅದು ರೈತನ ತಲೆಯ ಮೇಲೆ ಬೀಳುತ್ತದೆ. ಗುಳ ಇಲ್ಲದೆ ರೈತ ಹೇಗೆ ಕೆಲಸಮಾಡುವುದು? ಶಿವ ಇಂಡಸ್ಟ್ರೀಸ್‌ನವರು ಡೆಪ್ಯುಟಿ ಕಮಿಷನರು, ಡೈರೆಕ್ಟರ್ ಕಮಿಷನರು, ಎಲ್ಲಾ ಆಫೀಸರುಗಳನ್ನು ಕರೆದುಕೊಂಡು ಬಂದು ತೋರಿಸಿದ್ದಾರೆ. ಜಪಾನಿನವರು ಅಗ್ರಿಕಲ್ಚರ್ ಸೆಟ್ಟುಗಳನ್ನು ಎಷ್ಟು ಚಮತ್ಕಾರದಿಂದ ಮಾಡುತ್ತಾರೋ ಅಷ್ಟೇ ಚಮತ್ಕಾರದಿಂದ ಇವರೂ ಮಾಡುತ್ತಾರೆ. ಅಷ್ಟು ಚೆನ್ನಾಗಿ ಮಾಡುತ್ತಾರೆ. ಆದರೆ ಅಂಥವರಿಗೆ ಇವೊತ್ತು ಉತ್ತೇಜನವಿಲ್ಲ. ಸ್ಟೀಲ್ ಕಂಟ್ರೋಲರಿಗೆ ಕಾಗದ ಬರೆದೆ; ಗವರ್ನ್‌ಮೆಂಟಿಗೆ ಕಾಗದ ಬರೆದೆ; ಕೃಷ್ಣಮೂರ್ತಿಗೆ ಬರೆದೆ, ಸಪ್ಲೈ ಇಲ್ಲ. ಇದು ಒಳ್ಳೆಯದಲ್ಲ. ಹೇಳಿ, ಹೇಳಿ ಸಾಕಾಗಿ ಹೋಗಿದೆ. ಎಷ್ಟು ಹೇಳಿದರೂ ನೀವು ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ. ಪೋಲೀಸ್ ಡಿಪಾರ್ಟ್‌ಮೆಂಟ್ ಏನಾಗಿದೆಯೆಂದರೆ; ಬಿಗಿಯಿಲ್ಲದೆ 'ಲಾಲೆಸ್' ಆಗಿಹೋಗಿದೆ.

ಶ್ರೀ ಟಿ. ಮರಿಯಪ್ಪ.—ತಮ್ಮ ಅನುಭವದಿಂದ ಹೇಳುವುದನ್ನು ಹೇಳಿ.

ಶ್ರೀ ಜಿ. ಎನ್. ಪುಟ್ಟಣ್ಣ.—ಒಬ್ಬ ರೈತ ಬೆಳೆದಿರತಕ್ಕ ದಿನಸಿ, ಧಾನ್ಯಗಳು, ಬಾಳೆಗೊನೆ, ಅಡಿಕೆಗೊನೆ ನಿಲ್ಲುವಹಾಗೇ ಇಲ್ಲ. ಉದಾಹರಣೆ ಕೊಡುತ್ತೇನೆ. ತುರುವೇಕೆರೆ ತಾಲ್ಲೂಕಿನಲ್ಲಿ ಹೊಸಹಳ್ಳಿ ಎಂಬ ಗ್ರಾಮದಲ್ಲಿ ಒಬ ಬಡರೈತನ ಮನೆಯ ಬಾಗಿಲು ಕಿಟಕಿ ಹಗಲನಲ್ಲಿಯೇ ಕಿತ್ತು ತೆಗೆದುಕೊಂಡು ಹೋದರು. ಪೋಲೀಸಿಗೆ ಕಂಪ್ಲೇಂಟ್ ಹೋಯಿತು.

ಅಧ್ಯಕ್ಷರು.—ಈ ವಿಚಾರ ಆಗಲೇ ಹೇಳಿದಿರಿ.

ಶ್ರೀ ಜಿ. ಎನ್. ಪುಟ್ಟಣ್ಣ.—ಹೋಗಲಿ. ಅಲ್ಲಿಗೆ ಬಿಟ್ಟುಬಿಡುತ್ತೇನೆ. ಮಾಚೇನಹಳ್ಳಿ ಗ್ರಾಮದಲ್ಲಿ ತುರುವೇಕೆರೆ ತಾಲೂಕ ಪೋಲೀಸು ಇನ್‌ಸ್ಪೆಕ್ಟರು ಕುಳಿತುಕೊಂಡು ಅರ್ಬಿಟ್ರೇಷನ್ ಮಾಡಿದ. 40-50 ಕೇಸುಗಳು ಆಗುವಹಾಗೆ ಮಾಡಿದರು. ಪೋಲೀಸು ಇನ್‌ಸ್ಪೆಕ್ಟರನ್ನು ಹತೋಟಿಗೆ ತರಬೇಕು. ಹೊಸ ಐ.ಜಿ.ಪಿ. ಬಂದವರು ಒಳ್ಳೆಯವರು, ಜೋರಾಗಿರುತ್ತಾರೆಂದು ತಿಳಿದುಕೊಂಡಿದ್ದೆವು; ಏಕೋ ಬಹಳ ಸಪ್ಪೆ. ಹಾಗಿದ್ದರೆ ಉಪಯೋಗವಾಗುವುದಿಲ್ಲ. ತಪ್ಪಿತಸ್ಥರನ್ನು ಬಲಿಹಾಕಬೇಕು. ಅಯೋಗ್ಯರನ್ನು ನಿರ್ಬಂಧವಿಲ್ಲದೆ ಇದ್ದರೆ ಪಾಪ; ಯೋಗ್ಯರಮೇಲೆ ಕೈಮಾಡಿದರೆ ಅದು ಪಾಪ.

ಶ್ರೀ ಟಿ. ಮರಿಯಪ್ಪ.—ದುಷ್ಟಶಿಕ್ಷಣ, ಶಿಷ್ಟಪರಿಪಾಲನ.

ಶ್ರೀ ಜಿ. ಎನ್. ಪುಟ್ಟಣ್ಣ.—ಸ್ವಾಮಿ, ಅದನ್ನು ನೀವು ತಿಳಿದುಕೊಂಡದ್ದು ಒಳ್ಳೆಯದು. ಇವೊತ್ತು ನಂಜನಗೂಡು ಕಬೀರಾ ಟೆಕ್ಸ್‌ಟೈಲ್ಸ್ ಯಾವ ಸ್ಥಿತಿಯಲ್ಲಿದೆ? ಇವೊತ್ತು ಯಾವ ಸ್ಥಿತಿಗೆ ಬಂದಿದೆ?

ಶ್ರೀ ಟಿ. ಮರಿಯಪ್ಪ.—ಲಿಕ್ವಿಡೇಟರ್ ಅಪಾಯಿಂಟ್ ಮಾಡಿದ್ದಾರೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಮೂರು ಸಾವಿರ ಜನ ಕೂಲಿಗಾರರ ಮನೆ ಹಾಳಾಗಿ ಹೋಯಿತು. ಡಿಸೈಡ್ ಮಾಡಿಲ್ಲ.

ಶ್ರೀ ಟಿ. ಮರಿಯಪ್ಪ.—ಹೈಕೋರ್ಟಿನಲ್ಲಿದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಅದನ್ನು ಹೇಳುತ್ತಾ ಇಲ್ಲ. ನನಗೂ ಸ್ವಲ್ಪ ಗೊತ್ತಿದೆ. R.M.D.C. ಕೇಸಿನಲ್ಲಿ ಹೇಳಿದಹಾಗೆ, *sub-judice* ಎಂದು ಹೇಳಬೇಡಿ. ಅಲ್ಲಿರತಕ್ಕ valuable articles ಸ್ಮಗಲ್ ಆಗುತ್ತಾ ಇವೆ. ಲಿಕ್ವಿಡೇಷನ್ ಮಾಡಿದರೆ ಎಷ್ಟು ಬರುತ್ತದೆ?

ಶ್ರೀ ಟಿ. ಮರಿಯಪ್ಪ.—ಲಿಕ್ವಿಡೇಟರ್ ಚಾರ್ಜಿನಲ್ಲಿರುವುದು, ಗವರ್ನ್‌ಮೆಂಟ್ ಚಾರ್ಜಿನಲ್ಲಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—University is not under our control ಎಂದು Education Minister ಹೇಳಿದರು. Whenever you want, you have control and whenever there is no necessity, you have no control. ಅದಕ್ಕೆ ಯಾರು ಜವಾಬ್ದಾರರು? Who appointed the Liquidator?

Sri T. MARIAPPA.—High Court.

Sri G. N. PUTTANNA.—Why don't you move the High Court? Things are being smuggled. The Liquidator is in Bangalore. Things have been smuggled there. You take the management. ಕೊಡಿ ನೀವು ನೋಟೀಸ್.

Sri T. MARIAPPA.—You are free to come and bid.

ಶ್ರೀ ಜಿ. ಎನ್. ಪುಟ್ಟಣ್ಣ.—ದಯಮಾಡಿಟ್ಟು ಜಾಗ್ರತೆ ಮಾಡಿಸಿ. ಕ್ಯಾಪಿಟಲ್ ಕೊಡುತ್ತೇವೆ. ವರ್ಕ್ ಸ್ಟಾರ್ಟ್ ಮಾಡೋಣ. ಮೊದಲೇ ಹೇಳಿದ್ದೇನೆ. Please do not reply or avoid for the sake of avoiding. I am not saying for the sake of criticising. Take the information for what it is worth. I have no hatred for any Congress member. But our country should not suffer at the hands of an inefficient Government or incapable Government. That is my intention in furnishing the information.

ಸ್ವಾಮಿ ಇನ್ನೊಂದು ವಿಷಯ. ಮಂಗಳೂರಿನಲ್ಲಿ ಒಂದು ಪಾಲಿಟೆಕ್ನಿಕ್ ಸ್ಕೂಲಿದೆ. ಅಲ್ಲಿ ಒಬ್ಬರು ಪ್ರಿನ್ಸಿಪಾಲ್ ಇದ್ದರು. ಅಲ್ಲಿಂದ ಎಷ್ಟೋ ಪದಾರ್ಥಗಳನ್ನು smuggle ಮಾಡಿಕೊಂಡು ಹೋಗಿದ್ದಾರೆ, ಎಷ್ಟೋ ಅನ್ಯಾಯವಾಗಿದೆ. ತಕ್ಷಣ ಇದನ್ನು ತನಿಖೆ ಮಾಡಿ ಎಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಆದರೆ ಅದೇನಾಯಿತೋ ಸಮಾಚಾರವೇ ಇಲ್ಲ. Probably he has been transferred to Belgaum or some other place. I have not mentioned his name. The paper has gone out, I do not know whether the paper has been put up or shut up. It must come to light. If Government do not take drastic action against the person who has smuggled the country. . . .

A MEMBER.-'Smuggled the country?' (*Laughter*).

Sri G. N. PUTTANNA.—'Smuggled the country' means smuggling the resources of the country. It is a figure of speech. ಮಾನ್ಯ ಸದಸ್ಯರು Grammar ಮರೆತಿರುವಂತೆ ಕಾಣುತ್ತದೆ.

ಮೊನ್ನೆ ಕಡಮೆ ಸಂಬಳದ ನೌಕರರಿಗೆ ಸರ್ಕಾರದವರು ಐದು ರೂಪಾಯಿ ಪರಿಹಾರವೆಂದು ಕೊಟ್ಟಿದ್ದಾರೆ. ಹಣ ಕೊಡುವುದಕ್ಕೆ ಬದಲು ಸರ್ಟಿಫಿಕೇಟ್ ಕೊಡುತ್ತಾರಂತೆ ! ಅದರ ಜೊತೆಗೆ ಸ್ವಲ್ಪ ಉಪ್ಪನ್ನು ಕೊಟ್ಟುಬಿಟ್ಟರೆ, ಬೆಳಗ್ಗೆ ಎದ್ದು ಆ ಕಾಗದಕ್ಕೆ ಉಪ್ಪು ಬಳಿದು ನೆಕ್ಕುವುದಕ್ಕೆ ಸರಿಹೋಗುತ್ತದೆ (ನಗು !) ಬಡವರಿಗೆ ಹೀಗೆ ಮಾಡುವುದು ಸರಿಯಲ್ಲ. . . .

ಶ್ರೀ ಟಿ. ಮರಿಯಪ್ಪ.—ಸಭೆಯ ಗೌರವವನ್ನು ಗಮನಿಸಿ ಮಾತನಾಡಿದರೆ ಒಳ್ಳೆಯದು.

ಶ್ರೀ ಜಿ. ಎನ್. ಪುಟ್ಟಣ್ಣ.—ನನ್ನ ಗೌರವವನ್ನು ಮೊದಲು ನಾನು ತಿಳಿದು ಮಾತನಾಡುತ್ತಿದ್ದೇನೆ.

Sri K. S. SURYANARAYANA RAO.—(Mysore City).—The House is greater than the individual.

Sri G. N. PUTTANNA.—The country is greater than the House !

ಸ್ವಾಮಿ, ತಾವು ಈ ಸಭೆಯ ಕಚೇರಿಯನ್ನು ನಡೆಸುತ್ತಿದ್ದೀರಿ ; ಈ ಕಚೇರಿಯ ಸಿಬ್ಬಂದಿಯವರು ಬಹಳ ಕಷ್ಟಪಟ್ಟು ಕೆಲಸಮಾಡುತ್ತಿದ್ದಾರೆ. ಅಧಿವೇಶನ ನಡೆಯುವ ಕಾಲದಲ್ಲಂತೂ ಬೆಳಗಿನಿಂದ ರಾತ್ರಿಯವರೆಗೂ ಕೆಲಸಮಾಡಬೇಕಾಗುತ್ತದೆ. ಹೀಗಿದ್ದರೂ ಅವರಿಗೆ ಯಾವ ಅಲೋಯನ್ಸನ್ನು ಕೊಡುತ್ತಿಲ್ಲ. ಇದನ್ನು ಅನೇಕ ವೇಳೆ ಹೇಳಿದ್ದೇವೆ. ನಮಗೆ ಕೊಡುವ ಅಲೋಯನ್ಸ್‌ನಲ್ಲಿ ಒಂದೆರಡು ರೂಪಾಯಿ ಕಡಮೆ ಯಾದರೂ ಮಾಡಿ ಅವರಿಗೆ ಅಲೋಯಸ್ ಕೊಡಿ. ಈ ವಿಷಯದಲ್ಲಿ ಅಧ್ಯಕ್ಷರು ಏಕೆ ಸುಮ್ಮನಿದ್ದಾರೋ ಗೊತ್ತಿಲ್ಲ.. ....

ಅಧ್ಯಕ್ಷರು.—ಇದು ಆಗಲೇ ತೀರ್ಮಾನವಾಗಿದೆ.

ಶ್ರೀ ಜಿ. ಶಿವಪ್ಪ.—ನೀವು ಮಾಡಿರುವುದು ಗೊತ್ತಿದೆ, ಅದಕ್ಕೇ ಅವರು ಈ ವಿಷಯವನ್ನು ಮಾತನಾಡುತ್ತಿದ್ದಾರೆ. He wants to take the credit.

Sri T. MARIAPPA.—Let him take the credit.

Sri G. N. PUTTANNA.—I do not want such credit. It is a sin to say like that.

Dearness allowance, high price allowance ಎಂದು ಕೊಡುತ್ತಿದ್ದಾರೆ. ಬೆಲೆಗಳು ಹೆಚ್ಚಿವೆ ಎಂದು ಇದನ್ನು ಕೊಡುವುದು. ಎಲ್ಲರಿಗೂ ಬೆಲೆ ಒಂದೇ ರೀತಿ ಹೆಚ್ಚಿದೆ. ಹೀಗಿರುವಾಗ 50 ರೂಪಾಯಿ ಸಂಬಳದವರಿಗೇ ಒಂದು ರೇಟು, ನೂರು ರೂಪಾಯಿ ಸಂಬಳದವರಿಗೇ ಒಂದು ರೇಟು, ಮುನ್ನೂರು ರೂಪಾಯಿ ಸಂಬಳದವರಿಗೆ ಒಂದು ರೇಟು ಏಕೆ ಕೊಡಬೇಕು ? ಒಂದೇ ಮಟ್ಟದಲ್ಲಿ ಕೊಡಲಿ. ನಿಜವಾಗಿ ನಮ್ಮ ಸರ್ಕಾರಕ್ಕೆ ಶಕ್ತಿ ಇದ್ದರೆ, ಅವರು ಹೇಳುತ್ತಿರುವ ಸಮಾಜವಾದದಲ್ಲಿ ನಂಬಿಕೆ ಇದ್ದರೆ, ದೇಶಭಕ್ತಿ ಇದ್ದರೆ ಅದನ್ನು ಮೊದಲು ಸರ್ಕಾರಿ ನೌಕರವರ್ಗದಲ್ಲಿ ಜಾರಿಗೆ ತರಲಿ. ಸರ್ಕಾರಿ ನೌಕರರ ಸಂಬಳ 100 ರೂಪಾಯಿಗೆ ಕಡಮೆ ಇರಬಾರದೆಂದು ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರೂ ಹೇಳುತ್ತಿದ್ದರು. ಹಾಗೇ ಮಾಡಲಿ. ಕನಿಷ್ಠ ಸಂಬಳ ನೂರು ರೂಪಾಯಿಗೆ ಕಡಮೆ ಇರಬಾರದು ಪರಮಾವಧಿ ಸಂಬಳ ಸಾವಿರ ರೂಪಾಯಿಗಿಂತ ಹೆಚ್ಚಿರಬಾರದು. ಒಂದು ಸಾವಿರ ರೂಪಾಯಿ ಸಂಬಳ ಬಂದರೆ ಯಾರಾದರೂ ಸುಖವಾಗಿ ಜೀವನ ಮಾಡಬಹುದು. ಸಾವಿರ ರೂಪಾಯಿಗಿಂತ ಜಾಸ್ತಿ ಬರುವವರಿಗೆ ಖೋತಾ ಮಾಡಿದರೆ, ನೂರು ರೂಪಾಯಿಗಿಂತ ಕಡಮೆ ಬರುವವರಿಗೆ ಕೊಡಬಹುದು......

ಶ್ರೀ ಟಿ. ಮರಿಯಪ್ಪ.—ನೀವು ಇಷ್ಟು ಸರ್ವಿಸ್ ಮಾಡಿದ್ದರೂ ಇಷ್ಟು ಲೆಕ್ಕ ತಿಳಿಯಲಿಲ್ಲವಲ್ಲ ! ನೀವು ಹೇಳಿದಂತೆ ಮಾಡಿದರೆ ಸಾಧ್ಯವಾಗುವುದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ನನಗೆ ಗೊತ್ತಿದೆ, ಸಾವಿರ ರೂಪಾಯಿ ಮೇಲೆ ತೆಗೆದುಕೊಳ್ಳುವವರು ಹೆಚ್ಚು ಜನರಿಲ್ಲವೆಂದು ಹೇಳುತ್ತೀರಿ. ಆದರೆ, ಇದು ಒಂದು ತತ್ವಕ್ಕೆ ಸಂಬಂಧಪಟ್ಟದ್ದು. ಅಲ್ಲದೆ, ಸಿಬ್ಬಂದಿಯನ್ನು ಬಹಳ ಹೆಚ್ಚಾಗಿಟ್ಟುಕೊಂಡಿದ್ದೀರಿ. ಇದನ್ನು ಕಡಮೆ ಮಾಡಬೇಕು. ಈ ವಿಷಯವನ್ನು ಶ್ರೀಮಾನ್ ಕೆ. ಎಫ್. ಪಾಟೀಲ್ ಅವರಿಗೆ ಹೇಳಿದೆ, ಅವರೂ ಒಪ್ಪಿಕೊಂಡರು. ಮೈಸೂರು ಗೌರ್ನಮೆಂಟ್ ರೋಡ್ ಟ್ರಾನ್ಸ್‌ಪೋರ್ಟ್‌ನಲ್ಲಿ ಹೆಚ್ಚು ಸಿಬ್ಬಂದಿ ಇದೆ, ಅದನ್ನು ಕಡಮೆ ಮಾಡುತ್ತೇವೆ ಎಂದು ಅವರು ಹೇಳಿದರು. ಸರ್ಕಾರ ನಡೆಸುತ್ತಿರುವ ಯಾವ ಕಾರ್ಖಾನೆಯನ್ನು ನೋಡಿದರೂ ಅಲ್ಲಿ ಸಿಬ್ಬಂದಿ ಹೆಚ್ಚು, ಅಗತ್ಯವಾದುದಕ್ಕಿಂತ. ಪೋರ್ಸಲೀನು ಕಾರ್ಖಾನೆ ತೆಗೆದುಕೊಳ್ಳಿ, ಅಲ್ಲಿಯೂ ಮೂಗಿಗಿಂತ ಮೂಗುತಿ ಭಾರ ಎನ್ನುವ ಹಾಗೆ ಉತ್ಪತ್ತಿಗಿಂತ ಸಿಬ್ಬಂದಿ ಖರ್ಚು ಹೆಚ್ಚಾಗಿದೆ. ನೋಡಿ, Top heavy Establishment and unnecessary expenditure. ಅದಕ್ಕೇ ಅದರ ಮೇಲೆ ಹಾಕಿರುವ ಹಣಕ್ಕೆ ತಕ್ಕ ಪ್ರತಿಫಲ ಬರುತ್ತಿಲ್ಲ, ನಷ್ಟವಾಗುತ್ತಿದೆ.

ಶ್ರೀ ಟಿ. ಮರಿಯಪ್ಪ.—ಇದುವರೆಗೆ ಅದನ್ನು ಬಡಾವಣೆ ಮಾಡುತ್ತಿದ್ದೆವು. ಇದು Expansion period. Now, we have reached the maximum production. You will see in the next year we will have profits. Take other industries.

ಶ್ರೀ ಜಿ. ಎನ್. ಪುಟ್ಟಣ್ಣ.—ನಾನು ಮೊದಲೇ ಹೇಳಿದ್ದೇನೆ, ನೀವು ಮರಳಲ್ಲಿ ಎಣ್ಣೆ ತೆಗೆಯುವ ಶಕ್ತಿಯುಳ್ಳವರು ಎಂಥಾ. ಆದರೂ ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ವಿಷಯವನ್ನು ತೆಗೆದುಕೊಳ್ಳಿ. It is a waste.

ಶ್ರೀ ಟಿ. ಮರಿಯಪ್ಪ.—ಮಿತವ್ಯಯಕ್ಕೆ ಅವಕಾಶವಿದೆ ಎಂದು ಹೇಳಿದರೆ ಒಪ್ಪುತ್ತೇವೆ. That is the reason why a Resources Committee is going to be appointed.

Sri U. M. MADAPPA.—If you take the receipts and the working costs, I think you will get only about two lakhs in Industries......

ಶ್ರೀ ಜಿ. ಎನ್. ಪುಟ್ಟಣ್ಣ.—ಯಾವುದೇ ಸರ್ಕಾರಿ ಕಾರ್ಖಾನೆಯನ್ನು ತೆಗೆದುಕೊಂಡರೂ ಬಹಳ leakage and wastage ಇದೆ. ಯಾರಾದರೂ ಮಂತ್ರಿಗಳು ಇವರಿಗೆ ಕೆಲಸ ಕೊಡಿ, ಅವರಿಗೆ ಕೆಲಸ ಕೊಡಿ ಎಂದು ಟೆಲಿಫೋನ್ ಮಾಡಿದರೆ ಸಾಕು, ಅಗತ್ಯವಿರಲಿ, ಇಲ್ಲದಿರಲಿ ನಾಲ್ಕು ಜನರನ್ನು ನೇಮಕ ಮಾಡುತ್ತಾರೆ.

ಶ್ರೀ ಟಿ. ಮರಿಯಪ್ಪ.—ಹಾಗೆಲ್ಲ ಮಾಡುವುದಿಲ್ಲ. Why can't you pass on the information ?

Sri G. N. PUTTANNA.—If you want, I will tell you the names also. ನಾಳೆ ಬೆಳಿಗ್ಗೆ ಬೇಕಾದರೆ ಹೆಸರುಗಳನ್ನು ಕೊಡುತ್ತೇನೆ.

ಹಿಂದೆ ನಮ್ಮ ಪೂರ್ವಿಕರ ಕಾಲದಲ್ಲಿ ಮುರಿಯದ ಕೋಲು, ಹರಿಯದ ಬಟ್ಟೆ ಕೊಡಿ ಎಂದು ಮಹಾರಾಜರನ್ನು ಕೇಳಿದ್ದರಂತೆ. ಇದರ ಅರ್ಥವೇನೆಂದರೆ ಯಾವಾಗಲೂ ಶಾಶ್ವತವಾಗಿರುವುದನ್ನು ಕೊಡಿ ಎಂದು. ಮಕ್ಕಳು ಮೊಮ್ಮಕ್ಕಳು ವಂಶಪಾರಂಪರ್ಯವಾಗಿ ಬರುವುದನ್ನು ಕೊಡಿ ಎಂದು ಕೇಳುವುದು. ಪಟೇಲ ಶ್ಯಾನುಭೋಗರ ಕೆಲಸ ಇಂಥಾದ್ದು. ಇಂಥ ಪಟೇಲ ಶ್ಯಾನುಭೋಗರ ಹುದ್ದೆಗಳನ್ನು ತೆಗೆಯಿರಿ ಎಂದು ಹೇಳುತ್ತಿದ್ದಾರೆ, ತೆಗೆಯುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಇದರ ಸಂಬಂಧವಾಗಿ ಬಿಲ್ ಕೂಡ ತಯಾರು ಮಾಡುತ್ತೇವೆಂದು ಹೇಳುತ್ತ ಬಂದಿದ್ದಾರೆ. ಯಾವಾಗ ಆ ಬಿಲ್ಲನ್ನು ತರುತ್ತಾರೋ ಗೊತ್ತಿಲ್ಲ. ಜಾಗ್ರತೆ ಅದನ್ನು ತಂದು introduce ಮಾಡಬೇಕು.

ಶ್ರೀ ಜಿ. ಶಿವಪ್ಪ.—Introduce ಆಗಿದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಜಾಗ್ರತೆ ಸಭೆಯ ಮುಂದೆ ತಂದು ತೀರ್ಮಾನವಾಗಲಿ.

ಶ್ರೀ ಟಿ. ಮರಿಯಪ್ಪ.—ಅದು ಕಾನೂನಾದರೆ, ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಆ ಹೆಚ್ಚು ಖರ್ಚನ್ನು ಹೇಗೆ meet ಮಾಡುವುದು ಹೇಳಿ.

ಶ್ರೀ ಜಿ. ಎನ್. ಪುಟ್ಟಣ್ಣ.—ಆ ಮಸೂದೆ ನಮ್ಮ ಮುಂದೆ ಬರಲಿ, ಹೇಳುತ್ತೇನೆ. ಒಂದು ಕಾಸು ಪರಿಹಾರವನ್ನೂ ಕೊಡಬೇಡಿ.

ಇನ್ನೊಂದು ವಿಷಯವನ್ನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಹತ್ತು ಹದಿನಾಲ್ಕು ಕೋಮುಗಳನ್ನು ಹಿಂದುಳಿದ ವರ್ಗಕ್ಕೆ ಸೇರಿಸಿಲ್ಲ. ಅವರ ವರದಿಯಲ್ಲಿ ಈ ವಿಷಯ ಬರೆದಿಲ್ಲ. ನಾನು ನಾಳೆ ಅವರಿಂದ ಓಟು ಪಡೆಯುವುದಕ್ಕಾಗಿ ಹೇಳುತ್ತಿಲ್ಲ, ಈ ಕೋಮುಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸದಿದ್ದರೆ ಅವರಿಗೆ ಬಹಳ ಕಷ್ಟವಾಗುತ್ತದೆ.

Sri T. MARIAPPA.—You are entitled to approach the Committee. You can write a letter to the Committee and draw their attention.

ಶ್ರೀ ಜಿ. ಎನ್. ಪುಟ್ಟಣ್ಣ.—ಕಾಲೇಜುಗಳ ವಿಷಯ ಹೇಳಿದರೆ ನಮ್ಮ ವಿದ್ಯಾಮಂತ್ರಿಗಳು 'University is an autonomous body or monotonous body, our hands are tied up and we cannot take' ಎಂದು ಹೇಳಿಬಿಡುತ್ತಾರೆ. That I do not like. ತುಮಕೂರು ಫಸ್ಟ್‌ಗ್ರೇಡ್ ಕಾಲೇಜಿನ ವಿಚಾರ: ದೊಡ್ಡಿಯಲ್ಲಿ ದನಗಳನ್ನು ಕೂಡ ಹಾಗೆ ಕೂಡುವುದಿಲ್ಲ, ಹಾಗೆ ಆ ಕಾಲೇಜಿನಲ್ಲಿ ಹುಡುಗರನ್ನು ಕೂಡಿಸುತ್ತಾರೆ ಒಂದೊಂದು ಕೊಠಡಿಯಲ್ಲಿಯೂ, ಬೆಳಗ್ಗೆ ಏಳೂವರೆಯಿಂದ ಹಿಡಿದು ಸಾಯಂಕಾಲ ಆರು ಗಂಟೆಯ ವರೆಗೂ ತರಗತಿಗಳನ್ನು ಮಾಡುತ್ತಾರೆ. ಈ ವಿಷಯವನ್ನು ಶ್ರೀಮಾನ್ ಮೂಡಲಗಿರಿಗೌಡರವರು ಹೇಳಿರುವುದನ್ನು ನೋಡಿದರೆ ಅವರನ್ನು ನಾನು ಅಭಿನಂದಿಸುತ್ತೇನೆ. ಕಾಂಗ್ರೆಸ್ ಪಕ್ಷದಲ್ಲಿರುವ ಅವರಿಗೆ ಈಗ ದೇವರು ಒಳ್ಳೆಯ ಬುದ್ಧಿ ಕೊಟ್ಟಿರುವಂತೆ ಕಾಣುತ್ತದೆ. ಇನ್ನು ಷೆಡ್ಯೂಲ್ ಕಾಸ್ಟ್ ವಿಚಾರ ನೋಡಬೇಕು. ಈ ವರ್ಗದಲ್ಲಿ ಎಷ್ಟೋ ಜನರನ್ನು ಸೇರಿಸುವುದನ್ನು ಬಿಟ್ಟುಬಿಟ್ಟಿದ್ದಾರೆ. ಆದಿಕರ್ಣಾಟಕ, ಆದಿದ್ರಾವಿಡ ಜಾತಿಯವರನ್ನು ಅಷ್ಟೇ ಗಣನೆಗೆ ತೆಗೆದುಕೊಂಡಿದ್ದಾರೆಯೇ ? ಆದಿಕರ್ಣಾಟಕ ಆದಿದ್ರಾವಿಡ ಇವರನ್ನು ಬಿಟ್ಟು ಬುಡಬುಡಿಕೆ, ಗೊಂಬೇರಾಯ ದೊಂಬ, ಸೋಲಿಗ, ಕಾಡುಗೊಲ್ಲ, ಕಾಡುಕುರುಬ, ದೊಂಬಿದಾಸ, ಸಿಳ್ಳೇಕ್ಯಾತ ಗೋಣಿಗ ಇನ್ನು ವಗೈರೆ ಯವರಿಗೆ ಏನ ದರೂ ಜಮೀನು ಕೊಟ್ಟಿದ್ದಾರೆಯೇ ?

ಮಂತ್ರಿಗಳು ಹೋದ ಕಡೆಯಲ್ಲಿ ಈ ವಿಷಯವನ್ನು ವಿಚಾರಿಸಿದ್ದಾರೆಯೇ ? ಕೆಲವು ಕಡೆಗೆ ಆದಿಕರ್ಣಾಟಕರಿಗೆ ಮಂಜೂರಾದ ಜಮೀನನ್ನು ಬೇರೆಯವರು ಬರೆಸಿಕೊಂಡು ರಿಜಿಸ್ಟರ್ ಮಾಡಿಸಿಕೊಂಡ ಉದಾಹರಣೆಗಳಿವೆ. ಇಂಥಿಂಥ ಕೇಸಿನಲ್ಲಿ ಈ ರೀತಿ ಮಾಡಿದ್ದಾರೆಂದು ತಿಳಿಸಿದ್ದರೂ ಕೂಡ ಶ್ರೀಮಾನ್ ರಾಚಯ್ಯನವರಾಗಲಿ, ಡೆಪ್ಯುಟಿ ಕಮಿಷನರ್ ಅವರಾಗಲಿ ಏನೂ action ತೆಗೆದುಕೊಂಡಿರುವುದಿಲ್ಲ. ರಿಮೈಂಡರ್ ಕಳಿಸಿದರೆ ಏನೇನೂ ಆಗಿಲ್ಲ. ಆದುದರಿಂದಲೇ ಬಡವರು ಜಮೀನು ಇಲ್ಲದೆ ಕಷ್ಟ ಅನುಭವಿಸುತ್ತಿದ್ದಾರೆ. ಲಂಬಾಣಿ ದೊಂಬಿದಾಸರ ಬಗ್ಗೆ ಏನೇನು ಮಾಡಿದ್ದೀರಿ ಹೇಳುತ್ತೀರಾ ? ಚುನಾವಣೆಗಳಲ್ಲಿ ಓಟು ಸಂಪಾದಿಸುವುದಕ್ಕೆ ಏನೇನು ಬೇಕೋ ಅಷ್ಟನ್ನು ಮಾತ್ರ ಮಾಡುತ್ತಿದ್ದೀರಿ. ಈ ಬಡ ಅಜ್ಞ ಜನರು ಕಾಂಗ್ರೆಸ್ಸಿನ ಮೇಲೆ ನಂಬಿಕೆಯಿಟ್ಟು ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ಕಾಂಗ್ರೆಸ್ಸಿಗರಿಗೆ ಚುನಾವಣೆಯಲ್ಲಿ ಓಟು ಕೊಡುತ್ತಿದ್ದಾರೆ. Vote catching policy ಇಟ್ಟುಕೊಂಡಿದ್ದೀರಿ. ದೇಶೋದ್ಧಾರದ ಕಾರ್ಯ ಏನು ಮಾಡಿದ್ದೀರಿ ? ಮಹಾರಾಜರ ಹತ್ತಿರ ಹೋಗಿ ಪ್ರಮಾಣವಚನ ತೆಗೆದುಕೊಳ್ಳುತ್ತೀರಿ. ಆದರೆ ಅನ್ಯಾಯದ ಕೆಲಸಗಳನ್ನು ಮಾಡುತ್ತಿದ್ದೀರಿ. ಈ ಸೋಲಿಗ, ದೊಂಬ, ಕಾಡುಗೊಲ್ಲ ಇವರಲ್ಲಿ ಒಬ್ಬನಾದರೂ ಗ್ರ್ಯಾಜ್ಯುಯೇಟ್ ಆದವನು ಇದ್ದಾನೆಯೇ ? ಆದಕಾರಣ ಈ ಜನರ ಬಗ್ಗೆ ಏನಾದರೂ ಸಹಾಯ ಮಾಡಬೇಕೆಂದು ಹೇಳುತ್ತೇನೆ

ಇನ್ನೊಂದು ವಿಷಯ. ನೀವು ಕಾಂಗ್ರೆಸ್ ಸೆಷನ್ ಒಳ್ಳೇ ಫಸ್ಟ್ ಕ್ಲಾಸ್ ಆಗಿ ಮಾಡುತ್ತೀರಿ. It is a request. I am not criticising. ಕಾಂಗ್ರೆಸ್ಸಿ

ಗಾಗಿ ಬೇಕಾದಷ್ಟು ದುಡ್ಡು ಖರ್ಚು ಮಾಡಿ ರಸ್ತೆ ತಯಾರಿಸಿದ್ದೀರಿ. ಕಾಂಗ್ರೆಸ್ ಸೆಷನ್ನಿಗೆ ಬರುವ ಜನರ ಟೆಂಪರರಿ ವಸತಿ ಸೌಕರ್ಯಕ್ಕಾಗಿ 25 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಆದರೆ ಬಡವರ ಬಗ್ಗೆ ಏನು ಮಾಡಿದ್ದೀರಿ ?

ಅಧ್ಯಕ್ಷರು.—ಈ ವಿಷಯ ಇಲ್ಲಿ ಪ್ರಸ್ತಾಪ ಮಾಡಲು ಬರುವುದಿಲ್ಲ.

ಶ್ರೀ ಜಿ. ಎನ್ ಪುಟ್ಟಣ್ಣ.—ಹಾಗಾದರೆ ಅದನ್ನು ಹೇಳುವುದಿಲ್ಲ.ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಹಾವು ಕೊಂದು ಹದ್ದಿಗೆ ಹಾಕಬಾರದು. ಟ್ಯಾಕ್ಸ್ ಬಗ್ಗೆ ಈಗಾಗಲೇ ಕೆಲವು ವಿಷಯಗಳನ್ನು ಹೇಳಿದ್ದೇನೆ. ಇನ್ನೂ ಹೇಳಬೇಕಾದುದು ಬೇಕಾದಷ್ಟಿದೆ. ಆದರೆ ಈಗ ವೇಳೆ ಇಲ್ಲ. ಡಿಮ್ಯಾಂಡುಗಳ ಮೇಲೆ ನಡೆಯುವ ಚರ್ಚೆಯ ಕಾಲದಲ್ಲಿ ಹೇಳುತ್ತೇನೆ. ರಾಜ್ಯದ ಉತ್ಪತ್ತಿ ಜಾಸ್ತಿಯಾಗತಕ್ಕಂಥ resources ಅನ್ನು improve ಮಾಡಬೇಕು. Leakages ಅನ್ನು stop ಮಾಡಬೇಕು. ದಯವಿಟ್ಟು ನಾನು ಹೇಳುವುದನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ನಾನು ಹೇಳುವುದರಲ್ಲಿ ಏನಾದರೂ ಒಂದು ವೇಳೆ ತಪ್ಪಿದ್ದರೆ ದಯವಿಟ್ಟು ತಿಳಿಸಿ, ಸರಿಪಡಿಸಿಕೊಳ್ಳುತ್ತೇನೆ; ತಪ್ಪು ಇದ್ದರೆ ಒಪ್ಪಿಕೊಳ್ಳುತ್ತೇನೆ. ನಾನು ಮಾತನಾಡುವುದಕ್ಕೋಸ್ಕರ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ವನ್ನು ಮುಗಿಸುತ್ತೇನೆ.

Mr. SPEAKER.—So far, nine members have taken part in the debate during the last three days for 11 hours and 21 minutes. Out of that, the P.S.P. members have taken 5 hours and 20 minutes, the Congress 4 hours and 43 minutes and the others, 1 hour and 18 minutes.

The House will now adjourn and meet again tomorrow at 1 P.M.

---

*The House adjourned at Thirty Minutes past Seven of the Clock to meet again at One of the Clock on **Friday**, the 18th March 1960.*